# ಅಪರಂಜಿ

ತಿಳಿನಗೆಯ ಕಾರಂಜಿ

ಆಗಸ್ಟ್ - 2016



ಆಕಳಿಕೆಗೆ ಏನು ಕಾರಣ ಎಂದು ವಿಜ್ಞಾನಿಗಳಿಗೂ ಸರಿಯಾಗಿ ಗೊತ್ತಿಲ್ಲವಂತೆ. ಆದರೆ ನಮಗೆ ಈಗೇಕೆ ಆಕಳಿಕೆ ಬರುತ್ತಿದೆ ಎಂದು ಗೊತ್ತಿದೆ ಅಲ್ವೆ?



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 33
ಸಂಚಿಕೆ - 11
ಆಗಸ್ಟ್ - 2016

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ:ರೂ. 750/-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

## *ಈ ಸಂಚಿಕೆಯಲ್ಲಿ .....*

| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ಅಪ್ರಿಯ ಸತ್ಯಗಳು | **ಶಿವಕುಮಾರ್** | 6 |
| ನಾನು ಕಳೆದುಕೊಂಡ... | **ಜಯಣ್ಣ** | 9 |
| ಒನಕೆ ಭಾಗ್ಯ | **ಜಿ.ವಿ. ನಿರ್ಮಲ** | 12 |
| ಮೌಲ್ಯಾಧಾರಿತ ಮಾಪನ | **ಲಲಿತಾ ಧ್ವಜನ್** | 18 |
| ತುಂತುರು | **ದಂನಾಶ** | 22 |
| ಕೈ ತುತ್ತು | **ಬೇಲೂರು ರಾಮಮೂರ್ತಿ** | 24 |
| ನಮ್ಮೂರು ಮತ್ತು .... | **ಗುಂಡುರಾವ್ ದೇಸಾಯಿ** | 26 |
| ಕೇಶ ಮತ್ತು ನಯನ | **ಸೂರಿ ಹಾರ್ದಳ್ಳಿ** | 33 |
| ಸಂಡಿಗೆ ರುಚಿ! | **ಹಾ.ಮ್ಯೆ. ಸೂರಿ** | 37 |
| ಶವ...ಶವ...ಶಿವ...ಶಿವ | **ಎಂ.ಕೆ. ಭಾಸ್ಕರ ರಾವ್** | 38 |

**ಮುಖಪುಟ ವ್ಯಂಗ್ಯಚಿತ್ರ - ನಾಗನಾಥ್**

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003. email: koravanji42@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

• ಪ್ರಕಾಶ್



‘ಹೊರನಡೆ ಬ್ರಿಟನ್’ ಎಂದ ಯೂರೋ ಒಕ್ಕೂಟ – ಶೀರ್ಷಿಕೆ

***• ಮಹಾತ್ಮರು ನಸುನಕ್ಕರಂತೆ !!***

★★★

‘ಬೌದ್ಧಿಕ ಆಸ್ತಿ ಹಕ್ಕು ಜಾಗೃತಿ ಅಗತ್ಯ’ – ಹೇಳಿಕೆ

***• ಅಂಗಂದ್ರೇನ್ ಸಾ !!***

★★★

ನಕಲಿ ಜ್ಯೋತಿಷಿಗಳಿಗೆ ಮಹಿಳೆಯರಿಂದ ಏಟು – ಪತ್ರಿಕೆ

***• ಅವರ ಹಣೆಬರಹ !!***

★★★

007 ನೋಂದಣಿ ಸಂಖ್ಯೆ ಕಾರಿಗೆ ಸಚಿವರ ನಕಾರ – ಸುದ್ದಿ

***• ಏಳರ ಕಾಟ ಅಂದರೆ ಇದೇ ಇರಬೇಕು !!***

★★★

ಬ್ರೆಕ್ಸಿಟ್ ಬಗ್ಗೆ ಅತಿಯಾದ ಆತಂಕ ಬೇಡ – ತಜ್ಞರು

***• ಈ ತರಹ ಹೇಳಿಕೆಗಳಿಂದಲೇ ಆತಂಕ !!***

★★★

ಶಾಸಕ ಮುನಿರತ್ನರ ಆಪ್ತರ ಕಚೇರಿ, ಮನೆ ಮೇಲೆ ದಾಳಿ – ಸುದ್ದಿ

***• ಅನರ್ಘ್ಯ ರತ್ನಗಳಿರಬೇಕು !!***

★★★

ಸ್ವ ಸಹಾಯ ಸಂಘಗಳ ಒಕ್ಕೂಟದ ಹೆಸರಿನಲ್ಲಿ ಕೋಟ್ಯಾಂತರ ವಂಚನೆ – ಸುದ್ದಿ

***• ಸ್ವ-ಸಹಾಯವೇ ಆಯಿತಲ್ಲ !?***

★★★

ಏಳು ಸಾವಿರ ಟನ್ ಬೇಳೆ ಆಮದು – ವಾಣಿಜ್ಯ ಸುದ್ದಿ

***• ಅದು ಬೇಯುತ್ತದೆ ಎಂದು ಆಶಿಸೋಣ !!***

★★★

## "ನಮ್ಮ ನಿಮ್ಮಲ್ಲಿ"


**ತು**ಮಕೂರಿನಿಂದ ಪ್ರಕಟವಾಗುವ 'ನಗೆಮುಗುಳು' ಎಂಬ ನಗೆ ಮಾಸಪತ್ರಿಕೆ ಹದಿನೈದು ವರ್ಷಗಳ ಹಿಂದೆ ಪ್ರಾರಂಭವಾದ ಹೊಸದರಲ್ಲಿ ನಾನು ತುಮಕೂರಿಗೆ ಹೋಗುವ ಪ್ರಸಂಗ ಒದಗಿಬಂದಿತ್ತು. ದಿವಂಗತ ಮೃತ್ಯುಂಜಯ (ಎಂತಹ ವಿಪರ್ಯಾಸ!) ಅವರು ತುಮಕೂರಿನಲ್ಲಿ ಹಮ್ಮಿಕೊಂಡಿದ್ದ ನಗೆಲೋಕದ ಕಾರ್ಯಕ್ರಮದಲ್ಲಿ ಭಾಗವಹಿಸಲು ಒಪ್ಪಿದ್ದರಿಂದ ನಾನು ಅಲ್ಲಿಗೆ ಹೋಗಿದ್ದು. ಸಮಾರಂಭ ಮುಗಿದನಂತರ ಶ್ರೀಮತಿ ಪೂರ್ಣಿಮಾ ಮತ್ತು ರಾಮಣ್ಣ ದಂಪತಿಗಳು ನನ್ನನ್ನು ಭೇಟಿಯಾಗಿದ್ದರು. ಅವರ ಹೊಸ ಸಾಹಸಕ್ಕೆ ಎಲ್ಲ ಶುಭ ಹಾರೈಕೆಗಳನ್ನು ಸಲ್ಲಿಸಿ, 'ನಗೆಮುಗುಳು' ಪತ್ರಿಕೆಯ ಬೆಳವಣಿಗೆಗೆ ನನ್ನಿಂದಾದ ಎಲ್ಲ ಸಹಕಾರವನ್ನು ನೀಡುವ ಭರವಸೆ ನೀಡಿ ಊರಿಗೆ ಹಿಂತಿರುಗಿದ್ದೆ. ಹಲವು ತಿಂಗಳುಗಳ ಹಿಂದೆ ರಾಮಣ್ಣನವರು ನಮ್ಮ ಮನೆಗೆ ಬಂದು, ''ನಗೆಮುಗುಳು ಪತ್ರಿಕೆಯ ಹದಿನೈದನೆಯ ಹುಟ್ಟುಹಬ್ಬದ ಪ್ರಯುಕ್ತ ರಾಜ್ಯಮಟ್ಟದ ಪ್ರಪ್ರಥಮ ಹಾಸ್ಯ ಸಮ್ಮೇಳನ ನಡೆಸೋಣ ಅಂತಿದೀವಿ ಸಾರ್, ತಮ್ಮಿಂದ ಸಲಹೆ, ಸಹಕಾರಗಳು ಬೇಕು'' ಅಂತ ವಿನಂತಿಸಿದಾಗ, ''ರಾಜ್ಯ ಮಟ್ಟದ ಅಂತ ಯಾಕೆ? ರಾಷ್ಟ್ರ ಮಟ್ಟದ ಅಥವಾ ಅಂತರ ರಾಷ್ಟ್ರೀಯ ಮಟ್ಟದ ಅಂತ ಹಾಕಿ. ಆಹ್ವಾನ ಪತ್ರಿಕೇಲಿ ಚೆನ್ನಾಗಿ ಕಾಣುತ್ತೆ. ಬರೋರು ಹೇಗಿದ್ದರೂ ನಿಮ್ಮ ಬಂಧು ಮಿತ್ರರು ಹಾಗೂ ಬೆಂಗಳೂರಿನಿಂದ ಅಪರಂಜಿ ಮತ್ತು ವಿನೋದದ ಬಳಗ ಅಷ್ಟೇ ಅಲ್ಲವೇ!'' ಅಂತ ನಗಾಡಿದ್ದೆ.

ರಾಮಣ್ಣನವರು ಬಹು ಶ್ರಮವಹಿಸಿ, ಶ್ರದ್ಧೆಯಿಂದ ಜುಲೈ ಒಂಭತ್ತು ಮತ್ತು ಹತ್ತರಂದು, ತುಮಕೂರಿನ ಸಿದ್ಧಿವಿನಾಯಕ ಸಮುದಾಯ ಭವನದಲ್ಲಿ ಸಮ್ಮೇಳನವನ್ನು ಏರ್ಪಡಿಸಿದ್ದರು. ಶನಿವಾರ ಬೆಳಗ್ಗೆ ಒಂಭತ್ತು ಘಂಟೆಗೆ ಕಾರ್ಯಕ್ರಮದ ಉದ್ಘಾಟನೆ. ಅನೇಕ ರಾಜಕಾರಣಿಗಳು ಈ ಉದ್ಘಾಟನೆಯನ್ನು ನೆರವೇರಿಸಲು ಒಪ್ಪಿದ್ದರಿಂದ, ಹಾಗೂ ರಾಜಕಾರಣಿಗಳ ಸಮಯ ಪ್ರಜ್ಞೆಯ ಬಗ್ಗೆ ನಿಮಗೆಲ್ಲಾ ತಿಳಿದೇ ಇರುವುದರಿಂದ ಬೇಲೂರು ಮತ್ತು ನಾನು ಸಾವಧಾನವಾಗಿ ಮಧ್ಯಾಹ್ನ ಹನ್ನೆರಡು ಘಂಟೆಗೆ ಸಭಾಂಗಣವನ್ನು ಸೇರಿದೆವು. ರಾಜಕಾರಣಿಗಳು ನಮ್ಮನ್ನು ನಿರಾಶೆಗೊಳಿಸಲಿಲ್ಲ. ಹನ್ನೆರಡೂವರೆಗೆ ಅವರೆಲ್ಲರೂ ಬಂದಿಳಿದರು. ಇನ್ನು ಘಂಟೆಗಟ್ಟಲೆ ಇವರುಗಳ ಕೊರೆತವನ್ನು ಕೇಳಬೇಕಲ್ಲಪ್ಪಾ ವೆಂಕಟರಮಣಾ ಅಂತ ಅಂದುಕೊಂಡೆ. ಶ್ರೀಮದ್ರಮಾರಮಣ ಸ್ವಲ್ಪ ಫ್ರೀಯಾಗಿದ್ದ ಅಂತ ಕಾಣುತ್ತೆ. ನನ್ನ ಪ್ರಾರ್ಥನೆಗೆ ಓಗೊಟ್ಟ. ಆಶ್ಚರ್ಯ, ಪರಮಾಶ್ಚರ್ಯ!

ಬಂದಿದ್ದ ಮೂವರು ರಾಜಕಾರಣಿಗಳೂ ತಲಾ ಐದೈದು ನಿಮಿಷಗಳಲ್ಲಿ ತಮ್ಮ ಭಾಷಣ ಮುಗಿಸಿ ಸಭೆಗೆ ವಿದಾಯ ಹೇಳಿ ಹೊರಟುಬಿಟ್ಟರು. ಮುಂದಿನ ಕಾರ್ಯಕ್ರಮ ನಾಗಾಲೋಟದಲ್ಲಿ ಮುಂದುವರಿಯಿತು.

ಸಮ್ಮೇಳನಾಧ್ಯಕ್ಷರಾಗಿದ್ದ ಶ್ರೀಯುತ ಅ.ರಾ. ಮಿತ್ರರವರು ತಮ್ಮ ಎಂದಿನ ಪ್ರಬುದ್ಧ ಶೈಲಿಯಲ್ಲಿ ಪ್ರಾರಂಭಿಕ ಭಾಷಣವನ್ನು ಮಾಡಿ ಮುಂದಿನ ಕಾರ್ಯಕ್ರಮಗಳಿಗೆ ಚಾಲನೆಕೊಟ್ಟರು. ಭೋಜನವಿರಾಮದ ನಂತರ ''ಹಾಸ್ಯಸಾಹಿತ್ಯ ನಡೆದು ಬಂದ ದಾರಿ''

ಎಂಬ ವಿಷಯವನ್ನು ಕುರಿತು ಪ್ರೊಫೆಸರ್ ಎಚ್.ಎಸ್. ಲಕ್ಷ್ಮೀನಾರಾಯಣ ಭಟ್ಟ ಇವರಿಂದ ಉಪನ್ಯಾಸ ನಡೆಯಿತು. ಮಾನ್ಯ ಪ್ರೊಫೆಸರರು, ಹಾಸ್ಯಸಾಹಿತ್ಯ ನಡೆದು ಬಂದ ದಾರಿಯಲ್ಲಿ ದಾರಿತಪ್ಪಿ, ಅದೊಂದು ವಿಷಯ ಬಿಟ್ಟು ಮಿಕ್ಕೆಲ್ಲ ವಿಷಯಗಳ ಮೇಲೆ ಬೋರ್ಗರೆದರು. ಸುಮಾರು ನಲವತ್ತು ನಿಮಿಷಗಳಷ್ಟು ಕಾಲ ಸಭಿಕರ ತಾಳ್ಮೆಯನ್ನು ಪರೀಕ್ಷಿಸಿ ಅನಂತರ ಅಧ್ಯಕ್ಷರಾದ ಪ್ರೊಫೆಸರ್ ಜಿ. ಅಶ್ವತ್ಥನಾರಾಯಣ ಅವರ ಆಣತಿಯ ಮೇರೆಗೆ ಭಾಷಣ ನಿಲ್ಲಿಸಿದಾಗ ಸಭೆ ಸಮಾಧಾನದ ನಿಟ್ಟುಸಿರು ಬಿಟ್ಟಿತು.



ಇವರ ನಂತರ ಅಧ್ಯಕ್ಷರ ಭಾಷಣ. ಯಾವುದೋ ನಿಗೂಢ ಕಾರಣದಿಂದ ಮಾನ್ಯ ಪ್ರೊಫೆಸರರು ನೆರೆದಿದ್ದ ಸಭಿಕರನ್ನುದ್ದೇಶಿಸಿ, ''ನೆರೆದಿರುವ ನೂರಮೂವತ್ತಾರು ಸಭಿಕರೇ,'' ಅಂತ ಪ್ರಾರಂಭಿಸಿದರು. ಈ ನೂರ ಮೂವತ್ತಾರು ಸಂಖ್ಯೆ ಇವರ ಭಾಷಣದುದ್ದಕ್ಕೂ ತಂಬೂರಿಯ ಶೃತಿಯಂತೆ ಹರಿಯುತ್ತಲೇ ಇತ್ತು. ಭಾಷಣ ಮುಗಿಯುವ ಸೂಚನೆಗಳೇ ತೋರದಿದ್ದಾಗ ನಾವೆಲ್ಲಾ ಕಂಗಾಲಾದೆವು. ಮೋಕ್ಷದೊರಕಿದಾಗ ಘಂಟೆ ನಾಲ್ಕನ್ನು ಮೀರಿತ್ತು.

ಅಪರಂಜಿಯ ಉಪಸಂಪಾದಕರಾದ ಬೇಲೂರು ರಾಮಮೂರ್ತಿಯವರು ಕನ್ನಡ ಹಾಸ್ಯ ಪತ್ರಿಕೆಗಳ ಸಿಂಹಾವಲೋಕನವನ್ನು ಬಹು ಸೊಗಸಾಗಿ ಮಾಡಿದರು. 1911ರಲ್ಲಿ ಪ್ರಾರಂಭವಾದ ವಿಕಟ ವಿನೋದಿನಿಯಿಂದ ಹಿಡಿದು 2013ರಲ್ಲಿ ಜನ್ಮ ತಾಳಿದ ಹಾಸ್ಯದರ್ಶನದವರೆಗೆ ನಾಡಿನಲ್ಲಿ ಮೂಡಿ ರಂಜಿಸಿದ ವಿವಿಧ ಪತ್ರಿಕೆಗಳ ಬಗ್ಗೆ ಬೇಲೂರರು ಹೇಳಿದರು.

ಅಂದಹಾಗೆ, ಈ ಸಮಾರಂಭದಲ್ಲಿ ನಾನು ಪಾಲ್ಗೊಳ್ಳುವವರೆಗೂ ಕನ್ನಡದಲ್ಲಿ, ವಿನೋದ, ಅಪರಂಜಿ ಮತ್ತು ನಗೆ ಮುಗುಳು ಈ ಮೂರೇ ಪತ್ರಿಕೆಗಳಿವೆ ಎಂದುಕೊಂಡಿದ್ದೆ. ಎಸ್.ಎಸ್. ಪಡಶೆಟ್ಟಿಯವರು, ಬೆಂಗಳೂರಿನಿಂದಲೇ ''ಹಾಸ್ಯದರ್ಶನ'' ಎಂಬ ನಗೆ ಮಾಸಿಕವನ್ನು ಕಳೆದ ಎರಡು ವರ್ಷಗಳಿಂದ ಹೊರತರುತ್ತಿರುವುದು ಈ ಸಮಾರಂಭದಲ್ಲಿ ತಿಳಿಯಿತು. ಪಡಶೆಟ್ಟಿಯವರ ಪರಿಚಯವೂ ಆಯಿತು. ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳುಗಳ ಸಂಯುಕ್ತ ಸಂಚಿಕೆಯೊಂದೂ ನನ್ನ ಕೈಸೇರಿತು. ಸಂಚಿಕೆ ಸರ್ವಾಂಗಸುಂದರವಾಗಿ ಮೂಡಿಬಂದಿದೆ. ಸಂಚಿಕೆಯನ್ನು ಸವಿಯಲು ಆಸಕ್ತರು ಪಡಶೆಟ್ಟಿಯವರನ್ನು ಸಂಪರ್ಕಿಸಬಹುದು. (ಮೊಬೈಲ್: 7760122963)

ನಗೆಮುಗುಳು ವತಿಯಿದ ಶ್ರೀಯುತ ರಾಮಣ್ಣನವರು, ಅಪರಂಜಿ, ವಿನೋದ ಹಾಗೂ ಹಾಸ್ಯದರ್ಶನ ಸಂಪಾದಕರುಗಳನ್ನು ಸನ್ಮಾನಿಸಿದರು. ಸನ್ಮಾನಿತರ ಪರವಾಗಿ ನನಗೆ ಎರಡು ಮಾತುಗಳನ್ನಾಡಲು ಹೇಳಿದರು. ''ಹಾಸ್ಯವನ್ನು ಆಸ್ವಾದಿಸಬೇಕಾದರೆ, ಹಾಸ್ಯಕ್ಕೆ

ಸ್ಪಂದಿಸಬೇಕಾದರೆ, ಆರೋಗ್ಯವಂತ ಮನಸ್ಸು ಅತ್ಯಗತ್ಯ. ಚಿಂತೆಯಿಂದ ತುಂಬಿದ, ರಾಗದ್ವೇಷಗಳಿಗೆ ಒಳಗಾದ ಮನಸ್ಸುಗಳಿಗೆ ಹಾಸ್ಯ ತಟ್ಟದು. ಅಂತಹ ಆರೋಗ್ಯವಂತ ಮನಸ್ಸುಗಳು ಮಿಲನ ಈ ಸಮಾರಂಭ'' ಎಂದು ಹೇಳಿ ರಾಮಣ್ಣನವರಿಗೆ ನಮ್ಮೆಲ್ಲರ ಅನಂತಾನಂತ ವಂದನೆಗಳನ್ನು ಸಲ್ಲಿಸಿ ನನ್ನ ಮಾತು ಮುಗಿಸಿದೆ. ಇದಾದ ನಂತರ ಬೇಲೂರು ಮತ್ತು ನಾನು ಬೆಂಗಳೂರಿಗೆ ಹಿಂತಿರುಗಿದೆವು.

ಮಾರನೆಯ ದಿನದ ವಿದ್ಯಮಾನಗಳ ಮಾಹಿತಿಯನ್ನು ನಾನು ಗೆಳೆಯ ಕೃಷ್ಣನ ಮೂಲಕ ಪಡೆಯಬೇಕಾಯಿತು. ''ಎಲ್ಲವೂ ನಿಯೋಜಿತ ಕಾರ್ಯಕ್ರಮದಂತೆಯೇ ನಡೆಯಿತು. ಸಭಿಕರ ಸಂಖ್ಯೆ ನಿನ್ನೆಗಿಂತ ಚೆನ್ನಾಗಿತ್ತು'' ಎಂದ ಕೃಷ್ಣ.

ಒಟ್ಟಿನಲ್ಲಿ ಹಾಸ್ಯ ಕ್ಷೇತ್ರದಲ್ಲಿ ದುಡಿಯುತ್ತಿರುವ ಅನೇಕ ಗೆಳೆಯ ಗೆಳತಿಯರನ್ನು ಭೇಟಿಮಾಡುವ ಅವಕಾಶ ಈ ಸಮ್ಮೇಳನದಿಂದಾಗಿ ದೊರಕಿತು. ಮಂಗಳೂರಿನಿಂದ ಶ್ರೀಮತಿ ಭುವನೇಶ್ವರಿಯವರು ಬಂದಿದ್ದರು. ವಿನೋದ ಸಂಪಾದಕರಾದ ರಾಘವೇಂದ್ರ ಬೆಂಗಳೂರಿನಲ್ಲಿದ್ದರೂ ಇಲ್ಲೇ ಅವರನ್ನು ಬಹು ವರ್ಷಗಳ ನಂತರ ನೋಡಿದ್ದು. ವಿನೋದ ಮತ್ತು ನಗೆಮುಗುಳು ಬರಹಗಾಗರ ಬಳಗದ ಪರಿಚಯವಾಗಿದ್ದು ಬಹು ಸಂತಸದ ಸಂಗತಿ. ಇಂತಹ ಒಂದು ಅವಕಾಶವನ್ನು ಒದಗಿಸಿದ್ದಕ್ಕಾಗಿ ಶ್ರೀ ರಾಮಣ್ಣ ಮತ್ತು ಅವರ ಮಗಳು ಶ್ರೀಮತಿ ರಶ್ಮಿ ಇವರಿಗೆ ನಮ್ಮೆಲ್ಲರ ಕೃತಜ್ಞತೆಗಳು ಸಲ್ಲಬೇಕು.

ಅಂದಹಾಗೆ, ಈ ತಿಂಗಳ ಮೂರರಂದು ಭಾನುವಾರ ನಮ್ಮ ಆತ್ಮೀಯರಾದ ಆನಂದ ಅವರಿಗೆ ಒಂದು ಅನಿರೀಕ್ಷಿತ ಹುಟ್ಟುಹಬ್ಬವನ್ನು ಅವರ ಮಕ್ಕಳಾದ ಸುಷ್ಮಾ ಮತ್ತು ಸುದೀಪ್ ಏರ್ಪಡಿಸಿದ್ದರು. ಜಯನಗರದ ಹಂಡೆ ಹಾಲ್‌ನಲ್ಲಿ ನಡೆದ ಒಂದು ಸರಳ ಸಮಾರಂಭದಲ್ಲಿ ಆನಂದರ ಬಂಧುಗಳ ಜೊತೆಗೆ ಅವರ ಅನೇಕ ಮಿತ್ರರು ಸೇರಿ, ಅವರಿಗೆ ಎಪ್ಪತ್ತರ ಹುಟ್ಟುಹಬ್ಬದ ಶುಭಾಶಯಗಳನ್ನು ಕೋರಿದರು. ಈ ಸಂದರ್ಭದಲ್ಲಿ ಎರಡು ಪುಸ್ತಕಗಳು ಬಿಡುಗಡೆಯಾದವು. ಮೊದಲನೆಯದು – ಸುಷ್ಮಾ ಮತ್ತು ಸುದೀಪ್ ಪ್ರಸ್ತುತಪಡಿಸಿದ ಆನಂದ 360 ಎಂಬ ಬಹು ಸುಂದರ ಪುಸ್ತಕ, ಆರ್ಟ್ ಕಾಗದದಲ್ಲಿ ಅಚ್ಚಾಗಿರುವ ಈ ಪುಸ್ತಕದಲ್ಲಿ ಅವರ ಅನೇಕ ಹಿತೈಷಿಗಳು ಲೇಖನಗಳನ್ನು ಬರೆದು ಆನಂದರ ವಿವಿಧ ಮುಖಗಳನ್ನು ಪರಿಚಯಿಸಿದ್ದಾರೆ. ಬಿಡುಗಡೆಯಾದ ಎರಡನೆಯ ಪುಸ್ತಕ ಆನಂದರೇ ಬರೆದಿರುವ ''ಬರೆಯದ ಪತ್ರಗಳು'' ಎಂಬ ಅವರ ಲೇಖನಗಳ ಸಂಕಲನ. ಸಮಾರಂಭ ಸಂಭ್ರಮದಿಂದ ನಡೆಯಿತು. ಅನಂತರದ ಭೋಜನವೂ ಸೊಗಸಾಗಿತ್ತು ಅಂತ ಬೇರೆ ಹೇಳಬೇಕಾಗಿಲ್ಲ ಅಲ್ಲವೇ. ಸಾತ್ವಿಕ ಪ್ರಕೃತಿಯ ಆನಂದರಿಗೆ ಅಪರಂಜಿಯ ಶುಭಹಾರೈಕೆಗಳು.

**ಶಿವಕುಮಾರ್**

---

**ಖುಷಿ ಬಂದಂತೆ?**

ಟ್ಯಾಕ್ಸಿ ವೇಗವಾಗಿ ಹೋಗುತ್ತಿತ್ತು. ಗಿರಾಕಿಯ ಜತೆಗೆ ಚಾಲಕ ಮಾತಿಗಿಳಿದ.
"ನನಗೆ ಈ ಕೆಲಸ ಖುಷಿ ಕೊಟ್ಟಿದೆ. ಏಕೆಂದರೆ ನಾನೇ ಈ ಗಾಡಿ ಮಾಲೀಕ. ನನಗೆ ಬಾಸ್ ಎಂದು ಯಾರೂ ಇಲ್ಲ. ನನಗೆ ಖುಷಿ ಬಂದಂತೆ ಕೆಲಸ ಮಾಡುತ್ತೇನೆ. ಯಾರ ಮಾತಿಗೂ ಕಾಯಬೇಕಿಲ್ಲ."
"ಎಡಕ್ಕೆ ತಿರುಗಿಸು ಇಲ್ಲ" ಎಂದ ಗಿರಾಕಿ.

# ಅಪ್ರಿಯ ಸತ್ಯಗಳು

**ಡೆ**ನ್ಮಾರ್ಕಿನ ಮಿಕಾಲ್ ವುಲ್ಫ್ ಮತ್ತು ಜರ್ಮನಿಯ ವ್ಯಂಗ್ಯಚಿತ್ರಕಾರ ಆಂಡ್ರೇಸ್ ಇವರಿಬ್ಬರೂ ಜೊತೆಗೂಡಿ ದಿನನಿತ್ಯದ ಸಮಸ್ಯೆಗಳನ್ನು ಲೇವಡಿ ಮಾಡಲು ಮ್ಯಾನೇಜ್‌ಮೆಂಟ್ ಅಧ್ಯಯನಗಳಲ್ಲಿ ಬಳಸುವ ಗ್ರಾಫ್ ಮತ್ತು ಬಾರ್ ಚಾರ್ಟ್‌ಗಳನ್ನು ಉಪಯೋಗಿಸಿ ''ಅಪ್ರಿಯ ಸತ್ಯಗಳು'' ಎಂಬ ಅತ್ಯುತ್ತಮ ವ್ಯಂಗ್ಯಚಿತ್ರಗಳ ಸರಣಿಯನ್ನು ಹೊರತಂದಿದ್ದಾರೆ.

ನೋಡುವುದಕ್ಕೆ ಯಾವುದೋ ಆಫೀಸಿನ ವ್ಯವಹಾರದಂತೆ ಕಂಡರೂ ನಮ್ಮ ಆಧುನಿಕ ಜೀವನದ ವಿಪರ್ಯಾಸಗಳನ್ನು ಬಹು ಚೆನ್ನಾಗಿ ಬಿಂಬಿಸುವ ಕಲೆ ಇವರ ಚಿತ್ರಗಳಲ್ಲಿ ಮೂಡಿ ಬಂದಿದೆ.

2001ರಲ್ಲಿ ಒಂದು ವ್ಯಂಗ್ಯಚಿತ್ರಗಳ ಸ್ಪರ್ಧೆಯಲ್ಲಿ ಬೆಳಕಿಗೆ ಬಂದ ಈ ಜೋಡಿ, ಅಂದಿನಿಂದ ಸತತವಾಗಿ ಜನಪ್ರಿಯತೆಯ ಮುಂಚೂಣಿಯಲ್ಲಿ ಸಾಗಿಬಂದಿರುವುದು ಇವರ ಪ್ರತಿಭೆಗೆ ಸಾಕ್ಷಿ.

ಇತ್ತೀಚೆಗೆ ಇವರು ರಚನೆಯ ಕಾರ್ಟೂನ್ ಸ್ಟ್ರಿಪ್ ಅಮೆರಿಕೆಯ ನ್ಯೂಯಾರ್ಕ್ ಟೈಮ್ಸ್‌ನಲ್ಲಿ ಪ್ರಕಟವಾಗುತ್ತಿದೆ.


ಅಪರಂಜಿ ಓದುಗರಿಗೆ ಇವರ ಕೃತಿಗಳ ಪರಿಚಯ ಮಾಡಿಸುವ ಸಲುವಾಗಿ ಇವರ ಹಲವು ಚಿತ್ರಗಳನ್ನು ಮುಂದಿನ ಪುಟಗಳಲ್ಲಿ ಕನ್ನಡ ಶೀರ್ಷಿಕೆಗಳೊಂದಿಗೆ ನೀಡಿರುವೆ.

ಇವುಗಳನ್ನು ನೀವು ಮೆಚ್ಚಬಹುದೆಂದು ನನ್ನ ನಂಬಿಕೆ.

**ಶಿವಕುಮಾರ್**


**ಅತ್ಯಂತ ಅಪಾಯಕಾರಿ ಆಹಾರಗಳು**

**(ಡಯಟೀಷಿಯನ್‌ಗಳ ಪ್ರಕಾರ)**



## ಕಾಲಹರಣ


(ಕಂಪ್ಯೂಟರ್ ಆಟಗಳು ಬೆಳೆದಿರುವ ರೀತಿ!)




1975 1993 1998 2015

## ನಿಮ್ಮ ವಾಹನ ಚಾಲನೆ ಪರಿಣತಿ

(ವಾಹನ ಚಾಲನೆ ಟೆಸ್ಟ್ ಪಾಸಾದ ಮೇಲೆ ಕಲಿತದ್ದೆಲ್ಲಾ ಮರೆವು!)




## ಡಿಜಿಟಲ್ ಮೀಡಿಯ ಬೆಳೆದುಬಂದ ಹಾದಿ

(ಟಿ.ವಿ.ಗಳಲ್ಲಿ ಜಾಹೀರಾತುಗಳ ಅಬ್ಬರ ಬೆಳೆದಿರುವ ರೀತಿ!)




1996 2004 2015

☐ ಉಪಯುಕ್ತ ಮಾಹಿತಿ ■ ಜಾಹೀರಾತು


# ಇದಿಲ್ಲದೆ ಮನುಷ್ಯ ಎಷ್ಟು ಕಾಲ ಬದುಕಬಲ್ಲ?

(ಈಗಿನ ಯುವ ಪೀಳಿಗೆಯ ಇಂಟರ್ನೆಟ್ ಹುಚ್ಚು!)





# ಪಂಚತಾರಾ ಹೋಟೆಲಿನಲ್ಲಿ ನಿಮ್ಮ ಟಿಪ್ಸ್

(ಡೆನ್ಮಾರ್ಕಿನ ರೆಸ್ಟುರಾಗಳಲ್ಲಿ ತರುಣಿಯರೇ ಸರ್ವ್ ಮಾಡುತ್ತಾರಂತೆ!)




# ನಿಮ್ಮ ಟೂತ್ ಪೇಸ್ಟ್ ಬಳಕೆ



# ನಾನು ಕಳೆದುಕೊಂಡ ರೂಪಾಯಿ

**- ಜಯಣ್ಣ**

**ನ**ನ್ನ ಫ್ರೆಂಡ್ ಶೀನ ನನ್ನಿಂದ ಸಾಲವಾಗಿ ಒಂದು ರೂಪಾಯಿ ಇಸಗೊಂಡ. ಹನ್ನೆರಡು ತಿಂಗಳಾಯಿತು. ವಾಪಸು ಕೊಟ್ಟಿಲ್ಲ ಕೊಡುವ ಲಕ್ಷಣಗಳೂ ಕಾಣಲಿಲ್ಲ. ಅವನು ಅದನ್ನು ವಾಪಸು ಕೊಡುವನೆಂದು ನಾನು ತಿಳಿದಿಲ್ಲ. ಅವನು ಕಂಡಾಗಲೆಲ್ಲ ನನಗನಿಸಿದೆ – ಆ ರೂಪಾಯಿ ಸಮಾಚಾರವನ್ನು ಆತ ಸಂಪೂರ್ಣವಾಗಿ ಮರೆತುಬಿಟ್ಟಿದ್ದಾನೆ ಅಂತ. ಅಂತಹ ವ್ಯವಹಾರವೇನೂ ನಮ್ಮ ನಡುವೆ ನಡೆದಿಲ್ಲ ಎಂಬ ಹಾಗೆ ಎಂದಿನಂತೆ ಸಲೀಸಾಗಿ ಸಲುಗೆಯಿಂದ ನನ್ನೊಡನೆ ಮಾತಾಡ್ತಾನೆ. ನನ್ನ ರೂಪಾಯಿ ಮಾತ್ರ ಅವನ ನೆನಪಿನಿಂದ ಪೂರ್ತಿ ಹೊರಟು ಹೋಗಿದೆ. ಈ ಜನ್ಮದಲ್ಲಿ ಇನ್ನು ಆ ರೂಪಾಯಿ ನನಗೆ ವಾಪಸು ಬರೋಲ್ಲ ಎಂದು ನನಗೂ ತಿಳಿದಿದೆ.

ಇದರಲ್ಲಿ ಒಂದು ವಿಶೇಷ ಏನು ಅಂದರೆ ಕ್ಯಾಪ್ಟನ್ ಶ್ರೀನಿವಾಸ್, ನನ್ನಿಂದ ಸಾಲವಾಗಿ ಪಡೆದ ಒಂದು ರೂಪಾಯಿಯನ್ನು ಹಿಂತಿರುಗಿ ಕೊಡಬೇಕು ಎಂಬ ವಿಚಾರವನ್ನು ಮಾತ್ರ ನನ್ನ ಜೀವಮಾನ ಪರ್ಯಂತ ನೆನೆಸಿಕೊಳ್ಳುತ್ತಲೇ ಇರುತ್ತೇನೆ. ಇದರಿಂದ ನಮ್ಮ ಸ್ನೇಹಕ್ಕೆ ಬಾಧಕವೇನು ಇಲ್ಲ ಎಂಬುದರಲ್ಲಿ ನನಗೆ ವಿಶ್ವಾಸವಿದೆ. ಆದರೆ ಸಾಲ ಬರಬೇಕು ಎಂಬುದನ್ನು ಮಾತ್ರ ಮರೆಯಲು ನನಗೆ ಸಾಧ್ಯವಾಗಿಲ್ಲ. ಇತರರ ವಿಚಾರ ಹೇಗೊ-ನನ್ನ ಸ್ವಭಾವವಂತೂ ಯಾರಾದರೂ ನನ್ನಿಂದ ಕೊಂಚ ಸಾಲ ಇಸಿದುಕೊಂಡಿದ್ದರೂ ಅದರ ನೆನಪನ್ನು ಸಾಯುವವರೆಗೂ ಅಳಿಸಲಾರೆ.

ನಡೆದದ್ದು ಹೀಗೆ – ಕಳೆದ ವರ್ಷ ಆಗಸ್ಟ್ 9ನೇ ತಾರೀಖು ಶ್ರೀನಿವಾಸ್ ಸಿಲೋನಿಗೆ ಹೊರಡುವ ಮುಂಚೆ ಈ ಒಂದು ರೂಪಾಯಿ ಇಸಿದುಕೊಂಡು (ಒಂದು ವೇಳೆ ಶ್ರೀನಿವಾಸ್ ಕಣ್ಣಿಗೆ ಈ ವಿವರಗಳೇನಾದರೂ ಬಿದ್ದರೆ ಆತನಿಗೆ ನೆನಪಾಗಬಹುದೆಂಬ ಆಂತರಿಕ ಆಶಯದಿಂದ ಇಷ್ಟೆಲ್ಲ ಬರೆಯುತ್ತಿದ್ದೇನೆ) ಆಟೋರಿಕ್ಷಾದವನಿಗೆ ಕೊಡಲು ಒಂದು ಬಿಡಿ ರೂಪಾಯಿ ಬೇಕಾಗಿತ್ತು. ನನ್ನ ಕೇಳಿದ. ಕೊಟ್ಟೆ ಇದೆಲ್ಲ ತೀರ ಸಹಜವಾಗಿ ನಡೆದು ಹೋಯಿತು. ಈ ವ್ಯವಹಾರವೆಲ್ಲ ಮುಗಿದ ಮೇಲೆಯೆ ನಡೆದದ್ದೇನು ಎಂದು ನನಗೆ ಅರಿವಾದದ್ದು. 'ಚಿಲ್ಲರೆ ಒಂದು ಬಿಡಿ ರೂಪಾಯಿ ಬೇಕು ಕಣೊ. ಕೊಟ್ಟಿರು. ಇದೆಯಾ?' ಎಂದು ಕೇಳಿದ. 'ಓ, ಇಲ್ಲದೇ ಏನು – ಇಕೊ ತಗೋ – ಸಾಕಾ ಒಂದು ರೂಪಾಯಿ?' ಎಂದು ನಾನೆಂದೆ. ಅವನು ರೂಪಾಯಿ ಬೇಕು ಅಂತ ಕೇಳಿದಾಗ 'ಅದನ್ನು ಸಾಲವಾಗಿ ಕೊಟ್ಟಿರು – ನಾ ತಿರುಗಿ ಅದನ್ನ ನಿನಗೆ ಕೊಡ್ತೀನಿ', ಎಂಬ ಭಾವನೆ ಆ ಧ್ವನಿಯಲ್ಲಿ ಸ್ಪಷ್ಟವಾಗಿ ಸೂಚಿತವಾಗಿತ್ತು.

ಸಿಲೋನ್ ತಲುಪಿದ ಕೂಡಲೆ ಕೊಲಂಬೋದಿಂದ ಒಂದು ಕಾಗದ ಬರೆದ. ನನ್ನ ಹೆಸರು ಅಡ್ರೆಸ್ ಇರುವ ಕವರು ಅವನಿಂದ ಬಂದಿದೆ ಎಂದು ನೋಡಿದ ಕೂಡಲೆ ಆತುರದಿಂದ ಅದನ್ನು ಒಡೆದೆ – ಒಳಗೆ ಖಂಡಿತವಾಗಿಯೂ ಒಂದು ರೂಪಾಯಿ ನೋಟು ಇಟ್ಟಿರುತ್ತಾನೆ ಎಂದುಕೊಂಡು. ಒಡೆದು ನೋಡಿದರೆ ಕೇವಲ ಕಾಗದ ಏನೊ-ಸುಖವಾಗಿ ಬಂದು ಸೇರಿದ್ದೇನೆ. ಇಂಥಲ್ಲಿ ವಸತಿಗೇರ್ಪಾಟಾಗಿದೆ – ಇಲ್ಲೆಲ್ಲ ಬಹಳ ಬಿಸಿಲು – ತುಂಬ ಸೆಕೆ – ಬೆಳಿಗ್ಗೆ ಹೀಗೆ ರಾತ್ರಿ ಹೀಗೆ, ಲೊಟ್ಟೆ ಲೊಸಕು ಅಂತ ಏನೇನೊ ಗೀಚಿದ್ದ. ಉಷ್ಣಾಂಶ

$100^0$ ವರೆಗೆ ಇತ್ತು ಅಂತ ಒಂದು ಕಡೆ ಬರೆದದ್ದು – ನನಗೆ ಒಂದು ಕ್ಷಣ – 1–00 ರೂ. ಬಗ್ಗೆ ಏನೊ ಬರೆದಿರಬಹುದು ಎಂಬ ಭ್ರಾಂತಿಯನ್ನೇ ಹುಟ್ಟಿಸಿತ್ತು.

3 ವಾರಗಳ ಸಿಲೋನ್ ಪ್ರವಾಸ ಮುಗಿಸಿ ಶೀನ ವಾಪಸು ಬಂದ. ಸ್ವಾಗತಿಸಲೆಂದು ರೈಲು ಸ್ಟೇಷನ್ನಿಗೆ ಹೋಗಿದ್ದೆ – ಆ ಒಂದು ರೂಪಾಯಿ ಹಿಂತಿರುಗೀತೆಂಬ ಆಸೆಯಿಂದೇನೂ ಅಲ್ಲ. ಶೀನನ ಬಗ್ಗೆ ನನಗದೇನೊ ಅಕ್ಕರೆ ಇರುವುದರಿಂದ ಹೋದೆ ಅನ್ನಿ. ಮೂರುವಾರಗಟ್ಟಲೆ ದೇಶವನ್ನೇ ಬಿಟ್ಟು ಹೋಗಿದ್ದವರನ್ನು ಶೌರಿಗೆ ವಾಪಸು ಬಂದಾಗ ಪ್ರಿಯಸ್ನೇಹಿತ ಎನಿಸಿಕೊಂಡವನು ಎದುರುಗೊಳ್ಳಲು ಸ್ಟೇಷನ್ನಿಗೇ ಹೋದರೆ ತುಂಬಾ ಸಂತೋಷ ಆಗೋದಿಲ್ಲವೆ ಆತನಿಗೆ. ಅದಕ್ಕೆಂದೇ ಹೋದೆ. ಅವತ್ತು ನಮ್ಮನೇಲೇ ಇದ್ದು ಮಾರನೆ ದಿನ ಅವನ ಊರಿಗೆ ಹೋಗುವುದೆಂದು ಮೊದಲೆ ಪತ್ರವ್ಯವಹಾರದಲ್ಲಿ ನಿರ್ಧಾರವಾಗಿತ್ತು. ನಮ್ಮ ಮನೆ ಸ್ಟೇಷನ್ನಿಗೆ ಹತ್ತಿರವೇ ಅನ್ನಬಹುದು 1–1.5 ಕಿಲೋಮೀಟರ್ ಅಷ್ಟೆ. ರೈಲು ಬಂತು. ಝುಂ ಅಂತ ಇಳಿದು ನನ್ನ ತಬ್ಬಿಕೊಂಡ. ಈಚೆಗೆ ಬರುವಾಗ 'ಆಟೊ ಮಾಡಿಕೊಂಡು ಹೋಗೋಣವೊ' ಎಂದೆ ಬೇಕಂತಲೇ (ಆಟೊ ಅಂದ ತಕ್ಷಣ ಆ ರೂಪಾಯಿಯ ಜ್ಞಾಪಕ ಆದರೂ ಆಗಲಿ ಅಂತ) ಅವನು 'ಯಾಕೊ – ಆಟೊ – ನಡೆದುಕೊಂಡೇ ಹೋಗಿ ಬಿಡೋಣ, ಕೂತು ಕೂತು ಕಾಲು ಜಡ್ಡು ಕಟ್ಟಿದಂತಾಗಿದೆ', ಅಂದ.

ಸಂಜೆಯೆಲ್ಲ ಒಟ್ಟಿಗೆ ತಿರುಗಾಡಿದೆವು – ಮಾತಾಡಿದೆವು – ಅವನ ಸಿಲೋನ್ ಪ್ರವಾಸದ ಬಗ್ಗೇನೆ ಹೆಚ್ಚಾಗಿ ನನ್ನ ತಲೇಲಿ ಒಂದೈದಾರು ಸಲವಾದರೂ ಆ ರೂಪಾಯಿ ಬಂದು ಹೋಗಿರಬೇಕು. ಆದರೂ ಅದರ ಮಾತೆತ್ತಲಿಲ್ಲ. ಅದು ಹೇಗೆ ಸಾಧ್ಯ ನಾನೊ ಬಲು ದಾಕ್ಷಿಣ್ಯದ ಸ್ವಭಾವದವ. ಅಂಥದರಲ್ಲೂ ಒಮ್ಮೆ 'ಸಿಲೋನ್‌ನಲ್ಲಿ ಯಾವ ಹೆಸರಿನ ಹಣ ಚಲಾವಣೆಲಿದೆಯೊ ಶೀನಾ, ನಮ್ಮ ದೇಶದ ರೂಪಾಯಿ ಬೆಲೆಗೆ ಸಮನಾಗಿದೆಯೊ', ಅಂತ ಕೇಳಿದೆ – ರೂಪಾಯಿ ಎನ್ನುವಾಗ ಸ್ವಲ್ಪ ಒತ್ತು ಕೊಟ್ಟು. ಅದರಿಂದಲೂ ನಾನು ನಿರೀಕ್ಷಿಸಿದ ಪರಿಣಾಮ ಆಗಲಿಲ್ಲ. ಅನಂತರ ಮತ್ತೆ 'ರೂಪಾಯಿ' ನೆನಪು ಕೊಡುವಂತಹ ಬೇರೇನು ಉಪಾಯ ಮಾಡಲೂ ನನಗೇಕೊ ಇಷ್ಟವಾಗಲಿಲ್ಲ.

ತನ್ನ ಊರಿಗೆ ಹೋಗಿ ಬಂದ ಮೇಲೆ ಶೀನ ಯಥಾ ಪ್ರಕಾರ ಆಫೀಸು ಕೆಲಸದ ಮೇಲೆ ಹಾಜರಾದ. ನಿತ್ಯ ಸಂಜೆ ಕ್ಲಬ್ಬಿನಲ್ಲಿ ಇಬ್ಬರೂ ಸೇರುತ್ತಿದ್ದೆವು. ಆತ ಆ ರೂಪಾಯಿ ವಿಚಾರವನ್ನಂತೂ ಸಂಪೂರ್ಣವಾಗಿ ಮರೆತೇ ಬಿಟ್ಟಿದ್ದಾನೆಂಬುದು ಖಚಿತವಾಯಿತು. ಒಂದು ಸಲ ಸಿಲೋನ್ ಪ್ರವಾಸದ್ದೆಲ್ಲ ಎಷ್ಟು ಖರ್ಚಾಯಿತು ಎಂದು ಕೇಳಿದೆ – ಅದೆಲ್ಲ ಲೆಕ್ಕ ಇಟ್ಟೇ ಇಲ್ಲವೆಂದು ಹೇಳಿ ಬಿಟ್ಟ. ಅದರ ಸಂಬಂಧದ ಬಾಕಿ ತೀರಿಸುವುದೇನೂ ಉಳಿದಿಲ್ಲವೆ ಅಂದಾಗ ಯಾವ ಬಾಕಿ – ಏನು ಬಾಕಿ ಎಂಥದೂ ಇಲ್ಲ – ಅಂದು ಬಿಟ್ಟ. ಅಲ್ಲಿಗೆ ಮುಗಿದಂತಾಯಿತು.

ಈ ಪ್ರಕರಣದಿಂದ ಶೀನನ ಬಗ್ಗೆ ನನಗೇನೂ ಬೇಸರ – ಅಸಮಾಧಾನಗಳಿಲ್ಲ. ನನ್ನಿಂದ ಚೂರೊ ಪಾರೊ ಚಿಲ್ಲರೆ ಸಾಲ ತಗೊಂಡು ಮರೆತಿರುವವರ ಪಟ್ಟಿಯಲ್ಲಿ ಶೀನನ ಹೆಸರನ್ನೂ ದಾಖಲು ಮಾಡಿ ಸುಮ್ಮನಾಗಿದ್ದೇನೆ. ಈ ಪಟ್ಟಿಯಲ್ಲೂ ಸಾಕಷ್ಟು ಹೆಸರುಗಳಾಗಿವೆ. ಅಂತಹ ಮಿತ್ರರ ಬಗ್ಗೆ ನನಗಿರುವ ವಿಶ್ವಾಸ ಗೌರವಗಳಲ್ಲಿ ಎಂದೂ ಚ್ಯುತಿ ಬಂದಿಲ್ಲ. ಪಾಪ! ಅವರದೇನೂ ತಪ್ಪಿಲ್ಲ. ಏನೊ ಸಂಪೂರ್ಣವಾಗಿ ಮರೆತು ಬಿಟ್ಟಿರುತ್ತಾರೆ ಅಷ್ಟೆ. ನನಗೂ ಹಾಗೆ ಇದೆಲ್ಲ ಮರೆತುಹೋಗಿ ಬಿಟ್ಟರೆಷ್ಟು ಚೆನ್ನ ಎಂದುಕೊಳ್ಳುತ್ತೇನೆ.

ಶೀನ, ನಾನು, ಪದೆ ಪದೇ ಭೇಟಿ ಆಗುತ್ತಲೇ ಇರುತ್ತೇವೆ. ಮೊನ್ನೆ ತಾನೆ ಯಾರದೊ ಮನೇಲಿ ಡಿನ್ನರ್ ಪಾರ್ಟಿಯಲ್ಲಿ ಸೇರಿದ್ದೆವು. ಊಟವೆಲ್ಲ ಆದ ಮೇಲೆ ತಾಂಬೂಲ ಹಾಕಿಕೊಳ್ತಾ ಲೋಕಾಭಿರಾಮವಾಗಿ ಮಾತಾಡುತ್ತಾ ಇರುವಾಗ – ಸ್ವಲ್ಪವೂ ಎಗ್ಗಿಲ್ಲದೆ ಶೀನಾ ಹೇಳುತ್ತಿದ್ದ – 'ಅದೇನು ಸಾಲ ಸಾಲ ಅಂತ ನಮ್ಮ ದೇಶದವರು ಮಾಡ್ತಾರಯ್ಯ, ಇವರೆಂದಾದರೂ ಇಷ್ಟು ತೀರಿಸ್ತಾರಾ– ಶುದ್ಧ ನಾಚಿಕೆಗೇಡು. ಸಾಲ ಮಾಡಬಾರದು – ಮಾಡಿದರೆ ತೀರಿಸುವ ರಿವಾಜಿರಬೇಕು' ಇಂತಾ ಸ್ವಾಭಿಮಾನಿಗೆ ಆ ರೂಪಾಯಿ ನೆನಪು ಈಗಲಾದರೂ ಆಗಬೇಡವೇ. ಊಹುಂ, ಅದರ ಸುಳಿವೂ ಕಾಣಲಿಲ್ಲ.

ಈ ನಡುವೆ ನನಗೆ ಇನ್ನೊಂದು ನಗೆಯ ಆಲೋಚನೆ ಬರುತ್ತಿದೆ – ಮನಸ್ಸಿಗೆ ಅಷ್ಟೊಂದು ಹಿತವಾಗಿಲ್ಲದಿರುವ ಆಲೋಚನೆ ಅಂತಿಟ್ಕೊಳ್ಳಿ. ಆದರೂ ಆಗ ತಲೆಯಲ್ಲಿ ಸುಳಿಯುತ್ತದೆ. ಶೀನ ಹೇಗೆ ನನ್ನಿಂದ ಯಾವಾಗಲೊ ಒಂದು ರೂಪಾಯಿ ಇಸಗೊಂಡು ಪೂರ್ತಿ ಮರೆತುಬಿಟ್ಟಿದಾನೊ – ಹಾಗೇನೆ – ಅಂದರೆ – ಒಂದು ರೀತಿ ತರ್ಕಬದ್ಧವಾಗಿ ಹೇಳುವುದಾದರೆ – ನಾನೂ ಯಾರಿಗಾದರೂ ಹಿಂತಿರುಗಿಕೊಡಬೇಕಾದ ರೂಪಾಯಿ ವಿಚಾರವನ್ನೂ ಪೂರ್ತಿ ಮರೆತಿರಬಹುದಲ್ಲವೆ. ಒಬ್ಬರಿಗೆ ಇಬ್ಬರಿಗೆ ಅಲ್ಲ – ಹಲವರಿಗೇ ಕೊಡಬೇಕಾಗಿದ್ದಿರಬಹುದು. ಮರೆತಿರಬಹುದು ಎಂದು ಹೇಳಿ ಏನು ಉಪಯೋಗ – ಮರೆತಿದ್ದ ಮೇಲೆ. ಅವರಿಗೆ ಈ ಜನ್ಮದಲ್ಲಿ ಎಂದಾದರೂ ಆ ಪುಟ್ಟ ಸಾಲ ನಾ ತೀರಿಸಲು ಸಾಧ್ಯವೇ?

ಹಾಗೆ ನನ್ನಿಂದ ಬಾಕಿ ಬರಬೇಕಾಗಿದೆ ಎನ್ನುವವರು ಬಾಯಿಬಿಟ್ಟು ಹೇಳಲಿ ಎಂದು ನಾನು ಅಪೇಕ್ಷಿಸುತ್ತೇನೆ. ಅಂದರೆ ಅವರೆಲ್ಲರೂ ಒಟ್ಟಿಗೇ ಒಂದೇ ಬಾರಿಗೆ ಬಂದು ಕೇಳಿಬಿಡಲಿ ಎಂದಲ್ಲ ನಾ ಹೇಳೋದು. ಒಬ್ಬೊಬ್ಬರಾಗಿ ಒಬ್ಬರಾದಮೇಲೊಬ್ಬರು – ಅಕ್ಷರಾದಿ ಕ್ರಮ ಬೇಕಾದರೆ ಅನುಸರಿಸಲಿ – ಬಂದು ಕೇಳಲಿ. ಅಂದರೆ ಇಸ್ಪೀಟು ಆಡುವಾಗ ನಡೆದ ವ್ಯವಹಾರದಲ್ಲೊ – ಕ್ಲಬ್ ಕ್ಯಾಂಟೀನಿನಲ್ಲಿ ಬಿಲ್‌ಕೊಡುವಾಗ ಸಾಲದೆ ಬಿದ್ದ 20–25 ಪೈಸೆ ನನ್ನ ಹಣಕ್ಕೆ ಸೇರಿಸದ್ದರಲ್ಲೊ – ಕೊಟ್ಟದ್ದನ್ನು ಈ ಸಾಲದ ಪಟ್ಟಿಯಲ್ಲಿ ನಾನು ಸೇರಿಸುತ್ತಿಲ್ಲ. ಸೇರಿಸಲು ಇಷ್ಟಾನೂ ಪಡೋಲ್ಲ. ಆದರೆ ನಾ ಗಣನೆಗೆ ತೆಗೆದುಕೊಳ್ಳೋದು, ಸಿಲೋನಿಗೆ ನಾ ಹೊರಟುನಿಂತು ಟ್ಯಾಕ್ಸೀಗೊ ರಿಕ್ಷಾಕ್ಕೊ ಕೊಡಲೆಂದು ಆ ಸ್ನೇಹಿತರ ಕೈಯಿಂದ ಇಸಿದುಕೊಟ್ಟು ರೂಪಾಯಿ. ಅದನ್ನು ಹಿಂತಿರುಗಿ ಕೊಡೋದು ನ್ಯಾಯಬದ್ಧವಾದುದು.

ಎಲ್ಲಕ್ಕಿಂತ ಮಿಗಿಲಾಗಿ ನಾನೀಗ ಒಂದು ಹೊಸ ಪ್ರಚಾರ – ಹೊಸ ಚಳುವಳಿ ಆರಂಭಿಸಬೇಕೆಂದಿದ್ದೇನೆ. ''ಯುವ ಜನರೇ – ನೀವು ನೀತಿಗೆ ಮನ್ನಣೆ ಕೊಡಬೇಕೆಂಬ ಅಭಿಪ್ರಾಯದವರಾದರೆ – ಮೊದಲು ಪ್ರಾಮಾಣಿಕತೆಯನ್ನು ಪುನರುಜ್ಜೀವನಗೊಳಿಸಿರಿ – ಯಾವುದೊ ಖುಷಿ ವೇಳೆಯಲ್ಲಿ ಸ್ನೇಹಿತರಿಂದ ಇಸಗೊಂಡ ರೂಪಾಯಿಯನ್ನು ಮರೆಯದೆ ವಾಪಸುಕೊಡುವ ಪ್ರಾಮಾಣಿಕತೆ ಮೊದಲು ಬರಲಿ. ಮಹಾಮಹಾ ರಾಷ್ಟ್ರಗಳೆಲ್ಲ ನಿರ್ಮಾಣವಾದದ್ದು ಸತ್ಯ ಪ್ರಾಮಾಣಿಕತೆಗಳ ಭದ್ರವಾದ ತಳಪಾಯದ ಮೇಲೇನೆ.''

ನನ್ನ ಪ್ರಿಯ ಓದುಗರಲ್ಲಿ ಒಂದು ಸಣ್ಣ ವಿಜ್ಞಾಪನೆ. ದಯವಿಟ್ಟು ಓದಿದ ಮೇಲೆ ಈ ಲೇಖನವನ್ನು ಎಲ್ಲಾದರೂ ಅಜಾಗರೂಕತೆಯಿಂದ ನನ್ನ ಗೆಳೆಯ ಕ್ಯಾಪ್ಟನ್ ಶ್ರೀನಿವಾಸ್‌ನ ಕಣ್ಣಿಗೆ ಬೀಳುವ ಕಡೆ ಎಸೆಯಬೇಡಿ. ಯೂನಿವರ್ಸಿಟಿ ಕ್ಲಬ್ಬಿಗೆ ಅವನು ಆಗಾಗ ಬರುವುದುಂಟು.

# ಒನಕೆ ಭಾಗ್ಯ

**- ಜಿ.ವಿ. ನಿರ್ಮಲ**

ಒನಕೆ ಭಾಗ್ಯ ಎಂದ ಕೂಡಲೆ ಹಲವಾರು ಭಾಗ್ಯಗಳ ಪರಿಚಯವಿರುವ ಕನ್ನಡಿಗರಿಗೆ ಇದು ಯಾವ ಭಾಗ್ಯ? ಹೆಸರೇ ಕೇಳಿಲ್ಲವಲ್ಲ ಎಂದು ಆಶ್ಚರ್ಯವಾಗಬಹುದು. ಸುದ್ದಿ ಮಾಧ್ಯಮಗಳಲ್ಲಿ ಕಂಡು, ಕೇಳರಿಯದ ಭಾಗ್ಯವಿದ್ಯಾವುದು ಎಂದು ಕುತೂಹಲವಾಗಿರಬಹುದು. ತಮಗೂ ದೊರಕಬಹುದೇ ಎಂಬ ಆಸೆಯೂ ಹುಟ್ಟಿರಬಹುದು. ನಿಮ್ಮ ಆಶ್ಚರ್ಯ, ಕುತೂಹಲ, ಅನುಮಾನ, ಆಸೆಗಳೆಲ್ಲದಕ್ಕೂ ದೊಡ್ಡ ಪೂರ್ಣವಿರಾಮ ಹಾಕಿ. ಇದು ನನಗೆ ಮಾತ್ರ ಒದಗಿರುವ ವಿಶೇಷ ಭಾಗ್ಯ. ಸುತ್ತಿ ಬಳಸಿ ವಿಳಂಬ ಮಾಡುವುದೇಕೆ? ಹೇಳಿಬಿಡ್ತೀನಿ. ಕೇಳಿ. ಇತ್ತೀಚಿಗೆ ನಂಗೆ ಒಂದು ಒನಕೆ ಸಿಕ್ತು. ಸಿಕ್ತು ಎಂದೊಡನೆ 'ಎಲ್ಲಿ? ಹೇಗೆ? ರಸ್ತೆಯಲ್ಲೇ? ಮಾರ್ಕೆಟ್ಟಿನಲ್ಲೇ? ಅದೇನು ವಿಶೇಷ?' ಎಂಬ ಪ್ರಶ್ನೆಗಳೇಳುವುದು ಸಹಜ. ಆದರೆ ಅಲ್ಲೆಲ್ಲೂ ಅಲ್ಲ. ನಮ್ಮ ಮನೆಯ ಅಟ್ಟದ ಮೇಲೇ ಸಿಕ್ತು. 'ಅದೇನು ಮಹಾ. ನೀವೇ ಯಾವಾಗಲೋ ಇಟ್ಟಿರ್ತೀರಿ. ಈಗ ಸಿಕ್ತು ಎನ್ನುವಿರಲ್ಲಾ?' ಎಂದು ಸಿಟ್ಟಾಗ್ಬೇಡಿ. ಅದು ಅಲ್ಲಿರೋದು ನಂಗೆ ಮರ್ತೇ ಹೋಗಿತ್ತು. ಮೊನ್ನೆ ದಸರಾ ಹಬ್ಬಕ್ಕೆ ಗೊಂಬೆ ಪೆಟ್ಟಿಗೆ ತೆಗೆಯೋಕ್ಕೆ ಹೋದಾಗ, ಅಟ್ಟದ ಒಂದು ಬದಿಯಲ್ಲಿ ಉರುಳಿ ಅಡಗಿದ್ದ ಒನಕೆ, ಹನ್ನೆರಡು ವರ್ಷಗಳ ನಂತರ ನನ್ನ ಕಣ್ಣಿಗೆ ಕಾಣಿಸಿಕೊಂಡ್ತು. ಹಾಗಾಗಿ ಒನಕೆ ಸಿಕ್ತು ಎಂದೆ. ಎಷ್ಟೋ ಬಾರಿ ನಾವೇ ಒಂದೆರಡು ನೂರರ ನೋಟುಗಳನ್ನು ಎಲ್ಲಿಯೋ ಇಟ್ಟು ಮರೆತು, ಅನಂತರ ಅವು ಸಿಕ್ಕಿದಾಗ ಹಣ ಸಿಕ್ಕಷ್ಟೇ ಸಂತಸವಾಗುತ್ತದೆಯಲ್ಲವೇ? ಹಾಗೆ.

ಈ ಒನಕೆ ನಮ್ಮ ಅತ್ತೆಯವರ ಅಚ್ಚುಮೆಚ್ಚಿನ ಆಸ್ತಿ. ಹೊಸ ಮನೆ ಕಟ್ಟಿದಾಗ ಒರಳು ಹೂಳಿಸದಿದ್ದರೂ ಒನಕೆಯನ್ನು ಯಾರಿಗೂ ಕೊಡಬಾರದೆಂಬುದು ಅವರ ಇಚ್ಛೆಯಾಗಿತ್ತು. ಆದರೆ ಈಗಿನ ಕಾಲದ ಮನೆಯಲ್ಲಿ ಅದನ್ನು ಎಲ್ಲಿಡುವುದು? ಈಗೀಗ 'ಹೊಳೆಯುವುದೆಲ್ಲಾ ಚಿನ್ನವಲ್ಲ. ಹಳೆಯದೆಲ್ಲಾ ಚಿನ್ನ' ಎಂದು ವಾದಿಸುವ ಹಲವರು ಹಳೆಯ ಹಿತ್ತಾಳೆ, ತಾಮ್ರದ ಪಾತ್ರೆಗಳನ್ನು ಫಳಫಳನೆ ತೊಳೆದು ಡ್ರಾಯಿಂಗ್ ರೂಮಿನಲ್ಲಿಟ್ಟಿರುತ್ತಾರೆ. ಆದರೆ ಇದುವರೆಗೂ ಯಾರ ಮನೆಯ ಡ್ರಾಯಿಂಗ್ ರೂಮಲ್ಲೂ ಒನಕೆ ಇಟ್ಟಿರೋದನ್ನ ನಾನು ನೋಡಿಲ್ಲ. ನಮ್ಮ ಮನೆ ಡ್ರಾಯಿಂಗ್ ರೂಮಲ್ಲೂ ಒನಕೆಗೆ ಜಾಗವಿಲ್ಲ. 'ಒನಕೆ ಇಡಕ್ಕೆ ಅದೆಷ್ಟು ಮಹಾ ಜಾಗ ಬೇಕು.' ಅಂತೀರಾ? ಹೌದು ಹೆಚ್ಚು ಜಾಗ ಬೇಡ. ನಿಜ. ಆದರೆ ಒನಕೆಯನ್ನು ನೆಲದ ಮೇಲೆ ಮಲಗಿಸಿದರೆ ಅದರ ಘನತೆಗೆ ಕುಂದು ಎಂದು ನನ್ನ ಅನಿಸಿಕೆ. ಹಾಗಾಗಿ ಒಂದು ಮೂಲೆ ಬೇಕೇ ಬೇಕು. ಡ್ರಾಯಿಂಗ್ ರೂಮಿನ ಒಂದು ಮೂಲೆಯಲ್ಲಿ ಟಿವಿ, ಮತ್ತೊಂದು ಮೂಲೆಯಲ್ಲಿ ಯು.ಪಿ.ಎಸ್. ತಮ್ಮ, ತಮ್ಮ ಸ್ಥಾನವನ್ನು ಭದ್ರ ಪಡಿಸಿಕೊಂಡಿವೆ. ಮತ್ತೆರಡು ಮೂಲೆಗಳಲ್ಲಿ ಹೊರ ಹಾಗೂ ಒಳ ಬಾಗಿಲುಗಳು. ಮನೆಯ ಪ್ರತಿಯೊಂದು ಮೂಲೆಯಲ್ಲೂ ಮಂಚ, ಫ್ರಿಡ್ಜ್, ಬೀರು ಇತ್ಯಾದಿ ಸಾಮಾನುಗಳು ತುಂಬಿರುವಾಗ ಒನಕೆ ಇಡಲು ಜಾಗವೆಲ್ಲಿ? ಕೊನೆಗೆ ಅದು ಅಟ್ಟವೇರಿ, ಅಡಗಿ ಕುಳಿತಿತ್ತು.

ಈಗಲಾದರೂ ನಮ್ಮ ಅತ್ತೆಯವರ ಆತ್ಮಕ್ಕೆ ನಮಿಸಿ, 'ಕ್ಷಮಿಸಿ' ಎಂದು ಬೇಡಿಕೊಂಡು ಇದನ್ನು ಯಾರಿಗಾದರೂ ಕೊಟ್ಟು ಬಿಡುತ್ತೇನೆ ಎಂದು ದೃಢ ನಿರ್ಧಾರ ಮಾಡಿದೆ. ನಮ್ಮ ತಾಯಿ 'ಯಾರಾದರೂ ಅಡುಗೆಯವರಿಗೆ ಕೊಡು. ಭಕ್ಷ್ಯ ಮಾಡುವಾಗ ಕುಟ್ಟಲು ಉಪಯೋಗವಾಗತ್ತೆ. ಕಣಕ ಕುಟ್ಟುವ ಅಲ್ಲಿಗೆ ಹೋಗಿ ಹಣಕಿ ಇಣಕಿ ನೋಡುವಿರಿ, ಕಣಕ ಕುಟ್ಟೋ ಒನಕಿಲಿ ಹೊಡೆದರೆ ಕುಯ್ ಕುಯ್ ರಾಗ ಹಾಡುವಿರಿ' ಎಂದು ಕನಕದಾಸರೇ ಹಾಡಿಲ್ಲವೆ ಎಂದು ಹಾಡಿ, ಹಾಡಿನಲ್ಲಿಯೇ ಕಣಕ ಕುಟ್ಟಿ, ಒನಕೆಯನ್ನು 'ಒನಕಿ' ಮಾಡಿ ಮುದ್ದಾಡಿದರು. ಸರಿ ಹಾಗೇ ಮಾಡುತ್ತೇನೆ ಎಂದೆ. ಧೂಳು ಒರೆಸಿ ಇಡುತ್ತಿರುವಾಗ ಮನೆಗೆ ಬಂದ ನನ್ನ ತಂಗಿ 'ಅರೆ, ಮಗನ ಮದುವೆ ದೇವರ ಸಮಾರಾಧನೆಗೆ ಬೇಕಾಗತ್ತೆ. ಯಾರಿಗೂ ಕೊಡಬೇಡ. ಈಗ ಯಾರ ಮನೇಲೂ ಒನಕೆ ಇರಲ್ಲ. ಅನಾಯಾಸವಾಗಿ ಒನಕೆ ಸಿಕ್ಕಾಗ ಯಾರಿಗೋ ಯಾಕೆ ಕೊಡಬೇಕು?' ಎಂದು ಸಲಹೆ ಕೊಟ್ಟಳು. ನಮ್ಮ ಸಂಪ್ರದಾಯದಲ್ಲಿ ಮದುವೆಗೆ ಮುನ್ನ ದೇವರ ಸಮಾರಾಧನೆಯಂದು ಅರಿಶಿನ ಕುಟ್ಟುವ ಶಾಸ್ತ್ರಕ್ಕೆ ಒನಕೆ ಬೇಕು. ಒರಳಿಲ್ಲದಿದ್ದರೂ ಒಂದು ಪಾತ್ರೆಯೊಳಗೆ ಪುಡಿ ಮಾಡಿದ ಅರಿಶಿನವನ್ನೇ ಹಾಕಿ ಐದು ಜನ ಮುತ್ತೈದೆಯರು ಒನಕೆ ಹಿಡಿದು ಅರಿಶಿನ ಕುಟ್ಟುವಂತೆ ನಟನೆ ಮಾಡಿ, ಅರಿಶಿನ ಕುಟ್ಟುವ ಶಾಸ್ತ್ರ ಮಾಡುತ್ತಾರೆ. ನನಗೆ ನಗು ಉಕ್ಕಿ ಬಂತು. ಈಗ ತಾಳಿ ಕಟ್ಟುವ ಶಾಸ್ತ್ರವೇ ಶಾಸ್ತ್ರವಾಗಿ ಉಳಿದಿದೆ. ಕೈ ತುಂಬಾ ಬಳೆ, ಕೈಕಾಲುಗಳಿಗೆ ಮೆಹಂದಿ, ಹತ್ತಾರು ಸಾವಿರ ರೂಪಾಯಿಗಳ ಸೀರೆ ಉಟ್ಟು, ತಾಳಿ ಕಟ್ಟಿಸಿಕೊಂಡು ಸಂಭ್ರಮಿಸಿ, ಮೆರೆಯುವ ಮದುವಣಗಿತ್ತಿ ಮೂರನೆಯ ದಿನ ಮಧುಚಂದ್ರಕ್ಕೆ ಹೊರಡುವಾಗ ಬಿಚ್ಚಿಡುವ ತಾಳಿಯನ್ನು ಮತ್ತೆ ನೋಡುವುದು ಯಾವಾಗಲೋ? ಎಲ್ಲಾ ಮಹಿಳೆಯರೂ ಹೀಗೆ ಮಾಡಿದರೆ ಸರಗಳ್ಳರು ಸ್ವಲ್ಪ ಶಾಂತರಾಗುವುದರಲ್ಲಿ ಸಂಶಯವಿಲ್ಲ. ಹೀಗಿರುವಾಗ ಒಂದು ಶಾಸ್ತ್ರದ ನಟನೆಗೆ ಬೇಕಾಗುವ ಒನಕೆಗೆ ಯಾಕಿಷ್ಟು ಪ್ರಾಶಸ್ತ್ಯ? ಯಾಕಿಷ್ಟು ಕಾಳಜಿ? ಎಂದುಕೊಂಡೆ. ಹೇಗಾದರೂ ತಂಗಿಯ ಸಲಹೆಯನ್ನು ಅಲಕ್ಷ್ಯ ಮಾಡುವುದೇಕೆ. ಮತ್ತಷ್ಟು ದಿನ ಒನಕೆ ಮನೆಯಲ್ಲಿದ್ದರೆ ಅದಕ್ಕೆ ಊಟ, ಉಪಚಾರಗಳೂ ಬೇಕಿಲ್ಲ; ಪೂಜೆ, ನೈವೇದ್ಯಗಳೇನೂ ಮಾಡಬೇಕಿಲ್ಲ. ಇರಲಿ ಎಂದು ಇಟ್ಟೆ. ಆದರೆ ಎಲ್ಲಿಡುವುದು? ಮತ್ತೆ ಅಟ್ಟದ ಮೇಲೆ ಎಂದುಕೊಂಡೆ.

ಅಷ್ಟರಲ್ಲಿ ನನ್ನ ಪತಿದೇವರು ಮತ್ತೊಂದು ಸಲಹೆ ಕೊಟ್ಟರು. ಇನ್ನೇನು ನವೆಂಬರ್ ತಿಂಗಳು ಬಂತು. ಕನ್ನಡ ರಾಜ್ಯೋತ್ಸವಕ್ಕೆ ಒನಕೆಯ ಓಬವ್ವನ ಪಾತ್ರಧಾರಿಗೆ ಒನಕೆ ಬೇಕೇ ಬೇಕು. ಫ್ರೀ ಆಡ್‌ನಲ್ಲಿ 'ನಮ್ಮಲ್ಲಿ ಒನಕೆ ಬಾಡಿಗೆಗೆ ದೊರೆಯುತ್ತದೆ' ಎಂದು ಹಾಕಿಸೋಣ. ಯಾರಿಗಾದರೂ ಉಪಯೋಗಕ್ಕೆ ಬರುವುದರಲ್ಲಿ ಸಂಶಯವಿಲ್ಲ ಎಂದರು. ಓಹೋ! ಒಂದು ಒನಕೆ ಸದ್ದಿಲ್ಲದೆ, ಬಾಯಿ ಬಿಡದೆ, ಮೂಕವಾಗಿದ್ದುಕೊಂಡೇ ಇಷ್ಟು ಜನರ ಬಾಯಿ ಬುಡುಬುಡುಕೆ ಮಾಡುತ್ತಿದೆಯಲ್ಲಾ? ಎಂದು ಆಶ್ಚರ್ಯವಾಯಿತು. ಹಾಗಾದರೆ ಈ ಒನಕೆಯಲ್ಲಿ ಏನಾದರೂ ದೈವಿಕ ಶಕ್ತಿ ಇದೆಯೇ ಎಂಬ ಅನುಮಾನ ಹುಟ್ಟಿತು. ನಮ್ಮ ಅತ್ತೆಯವರಿಗೆ ತಮ್ಮ ಸಂಸಾರದಲ್ಲಿ ಬಳಸಿದ ಸಾಮಾನುಗಳೆಂದರೆ ವಿಪರೀತ ವ್ಯಾಮೋಹ. ಈಗಲೂ ಅವರ ಆತ್ಮ ಅದರ ಸುತ್ತವೇ ಸುತ್ತುತ್ತಿರಬಹುದು ಎಂದುಕೊಂಡೆ. ಆಗ ಥಟ್ಟನೆ ನನಗೆ ಅದನ್ನು ಎಲ್ಲಿಡಬೇಕೆಂದು ಹೊಳೆಯಿತು. ನಮ್ಮ ದೇವರ ಮನೆಯ ಒಂದು ಮೂಲೆಯನ್ನು ತೆರವುಗೊಳಿಸಿ ಅದನ್ನು ಅಲ್ಲಿ ಪ್ರತಿಷ್ಠಾಪಿಸಬೇಕೆಂದು ನಿಶ್ಚಯಿಸಿದೆ. ಒನಕೆಗೆ

ಅಷ್ಟು ಪ್ರಮುಖ ಸ್ಥಾನವನ್ನು ಕೊಟ್ಟ ಮೇಲೆ ಮತ್ತಷ್ಟು ಉಪಯೋಗ ಮಾಡಿಕೊಳ್ಳುವ ಆಲೋಚನೆ ಮಾಡಿದೆ. ನನ್ನ ಮಗನಿಗೆ ಮದುವೆಯಾಗಲಿ ಎಂದು ಪ್ರಾರ್ಥಿಸುತ್ತಾ, ಒನಕೆಗೇ ನಿತ್ಯ ಅರಿಶಿನ, ಕುಂಕುಮಗಳಿಂದ ಪೂಜೆ ಮಾಡಿದರೆ ಹೇಗೆ? ಯಾರ್‍ಯಾದರೂ 'ಇದ್ಯಾಕೆ ಒನಕೆಗೆ ಪೂಜೆ?' ಎಂದು ಕೇಳಿದರೆ ಇದೊಂದು ದೈವಿಕ ಒನಕೆ ಎಂದು ಪ್ರಚಾರ ಮಾಡಿದರೆ ಆಯ್ತು. 'ಪೀಕೆ' ಸಿನಿಮಾದಲ್ಲಿ ಇಂತಹ ಒಂದು ಪ್ರಯೋಗ ಮಾಡಿದಾಗ, ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳೆಲ್ಲಾ ಒಂದು ಕಲ್ಲಿಗೆ ಅಪಾರ ಭಕ್ತಿಯಿಂದ ನಮಸ್ಕರಿಸಿದ್ದು ನೆನಪಾಯ್ತು. ನಮ್ಮ ಒನಕೆಗೆ ಅಂತಹ ಯಾವುದಾದರೂ ಮಹತ್ವವನ್ನು ಸೇರಿಸಿದರೆ ಮತ್ತಷ್ಟು ವರ-ವಧುಗಳು ಅದಕ್ಕೆ ಹರಕೆ ಮಾಡಿಕೊಳ್ಳುವ ದಿನಗಳೂ ಬರಬಹುದು.

ಹೀಗೆ ದೇವರ ಕೋಣೆಯಲ್ಲಿ ಒನಕೆ ಪ್ರತಿಷ್ಠಾಪಿಸಲು ಯಾವ ಮೂಲೆ? ಉತ್ತರ, ದಕ್ಷಿಣ ಹೀಗೆ ಆಲೋಚಿಸುತ್ತಿರುವಾಗ ನನಗೆ ನೆನಪಾಗಿದ್ದು ವಾಸ್ತುಶಾಸ್ತ್ರಜ್ಞರು. ನಿಜ ಅವರ ಸಲಹೆ ಕೇಳಿದರೆ ಅವರು ಯಾವುದೋ ಆಧಾರ ಉಲ್ಲೇಖಿಸಿ ಒನಕೆಯನ್ನು ಯಾವ ಮೂಲೆಯಲ್ಲಿ, ಯಾವ ದಿಕ್ಕಿನಲ್ಲಿಡಬೇಕೆಂದು ದೊಡ್ಡ ವಾದವನ್ನೇ ಮಂಡಿಸುತ್ತಾರೆ. ಒಂದು ವೇಳೆ ಇಬ್ಬರು ವಾಸ್ತುತಜ್ಞರು ಬೇರೆ ಬೇರೆ ದಿಕ್ಕನ್ನು ಸೂಚಿಸಿದರೆ ಮತ್ತಷ್ಟು ಫಜೀತಿ ಖಚಿತ. ಕೊನೆಗೆ ಮಾಧ್ಯಮದವರು ಇದೇ ಸಮಯವೆಂದು 'ಒನಕೆ ವಾಸ್ತು' ಎಂದು ಒಂದು ಕಾರ್ಯಕ್ರಮವನ್ನು ನಡೆಸಿದರೂ ಆಶ್ಚರ್ಯವಿಲ್ಲ. ಹಾಗಾಗಿ ನಮ್ಮ ಮನೆಯ ಒನಕೆ, ಅದರ ಜೊತೆ ನಾನು ಟಿವಿಯಲ್ಲಿ ಬರುವುದಾದರೆ! ಅಬ್ಬಾ! ಈ ಒನಕೆ ನನ್ನ ಊಹಾಶಕ್ತಿ, ಕಲ್ಪನಾಶಕ್ತಿಗಳನ್ನೂ ಹೆಚ್ಚಿಸುತ್ತಿದೆಯಲ್ಲ? ಇದು ನಿಜಕ್ಕೂ ದೈವಾಂಶ ಉಳ್ಳದ್ದೇ ಸರಿ. ನನ್ನ ವಿಜ್ಞಾನಿ ಮಂಡೆಯನ್ನೂ ಅಲ್ಲೋಲಕಲ್ಲೋಲ ಮಾಡಿ ಮುಸಿನಗುತ್ತಿದೆಯಲ್ಲಾ! ಹೀಗಂದುಕೊಂಡ ಕೂಡಲೆ ನನ್ನ ವಿಜ್ಞಾನಿ ಮಂಡೆಗೆ ಅವಮಾನವಾಗಿರಬೇಕು. 'ಎಲೆ, ಅರೆ ವಿಜ್ಞಾನಿಯೇ, ನಿನಗೆ ವೈಜ್ಞಾನಿಕ ಮನೋಭಾವವಿದ್ದರೆ ಗ್ರಹಣದ ದಿನದವರೆಗೂ ಕಾಯುತ್ತಿರು. ಪೂರ್ಣಗ್ರಹಣಕಾಲದಲ್ಲಿ ಒನಕೆಯನ್ನು ಯಾವ ಆಧಾರವಿಲ್ಲದೆ ನಿಲ್ಲಿಸಿದರೂ ನೆಟ್ಟಗೆ ನಿಲ್ಲುವುದಂತೆ. ನೋಡಿಯೇ ಬಿಡು' ಎಂದು ಹುಕುಂ ಮಾಡಿತು. ಹೌದಲ್ಲಾ ಯಾವ ಖರ್ಚಿಲ್ಲದೆ ಒಂದು ವೈಜ್ಞಾನಿಕ ಸತ್ಯದರ್ಶನ ಮಾಡುವ ಅವಕಾಶ ಒದಗಿರುವಾಗ ಸುಮ್ಮನೆ ಬಿಡಬಾರದು ಎಂದುಕೊಂಡೆ. ಅಂತೂ ನಮ್ಮ ಒನಕೆಗೆ ಇದ್ದಕಿದ್ದಂತೆ ನಾನಾ ತರಹದ ಪ್ರಯೋಜನಗಳು ಕಂಡುಬಂತು.

ಅಷ್ಟರಲ್ಲಿ ನಮ್ಮ ಪಕ್ಕದ ಮನೆಯವರು 'ಏನ್ರೀ ಬಹಳ ಬಿಸಿಯಾಗಿದ್ದೀರಾ?' ಎಂದು ಮನೆಯೊಳಗೆ ಪ್ರವೇಶಿಸಿದರು. ಅವರಿಗೆ ಯಾವ ವಿಷಯದಲ್ಲಾದರೂ ವಿಪರೀತ ಕುತೂಹಲ. ಎಲ್ಲವನ್ನೂ ಕೇಳಿ ತಿಳಿದುಕೊಂಡು, ತಮ್ಮ ಅಮೂಲ್ಯ ಸಲಹೆ ಕೊಟ್ಟಿದ್ದಲ್ಲದೆ ಜಾಗ ಖಾಲಿ ಮಾಡುವುದಿಲ್ಲ. 'ಬಿಸಿ ಏನೂ ಇಲ್ಲ, ಆದರೆ ಸ್ವಲ್ಪ ಕಸಿವಿಸಿಯಲ್ಲಿದ್ದೇನೆ. ಬನ್ನಿ ಒಳಗೆ' ಎಂದು ಆಹ್ವಾನಿಸಿದೆ. ಸರಿ ನನ್ನ ಒನಕೆ ಪುರಾಣವನ್ನು ಅವರ ಮುಂದೆ ಒದರಿದೆ. ನನ್ನ ಹಸಿಹಸಿಯಾದ ಕಸಿವಿಸಿಯನ್ನು ಬಿಸಿಬಿಸಿಯಾಗಿ ಅವರೊಂದಿಗೆ ಹಂಚಿಕೊಂಡೆ. ಅದಕ್ಕೆ ಅವರಿಂದ ಒಳ್ಳೆಯ ಸಲಹೆಯೇ ಬಂತು. 'ರೀ, ಇದನ್ನು ಬೀದಿ ಬಾಗಿಲ ಹಿಂದೆ ಇಟ್ಟಿರಿ. ಈಗ ದಿನನಿತ್ಯ ಮನೆಗೆ ನುಗ್ಗಿ ಕಳ್ಳತನ ಮಾಡುವ ಸುದ್ದಿ ಓದ್ತೀವಿ. ಹಾಗೆ ಮನೆಗೆ ಯಾರ್‍ಯಾದರೂ ನುಗ್ಗಿದಾಗ, ಸರ್‍ರಂತ ಇದರಿಂದ ಎರಡು ಬಡಿದು ಆತ್ಮರಕ್ಷಣೆ

ಮಾಡಿಕೋಬಹುದು. ಇದನ್ನು ಮನೇಲಿಟ್ಕೋಳಕ್ಕೆ ಪರವಾನಗಿಯೂ ಬೇಕಿಲ್ಲ' ಎಂದು ತಮ್ಮ ಬುದ್ಧಿವಂತಿಕೆ ಮೆರೆದರು. ಆದರೆ ಆ ಕಳ್ಳನೇ ನಮಗಿಂತ ಮೊದಲು ಅದನ್ನು ಎತ್ತಿಕೊಂಡು ನಮಗೆ ನಾಲ್ಕು ಬಡಿದರೆ ನಮ್ಮ ಗತಿ ಏನು? ದೇವರ ಪಾದ ಸೇರುವುದು ಖಚಿತವಲ್ಲವೇ ಎಂದು ಯೋಚಿಸಿ, ನಯವಾಗಿ ಅವರ ಸಲಹೆಯನ್ನು ತಳ್ಳಿ ಹಾಕಿದೆ.

ಹೀಗೆ ಒನಕೆಗೆ ಸೂಕ್ತ ಸ್ಥಾನವನ್ನು ಹುಡುಕುತ್ತಿರುವಾಗ ಫೋನ್ ರಿಂಗುಣಿಸಿತು. ಒಂದು ಕೈಲಿ ಒನಕೆ ಹಿಡಿದಿರುವಂತೆಯೇ ಮತ್ತೊಂದು ಕೈನಿಂದ ಫೋನ್ ತೆಗೆದುಕೊಂಡೆ. 'ಹಲೋ ಏನ್ರೀ' ಎಂದ ನನ್ನ ಸ್ನೇಹಿತೆ ತಮ್ಮ ಮಗಳಿಗೆ ಮದುವೆ ನಿಶ್ಚಯವಾಯಿತೆಂದು ಹೇಳಿದರು. ಬಹಳ ದಿನಗಳಿಂದ ವರ ಹುಡುಕುತ್ತಿದ್ದ ಮಗಳಿಗೆ ಮದುವೆ ನಿಶ್ಚಯವಾಗಿ, ಕೇವಲ ಹದಿನೈದು ದಿನಗಳಲ್ಲಿ ಲಗ್ನ ಇಟ್ಟಿದ್ದರು. ಶುಭ ಸಮಾಚಾರ ಕೇಳಿ 'ಬಹಳ ಸಂತೋಷ. ನನ್ನಿಂದಾಗುವ ಕೆಲಸವೇನಿದ್ರೂ ಹೇಳಿ. ಮಾಡಲು ಸಿದ್ದ' ಎಂದು ನನ್ನ ಸ್ನೇಹ ಸುಧೆಯನ್ನು ಅವರ ಮೇಲೆ ಹರಿಸಿದೆ. 'ರೀ, ದೇವರ ಸಮಾರಾಧನೆಯಿಂದ ಬಂದು ನನಗೆ ಸಹಾಯ ಮಾಡಿ. ಅಂದು ಅರಿಶಿನ ಕುಟ್ಟುವ ಶಾಸ್ತ್ರಕ್ಕೆ ತಾವು ಬರಲೇ ಬೇಕು' ಎಂದಾಗ ನನಗೆ ನನ್ನ ಕೈಲಿದ್ದ ಒನಕೆ 'ಕಿಸಕ್' ಎಂದು ನಕ್ಕಂತೆ ಭಾಸವಾಯಿತು. 'ರೀ, ನನ್ನ ಕೈಲಿರುವ ಒನಕೆ ನಿಮಗೆ ಕಾಣಿಸ್ತಾ ಇದ್ಯಾ?' ಎಂದು ಕೇಳಿದೆ. ಆಗ ಅವರು 'ಅರೆ, ನಿಮ್ಮ ಮನೇಲಿ ಒನಕೆ ಇದ್ಯಾ? ಒಳ್ಳೆ ವಿಷ್ಯ ಹೇಳಿದ್ರಿ. ಖಂಡಿತ ತೊಗೊಂಡು ಬನ್ನಿ. ನಮ್ಮ ಮನೇಲಿ ಒರಳಿದೆ. ಆದರೆ ಒನಕೆ ಎಲ್ಲಿಂದ ತರೋದು ಎಂದು ಯೋಚಿಸ್ತಿದ್ದೆ. ನಮ್ಮ ಅತ್ತೆಯವರು ಮೊಮ್ಮಗಳ ಮದುವೆಗೆ ಅರಿಶಿನ ಕುಟ್ಟುವ ತನಕ ಒರಳನ್ನು ಯಾರಿಗೂ ಕೊಡಬೇಡ ಎಂದು ತಾಕೀತು ಮಾಡಿದ್ರು' ಅಂದಾಗ ನಾನು ಸುಸ್ತು. 'ಅವರತ್ತೆ ಒರಳಿನಲ್ಲಿ, ನಮ್ಮತ್ತೆ ಒನಕೆ ಸೇರಿದಾಗ....' ಎಂದು ಹಾಡು ಬರೆಯುವಷ್ಟು ಸ್ಫೂರ್ತಿ ಬಂತು. ಈ ಒನಕೆ ಆಂಟೆನಾ ತರಹ ದಿವ್ಯಸಂದೇಶಗಳನ್ನೋ, ಮೇಘಸಂದೇಶಗಳನ್ನೋ ಕಳಿಸುವುದೇ ಎಂದು ಅನುಮಾನ ಬಂತು.

ಅಷ್ಟರಲ್ಲಿ ಬಾಗಿಲ ಕರೆ ಗಂಟೆ ಬಾರಿಸಿತು. ನನ್ನ ಸ್ನೇಹಿತೆಗೆ ಮತ್ತೊಮ್ಮೆ ಅಭಿನಂದನೆಗಳನ್ನು ತಿಳಿಸಿ ಬಲಗೈಲಿದ್ದ ಒನಕೆಯನ್ನು ಊರಿಕೊಂಡು ಖುರ್ಚಿಯಿಂದ ಬಹಳ ಸಲೀಸಾಗಿ ಎದ್ದೆ. ಆಹಾ! ಈ ಒನಕೆಯನ್ನು ಊರುಗೋಲಿನಂತೆ ಬಳಸಬಹುದಲ್ಲವೇ ಎಂದು ಸೋಜಿಗವಾಯಿತು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಮಾಸ್ತಿಯವರು ಗಾಂಧಿ ಬಜ಼ಾರ್‌ನಲ್ಲಿ ನಡೆಯುವಾಗ ಛತ್ರಿ ಬಿಚ್ಚಿಟ್ಟುಕೊಂಡೇ ಹೋಗುತ್ತಿದ್ದುದು ಮಳೆಗಾಗಲೀ, ಬಿಸಿಲಿಗಾಗಲೀ ಅಲ್ಲ; ಮರದ ಮೇಲಿದ್ದ ಕಾಗೆಗಳ ಗಲೀಜಿನಿಂದ ತಪ್ಪಿಸಿಕೊಳ್ಳಲು ಎಂದು ಎಲ್ಲರಿಗೂ ತಿಳಿದ ವಿಷಯವಾಗಿತ್ತು. ಹಾಗೆ ವಿವಿಧೋಪಯೋಗಿ ಒನಕೆಯನ್ನು ಊರುಗೋಲಾಗಿ ಬಳಸಿದರೆ ತಪ್ಪೇನು?

ಬಾಗಿಲು ತೆಗೆದಾಗಲೂ ನನ್ನ ಹೊಸ ಊರುಗೋಲನ್ನು ಕೈಲಿ ಹಿಡಿದುಕೊಂಡಿದ್ದೆ. ಅನಾಥಾಶ್ರಮಕ್ಕೆ ವಂತಿಗೆ ಕೇಳಲು ಬಂದಿದ್ದವರು ನನ್ನ ಕೈಲಿದ್ದ ಆಯುಧ ನೋಡಿ ಕಕ್ಕಾಬಿಕ್ಕಿಯಾದರು. 'ಏನ್ ಮೇಡಂ. ಇದ್ಯಾಕೆ ತೆಗೆದುಕೊಂಡು ಬಂದ್ರಿ?' ಎಂದು ತಡವರಿಸಿದರು. ತಿಂಗಳಿಗೊಮ್ಮೆ ಬಂದು, ಒಂದು ರಸೀತಿ ಪುಸ್ತಕ ಮುಂದೆ ಹಿಡಿದು ದುಡ್ಡು

ಕೇಳುತ್ತಿದ್ದವರ ಜೊತೆ ಕಳೆದ ಬಾರಿ ಸ್ವಲ್ಪ ಖಾರವಾಗಿ ಮಾತಾಡಿ ಕಳುಹಿಸಿದ್ದೆ. ಈಗ ನಾನು ಓಬವ್ವನ ಅವತಾರದಲ್ಲಿ ಬಾಗಿಲು ತೆಗೆದಾಗ ಅವರಿಗೆ ಸ್ವಲ್ಪ ಗಾಬರಿಯಾಗಿದ್ದು ಸಹಜ. 'ಏನೋ ಕೆಲಸ ಮಾಡ್ತಿದ್ದೆ. ಹಾಗೇ ಬಂದೆ' ಎಂದು ಹೇಳಿದೆ. ಆದರೂ ಅವರಿಗೆ ಸಮಾಧಾನವಾಗಲಿಲ್ಲ. ಗಾಬರಿ ತಗ್ಗಲಿಲ್ಲ. 'ಮೇಡಂ ಮುಂದಿನ ವಾರ ಬರ್ತೀನಿ. ತಮ್ಮ ಕೆಲಸ ಮುಗಿಸ್ಕೊಳ್ಳಿ' ಎಂದು ಧಡಧಡನೆ ಮೆಟ್ಟಲಿಳಿದು ಹೊರಟೇ ಹೋದರು. ಎಷ್ಟು ಹೇಳಿದರೂ ಬಿಡದೆ ಬಲಾತ್ಕಾರವಾಗಿ ಹಣ ಕೇಳುತ್ತಿದ್ದವರು ಒನಕೆ ದರ್ಶನದಿಂದ ಹೀಗೆ ಅದೃಶ್ಯರಾಗಿದ್ದು ನೋಡಿ ನನಗೆ 'ಅಯ್ಯೋ ಪಾಪ' ಎನ್ನಿಸಿತು. ದ್ವಾಪರಯುಗದಲ್ಲಿ ವಿಶ್ವಾಮಿತ್ರನ ಶಾಪದಿಂದ ಒಬ್ಬ ಹುಡುಗ ಒನಕೆ ಹೆತ್ತು, ಆ ಒನಕೆಯೇ ಯದುವಂಶದ ನಾಶಕ್ಕೆ ಕಾರಣವಾದ ಕಥೆ ಮಹಾಭಾರತದಲ್ಲಿದೆ. ಕಲಿಯುಗದ ನನ್ನ ಒನಕೆಗೆ ಅನುಮಾನಾಸ್ಪದವಾಗಿ ವಂತಿಗೆ ಕೇಳುವವನನ್ನು ಅಟ್ಟುವ ಶಕ್ತಿಯಾದರೂ ಇದೆಯಲ್ಲಾ ಎಂದು ಹೆಮ್ಮೆಯಾಯಿತು.

ಇದೇ ಗುಂಗಿನಲ್ಲಿ, ಅವರ ಪೀಕಲಾಟದ ಬಗ್ಗೆಯೇ ಯೋಚಿಸುತ್ತಾ, ಅದೇ ಭಂಗಿಯಲ್ಲಿ ನಿಂತಿದ್ದಂತೆಯೇ ನನ್ನ ಬರಹಗಾರ್ತಿ ಸ್ನೇಹಿತೆ ಗಾಯಿತ್ರಿ ಮೂರ್ತಿ ನಮ್ಮ ಮನೆಗೆ ಅಪರೂಪವಾಗಿ ಬಂದಿಳಿದಳು. ನನ್ನ ಅವತಾರ ಕಂಡು ಅವಳಿಗೂ ನಗು ಬಂತು. ಅವಳಿಗೆ ಭಯಪಡಬೇಡವೆಂದು ಭರವಸೆ ನೀಡಿ, ಒನಕೆ ಸಿಕ್ಕಾಗಲಿಂದ ಇದುವರೆವಿಗೂ ನನಗಾದ ಅನುಭವಗಳನ್ನು ಹೇಳಿದೆ. ಅವಳು 'ಈಗಿನ ಮಕ್ಕಳು ಇಂತಹ ವಸ್ತುಗಳನ್ನು ನೋಡುವುದೇ ಅಪರೂಪ. ಹಂಡೆ, ತಂಬಿಗೆ, ಒರಳು, ಒನಕೆ ಇಂತಹ ಶಬ್ದಗಳು ಕನ್ನಡ ಭಾಷೆಯಿಂದಲೇ ಮರೆಯಾಗಿ ಹೋಗುವ ದಿನಗಳು ಬರಲಿವೆ. ಇಂತಹ ಪರ್ವ ಕಾಲದಲ್ಲಿ ನೀನು ಈ ಒನಕೆಯನ್ನು ಜೋಪಾನವಾಗಿಡು. ಮುಂದಿನ ಪೀಳಿಗೆಯವರಿಗೆ ನಮ್ಮ ಸಂಸ್ಕೃತಿಯನ್ನು ಪರಿಚಯಿಸಲು ಇಂತಹ ವಸ್ತುಗಳು ಅತ್ಯಗತ್ಯ' ಎಂದು ದೀರ್ಘ ಭಾಷಣವನ್ನೇ ಬಿಗಿದು ಧನ್ಯಳಾದಳು. ಅಯ್ಯೋ, ಚಮಚ ಎನ್ನುವ ದಿನನಿತ್ಯ ಬಳಸುವ ವಸ್ತುವಿಗೆ 'ಸ್ಪೂನ್' ಎಂದೇ ಉಲಿಯುವ ಕನ್ನಡ ಕಂದಮ್ಮಗಳು ಒನಕೆಯನ್ನು ಒಲವಿನಿಂದ ಓಲೈಸುವರೇ ಎಂದು ಮನಸ್ಸಿನಲ್ಲೇ ವಿಲವಿಲಗುಟ್ಟಿದೆ. ಹೇಗೇ ಆದರೂ ನಾನು ಕನ್ನಡ ನಾಡಿನ ನೆಲದಲ್ಲಿ, ಅದೂ ಚಿತ್ರದುರ್ಗದಲ್ಲೇ 'ಅ, ಆ, ಇ, ಈ' ತಿದ್ದಿದವಳಾದ್ದರಿಂದ, ಕನ್ನಡ ನಾಡಿನ ವೀರ ರಮಣಿ, ಗಂಡು ಭೂಮಿಯ ವೀರ ನಾರಿ ಓಬವ್ವನ ಬಗ್ಗೆ ನನಗೆ ಅಪರಿಮಿತ ಅಭಿಮಾನ. ಸಾಕಷ್ಟು ಬಾರಿ ಓಬವ್ವನ ಕಿಂಡಿಯೊಳಗೆ ನುಗ್ಗಿ ನಿಬ್ಬೆರಗಾಗಿದ್ದೇನೆ. ಅಂತಹ ದೇಶಾಭಿಮಾನಿಯಾದ ನಾನು ಒನಕೆಯನ್ನು ಗೌರವಿಸುವುದಕ್ಕೆ ಹಿಂಜರಿಯುವೆನೇ? ಆಗಲಿ ಎಂದು ಒಪ್ಪಿಕೊಂಡೆ. ಅಷ್ಟರಲ್ಲಿ ನಮ್ಮ ಸಂಭಾಷಣೆಯನ್ನು ಕೇಳಿದ ಅವಳ ಪತಿ ಕೃಷ್ಣಮೂರ್ತಿ 'ಒನಕೆಯಲ್ಲಿ ಲಕ್ಷ್ಮಿ, ಗೌರಿ, ಸರಸ್ವತಿ ಹೀಗೆ ಮೂರೂ ದೇವಿಯರ ಸಾನಿಧ್ಯವಿರುತ್ತದೆ. ಅದು ಪೂಜಾ ಯೋಗ್ಯವೆನ್ನುವುದರಲ್ಲಿ ಸಂದೇಹವೇ ಇಲ್ಲ. ನೀವು ಖಂಡಿತ ಇದಕ್ಕೆ ಯೋಗ್ಯ ಸ್ಥಾನವನ್ನು ಹುಡುಕಿ' ಎಂದರು. ಕೂಡಲೆ ಗಾಯತ್ರಿ 'ಹಾಗಾದರೆ ನಿಮ್ಮ ಮನೆಯ ಕಾಂಪೌಂಡಿನಲ್ಲಿ ಒಂದು ಗುಡಿಯನ್ನು ಕಟ್ಟಿ, ಪ್ರತಿಷ್ಠಾಪಿಸಿ ಬಿಡು. ಬೇಕಾದರೆ 'ಒನಕೆ ದೇವಿ ಅಷ್ಟೋತ್ತರ' ವೆಂದು ನಾನೇ ಬರೆದು ಕೊಡುತ್ತೇನೆ' ಎಂದು ಒನಕೆ ದೇವಿಗೆ ತನ್ನ ಸೇವೆ ಸಲ್ಲಿಸಲು ಕಟಿಬದ್ಧಳಾದಳು. ಜೊತೆಗೆ ಬಂದ ಆದಾಯದಲ್ಲಿ ತನಗೂ ಶೇಕಡ ಇಪ್ಪತ್ತು ಭಾಗವೆಂದು ಕರಾರು ಹಾಕುವುದನ್ನು ಮಾತ್ರ ಮರೆಯಲಿಲ್ಲ.

ಹೀಗೆ ಬೆಳಗ್ಗಿನಿಂದ ಸಾಯಂಕಾಲದವರೆಗೆ ಹತ್ತಾವತಾರ ತಾಳಿದ ಒನಕೆ ನನ್ನ ತಲೆಯಲ್ಲಿ ಬಲವಾದ ಹುಳವನ್ನೇ ಬಿಟ್ಟು ಅಲ್ಲಾಡಿಸಿತು. ಅಂದು ಸಾಯಂಕಾಲ ಕನ್ನಡದ ಧಾರಾವಾಹಿಗಳನ್ನು ನೋಡುತ್ತಿದ್ದರೂ ನನಗೆ ಒನಕೆಯದೇ ಚಿಂತೆ. ಆಗ ಇದ್ದಕ್ಕಿದ್ದಂತೆ ಮಸಾಲೆ ಪುಡಿಗಳನ್ನು ಕುಟ್ಟಿ ಪುಡಿ ಮಾಡಿದರೆ ರುಚಿ ಜಾಸ್ತಿ ಎಂದು ಬಿತ್ತರಿಸುತ್ತಿದ್ದ ಜಾಹೀರಾತು ನನ್ನ ಗಮನ ಸೆಳೆಯಿತು. 'ಕೈಲಿ ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕೆ ಅಲೆದರಂತೆ' ಎನ್ನುವ ಹಾಗೆ ಮನೆಯಲ್ಲೇ ಒನಕೆ ಇರುವಾಗ ಮಸಾಲೆ ಪುಡಿಗಳನ್ನು ಕುಟ್ಟಿ ಪುಡಿ ಮಾಡಿ, ರುಚಿರುಚಿಯಾಗಿ ಉಣ್ಣಬಹುದಲ್ಲವೇ ಎಂಬ ಆಲೋಚನೆ ಬಂತು. ಆದರೆ ಒರಳು? ಅದಲ್ಲದೆ ಕುಟ್ಟುವುದಿರಲಿ, ಸ್ವಲ್ಪ ಜಾಸ್ತಿ ಪುಡಿಗಳನ್ನು 'ಮಿಕ್ಸಿ'ಯ ಗುಂಡಿ ಒತ್ತಿ, ನುಣ್ಣಗೆ ಬೀಸಿದರೂ ಕೈಕಾಲು, ಮಂಡಿ ನೋವು ಬರುವ ವಯಸ್ಸಿನಲ್ಲಿ ಮಸಾಲೆಗಳನ್ನು ಕುಟ್ಟಿ ಪುಡಿ ಮಾಡುವುದು, ರುಚಿಯಾಗಿ ಅಡುಗೆ ಮಾಡುವುದು, ಹೊಟ್ಟೆ ತುಂಬಾ ಉಣ್ಣುವುದು ಎಲ್ಲವೂ ದೂರದ ಮಾತು. ನಾವು ಉಣ್ಣುವುದೆಲ್ಲವೂ 'ಡಯಟ್' ಮತ್ತು 'ಲಿಮಿಟ್'. ಹಾಗೊಂದು ವೇಳೆ ಕುಟ್ಟಿ ಪುಡಿ ಮಾಡುವುದಾದರೆ ಯದ್ವಾತದ್ವಾ ಧಾರಾವಾಹಿಗಳನ್ನು ನೋಡುವಂತೆ ಮಾಡುವ ನಮ್ಮ ಮನೆಯ ಟಿವಿ ಪರದೆಯನ್ನು ಮಾತ್ರ.

ಸದ್ಯದಲ್ಲಿ ಆಯುಧ ಪೂಜೆಯಂದು ಗೊಂಬೆಗಳ ಜೊತೆ ಒನಕೆಗೂ ಅರಿಶಿನ-ಕುಂಕುಮ ಹಚ್ಚಿ, ಹೂಮುಡಿಸಿ, ಶೃಂಗರಿಸಿ ಪೂಜೆಗೆ ಇಟ್ಟಿದ್ದೇನೆ. ಹಾಗೇನಾದರೂ ಒನಕೆ ನನಗೆ ಅದ್ಭುತವಾದ ವರ ಕರುಣಿಸಿ, ನನ್ನ ಇಚ್ಛೆಗಳನ್ನು ಪೂರೈಸಿದ್ದೇ ಆದರೆ ಈ ಒನಕೆಯನ್ನು ವಂಶಪಾರಂಪರ್ಯವಾದ ಆಸ್ತಿಯೆಂದೂ, ಅದನ್ನು ನಮ್ಮ ವಂಶದವರೇ ಕಾಪಾಡಬೇಕೆಂದು ಅಮೆರಿಕದಲ್ಲಿರುವ ನನ್ನ ಮಗ-ಸೊಸೆಗೆ ಕೊಡೋಣವೆಂದಿದ್ದೇನೆ. ಅಷ್ಟರೊಳಗೆ ದಯವಿಟ್ಟು ನಮ್ಮ ಮನೆಗೆ ಬಂದು ನಮಸ್ಕರಿಸಿ, ಅದರ ಆಶೀರ್ವಾದ ಪಡೆಯಿರಿ.


ಇದೀಗ ಬಿಡುಗಡೆಯಾಗಿದೆ

**ವಿವೇಕಚೂಡಾಮಣಿ**

**(ಪೂಜ್ಯ ಸ್ವಾಮೀ ಪರಮಾರ್ಥಾನಂದಜೀ ಅವರ ಪ್ರವಚನಗಳ ತಾತ್ಪರ್ಯ)**

ಕನ್ನಡ ತಾತ್ಪರ್ಯ ಸಂಗ್ರಹ

**ಎಂ. ಶಿವಕುಮಾರ್**

**ಪುಟಗಳು:** 484 **ಬೆಲೆ: ರೂ.** 450/-

ಪ್ರತಿಗಳಿಗೆ ಸಂಪರ್ಕಿಸಿ: ವೇದಾಂತ ಬುಕ್ ಹೌಸ್,

ಚಾಮರಾಜಪೇಟೆ, ಬೆಂಗಳೂರು.

ಜಂಗಮವಾಣಿ: 90364 20629

# ಮೌಲ್ಯಾಧಾರಿತ ಮಾಪನ

**- ಲಲಿತಾ ಧ್ವಜನ್**

ಅರವತ್ತು ವರ್ಷಗಳ ಹಿಂದೆ ಮೆಟ್ರಿಕುಲೇಷನ್ ಅಥವಾ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಉತ್ತರ ಪತ್ರಿಕೆಗಳು ಶಿಕ್ಷಕರ ಮನೆಗಳಲ್ಲೇ ನಡೆಯುತ್ತಿತ್ತು. ಇಂದಿನ ಸಾಮೂಹಿಕ ಮೌಲ್ಯಮಾಪನ ಎಂಬ ಪದ್ಧತಿ ಇರಲಿಲ್ಲ. ಉತ್ತರ ಪತ್ರಿಕೆಗಳು ಸೀಲ್ ಆದ ಲಕೋಟೆಗಳಲ್ಲಿ ಅಂಚೆಯಲ್ಲಿ ಬರುತ್ತಿದ್ದವು. ನಂಬರ್ ಹಾಕಿದ ಮೇಲೆ ಶಿಕ್ಷಕರು ಅವುಗಳನ್ನು ಸೀಲಾದ ಲಕೋಟೆಗಳಲ್ಲಿ ವಾಪಸ್ ಕಳಿಸುತ್ತಿದ್ದರು. ನಂಬಿಕೆಯ ಆಧಾರದ ಮೇಲೆ ಅದು ನಡೆಯುತ್ತಿತ್ತು. ಶಿಕ್ಷಕರೂ ಆಗ ಪ್ರಾಮಾಣಿಕರಾಗಿದ್ದರು.

ಅಂತಹ ಶಿಕ್ಷಕರಲ್ಲಿ ಮೈಸೂರಿನ ಬಿ.ಟಿ.ಎಸ್. ಒಬ್ಬರು. ಅವರಿಗೂ ಉತ್ತರ ಪತ್ರಿಕೆಗಳು ಬರುತ್ತಿದ್ದವು.

ಒಂದು ದಿನ ಬಿ.ಟಿ.ಎಸ್. ಮೌಲ್ಯಮಾಪನದಲ್ಲಿ ತೊಡಗಿದ್ದರು.

**ರೈತ ಬುಟ್ಟಿ ಹಣ್ಣನ್ನು ಅಲ್ಲೇ ಬಿಟ್ಟು ಬರಿಗೈಲಿ ಏಕೆ ವಾಪಸಾದ?**

'ಸ್ವಾಮೀರೇ,' ಎಂಬ ಧ್ವನಿ ಕೇಳಿತು.

ಬಿ.ಟಿ.ಎಸ್. ತಲೆ ಎತ್ತಿ ನೋಡಿದರು. ರೈತನೊಬ್ಬ ಅವರ ಮುಂದೆ ನಿಂತಿದ್ದ. ಅವನ ತಲೆಯ ಮೇಲೆ ಒಂದು ಬುಟ್ಟಿ. ಅದರಲ್ಲಿ ಹಲಸಿನ ಹಣ್ಣು ಸೇರಿದಂತೆ ವಿವಿಧ ಹಣ್ಣುಗಳು.

'ಉಸ್..' ಎಂದು ತಲೆಯ ಮೇಲಿನ ಭಾರಿ ಇರಿಸಿ ಅವರ ಮುಂದೆ ಕುಳಿತ.

'ಇಷ್ಟೊಂದು ಹಣ್ಣ ಎಲ್ಲಿಗೆ ಒಯ್ತಾ ಇದೀಯ?' ಎಂದು ಬಿ.ಟಿ.ಎಸ್. ಕನಿಕರದಿಂದ ವಿಚಾರಿಸಿದರು.

'ಇಲ್ಲ ಸ್ವಾಮಿ. ನಿಮ್ಮ ಕಡೀಕೆ ಬಂದೆ' ಎಂದು ಹೇಳಿದ ಅವನು ಬೆವರು ಒರೆಸಿಕೊಂಡ.

'ಯಾರು ನೀನು? ಎಲ್ಲಿಂದ ಬಂದೆ? ಏನಾಗಬೇಕು ನಿನಗೆ? ಇಷ್ಟೊಂದು ಹಣ್ಣು ಏಕೆ ಹೊತ್ತುಕೊಂಡು ಇಲ್ಲಿಗೇಕೆ ಬಂದೆ?' ಎಂದು ಬಿ.ಟಿ.ಎಸ್. ಪ್ರಶ್ನೆಮಾಲೆಯನ್ನೇ ಅವನ ಮುಂದಿಟ್ಟರು.

'ನಿಮ್ಮ ಕಡೀಕೆ ಬಂದೆ ಸ್ವಾಮಿ. ಮೆಟ್ರಿಕುಲೇಷನ್ ಪೇಪರ್ ನಿಮ್ಮ ತಾವ ಬಂದೈತಂತೆ ಎಂದು ಕೇಳಿದೆ. ನನ್ನ ಮಗ ಮೆಟ್ರಿಕುಲೇಷನ್‌ಗೆ ಕಟ್ಟವ್ನೆ. ಒಸಿ ನೋಡಿ' ಎಂದ.

'ಹೌದಾ? ಯಾರು ಹೇಳಿದ್ರು?'

'ಆಫೀಸನಲ್ಲಿ ಕೇಳಕೊಂಡು ಬಂದೆ ಸ್ವಾಮಿ.'

'ನೋಡಪ್ಪಾ ಹೀಗೆಲ್ಲಾ ಬರಬಾರದು. ನೀನು ಕೇಳುವಂತೆಯೂ ಇಲ್ಲ, ನಾವುಗಳು ಕೊಡುವಂತೆಯೂ ಇಲ್ಲ' ಎಂದು ಬಿ.ಟಿ.ಎಸ್. ಹೇಳಿದರು.

'ಹೆಂಗಾರ ನೋಡಿ ಸ್ವಾಮಿ. ಲಗ್ನ ನಿಂತೋಯ್ತದೆ. ಬಡವಾ ಸ್ವಾಮಿ' ಎಂದೆಲ್ಲಾ ಗೋಗರೆಯತೊಡಗಿದ.

ಬಿ.ಟಿ.ಎಸ್. ಅವನ ಪೇಪರ್ ತೆಗೆದು ನೋಡಿದರು. ಉತ್ತರ ಪತ್ರಿಕೆ ಪೂರ್ತಿ ಖಾಲಿ. ಮಗ ಏನೇನೂ ಬರೆದಿರಲಿಲ್ಲ. ಖಾಲಿ ಹಾಳೆಯನ್ನೇ ಕೊಟ್ಟಿದ್ದ.

ಅದನ್ನು ಅವನಿಗೆ ತೋರಿಸಿ 'ನೋಡಪ್ಪ ಇದೇ ನಿನ್ನ ಮಗನ ಪೇಪರ್' ಎಂದು ಅವನಿಗೆ ಆ ಖಾಲಿ ಹಾಳೆಗಳನ್ನು ತೋರಿಸಿದರು. 'ಇದಕ್ಕೆ ಎಷ್ಟು ನಂಬರ್ ಹಾಕಲಿ?' ಎಂದು ಅವನನ್ನೇ ಕೇಳಿದರು.

ರೈತ ತಲೆ ಮೇಲೆ ಕೈ ಹೊತ್ತು ಕುಳಿತ. 'ಎಲ್ಲಾ ಬರೆದಿವ್ನಿ ಅಂತ ಬಡಾಯಿ ಕೊಚ್ಚಿದ ಆ ಬಡ್ಡಿ ಹೈದ. ಸ್ವಾಮೇರೆ ತಪ್ಪು ತಿಳ್ಕೊಬೇಡಿ ಒಯ್ತೀನಿ' ಎಂದು ನಿರಾಸೆಯಿಂದ ಮೇಲೆದ್ದ.

'ಈ ಬುಟ್ಟಿ ಹಣ್ಣು ವಾಪಸ್ ತೊಗೊಂಡು ಹೋಗು' ಎಂದು ಬಿ.ಟಿ.ಎಸ್. ಅವನಿಗೆ ಸೂಚಿಸಿದರು.

'ಸ್ವಾಮೇರೆ ನಿಮ್ಮ ಸತ್ಯ ನಿಷ್ಠೆ ಕಂಡು ಪರಮಾನಂದವಾಯ್ತು. ಈ ಹಣ್ಣು ಎಲ್ಲಾ ಇಲ್ಲೇ ಇರಲಿ. ಮಕ್ಳು ಮರಿ ಇರೋ ಮನೆ ಇದು. ಎಲ್ರೂ ತಿಂದು ಸಂತೋಷಪಡಲಿ. ಬ್ಯಾಡಾನ್ನ ಬೇಡಿ. ಸಿವ ಮೆಚ್ಚಕ್ಕಿಲ್ಲ. ಆ ಪರಮಾತ್ಮ ನಿಮ್ಮನ್ನೂ ನಿಮ್ಮ ಸಂಸಾರವನ್ನೂ ಚೆನ್ನಾಗಿ ಇಟ್ಟಿರಲಿ, ಬತ್ತೀನಿ ಸ್ವಾಮಿ' ಎಂದು ಬುಟ್ಟಿ ಹಣ್ಣನ್ನು ಅಲ್ಲೇ ಬಿಟ್ಟು ಬರಿಗೈಲಿ ಹೊರಟು ಹೋದ.

ಬಿ.ಟಿ.ಎಸ್. ಆ ಬುಟ್ಟಿಯನ್ನೇ ನೋಡುತ್ತಾ ಕುಳಿತರು.

---

## ಹಾಗಿದ್ದರೆ ನೀವು...?

ಒಬ್ಬ ದಿನಪತ್ರಿಕೆಯ ಫೋಟೊಗ್ರಾಫರ್‌ಗೆ ಅರ್ಜೆಂಟ್ ಫೋಟೊ ತೆಗೆಯಬೇಕಿತ್ತು. ಕಂಪನಿಗೆ ಫೋನ್ ಮಾಡಿ ಟು ಸೀಟರ್ ವಿಮಾನ ಗೊತ್ತು ಮಾಡಿದ. 'ಏರ್‌ಪೋರ್ಟ್‌ಗೆ ಹೋಗಿ ಅಲ್ಲಿ ಒಂದು ವಿಮಾನ ರೆಡಿ ಆಗಿರುತ್ತದೆ, ನೀವು ಅದನ್ನು ಬಳಸಬಹುದು' ಎಂದ ಸಂದೇಶ ಬಂದಿತು. ಇವನು ಕ್ಯಾಮೆರಾ ಹೊತ್ತು ತರಾತುರಿಯಲ್ಲಿ ಏರ್‌ಪೋರ್ಟ್‌ಗೆ ಧಾವಿಸಿದ. ಅಲ್ಲೊಂದು ವಿಮಾನ ರೆಡಿ ಇತ್ತು. ಇಂಜಿನ್ ಆನ್ ಆಗಿತ್ತು. ಪೈಲಟ್ ಸೀಟಿನಲ್ಲಿ ಕುಳಿತಿದ್ದ. ಫೋಟೊಗ್ರಾಫರ್ ಒಳನುಗ್ಗಿ ಧಿಡೀರೆಂದು ಬಾಗಿಲು ಮುಚ್ಚಿ 'ಸರಿ ಹೊರಡು' ಎಂದ. ವಿಮಾನ ಮೇಲೇರಿತು. ತಾನು ಹೋಗಬೇಕಾದ ಜಾಗ ಹೇಳಿದ.

'ಅಲ್ಲಿಗೇಕೆ?' ಪೈಲಟ್ ಕೇಳಿದ.

'ನಾನೊಬ್ಬ ಫೋಟೊಗ್ರಾಫರ್. ಅಲ್ಲಿ ಚಿತ್ರ ತೆಗೆಯಬೇಕಿದೆ.'

'ಹಾಗಿದ್ದರೆ ನೀವು ನನ್ನ ಇನ್‌ಸ್ಟ್ರಕ್ಟರ್ ಅಲ್ಲ' ಎಂದ ಪೈಲಟ್ ನಡಗುವ ದನಿಯಲ್ಲಿ.

**Advertisement**

**Advertisement**

**- ದಂನಆ**

- ಓದಿದವನಿಗೆ ಒಂದೇ ಕೆಲಸ. ಓದದೇ ಇದ್ದವನಿಗೆ ಎಲ್ಲವೂ ಕೆಲಸ.
- ಲಕ್ಷ್ಮಣ ಬಾಣಗಳಿಂದ ಸೇತುವೆ ಕಟ್ಟಿದ - ರಾಮಾಯಣದಲ್ಲಿ. ಇಂದಿನ ಇಂಜನಿಯರ್‌ಗಳು ಬಿಲ್‌ಗಳಿಂದ ಸೇತುವೆ ಕಟ್ಟುತ್ತಾರೆ.
- ದೇವರು ಇಲ್ಲದೇ ಇರೋ ಸತ್ಯ ಮೊದಲು ಗೊತ್ತಾಗುವುದು ಅರ್ಚಕರಿಗೇ ಅಲ್ಲವೆ?
- ವಿ ಆರ್ ಆಲ್ ಬಾರ್ನ್ ಆರ್ಟಿಸ್ಟ್ಸ್. ದಿ ಚಾಲೆಂಜ್ ಈಸ್ ಟು ರಿಮೇನ್ ಆರ್ಟಿಸ್ಟ್ಸ್.
- ಆತ್ಮಹತ್ಯೆ ಮಾಡಿಕೊಳ್ಳಬೇಡಿ; ವಾಟ್ಸ್ ಅಪ್ ತೆಗೆದುಹಾಕಿ; ಫೇಸ್‌ಬುಕ್ ಡಿಆಕ್ಟಿವೇಟ್ ಮಾಡಿ; ಇಮೇಲ್ ಖಾತೆ ಮುಚ್ಚಿ. ನೀವು ಸತ್ತೇ ಹೋದಿರಿ ಎಂದು ಜನ ತಿಳಿದುಕೊಳ್ಳುತ್ತಾರೆ.
- ಜಾರುವುದಕ್ಕಾಗಿ ಮನಸ್ಸು ಸದಾ ಸನ್ನದ್ಧವಾಗಿರುತ್ತದೆ.


**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಸೂರ್ಯ ಒಂಟಿ, ಆದರೂ ಪ್ರಕಾಶಿಸುತ್ತಾನೆ.
- ದಿ ಜೀನಿಯಸ್ ಆಫ್ ಐನ್‌ಸ್ಟೀನ್ ಲೀಡ್ಸ್ ಟು ಹಿರೋಷಿಮ.
- ಋಷಿ ಮೂಲ, ನದಿ ಮೂಲ, ಸ್ತ್ರೀ ಮೂಲ ಹುಡುಕಬಾರದು ಎಂದು ಹೇಳಿದ್ದು ಮಾಹಿತಿ ಕಲೆ ಹಾಕಲು ಅಸಮರ್ಥನಾದ ಸೋಮಾರಿ ಹೇಳಿದ ಮಾತೆ?
- ಬದುಕೆಂದರೆ ವೇಷಾಂತರದಲ್ಲಿರುವ ಸಾವು.
- ಎವೆರಿಒನ್ ಈಸ್ ಎ ಬೋರ್ ಟು ಸಂಒಂನ್ ಎಲ್ಸ್. ಬಟ್ ದಟ್ ಈಸ್ ನಾಟ್ ಇಂಪಾರ್ಟೆಂಟ್. ಒನ್ ಶುಡ್ ನಾಟ್ ಬಿ ಎ ಬೋರ್ ಟು ಒನ್ ಸೆಲ್ಫ್.
- ನಿರಾಶಾವಾದಿ: ಪರಿಸ್ಥಿತಿ ಇನ್ನಷ್ಟು ಹದಗೆಡಲು ಸಾಧ್ಯವಿಲ್ಲ.
  ಆಶಾವಾದಿ: ಇಲ್ಲ ಸಾಧ್ಯವಿದೆ.
- ಸೂಪರ್ ಮ್ಯಾನ್, ಬ್ಯಾಟ್ ಮ್ಯಾನ್, ಸ್ಪೈಡರ್ ಮ್ಯಾನ್. ಮತ್ತೆ ಹನುಮಾನ್ ಎಲ್ಲಿ?
- ಮರ್ಯಾದೆಯನ್ನು ನೀವು ಆಯ್ಕೆ ಮಾಡಿಕೊಂಡರೆ ಹಣ ಸಿಕ್ಕರೂ ಸಿಗಬಹುದು. ಹಣವನ್ನು ಆಯ್ಕೆ ಮಾಡಿಕೊಂಡರೆ ಮರ್ಯಾದೆ ಸಿಗಲೂ ಬಹುದು ಅಥವಾ ಸಿಗದೇ ಇರಬಹುದು.
- ಫುಲ್ ಮಾರ್ಕ್ಸ್ ಫಾರ್ ಯುವರ್ ಅಂಡರ್ ಪರ್‌ಫರ್ಮಾನ್ಸ್!

# ಆನಂದರ ''ಬರೆಯದ ಪತ್ರಗಳು''

**ಪರಿಚಯಿಸಿದವರು: ವಾಣೀ ಸುರೇಶ್**

''ಬರೆಯದ ಪತ್ರಗಳು'' ತೇಜು ಪಬ್ಲಿಕೇಷನ್ಸ್,
ನಂ. 233, 7ನೇ 'ಎ' ಅಡ್ಡರಸ್ತೆ, ಶಾಸ್ತ್ರಿ ನಗರ, ಬೆಂಗಳೂರು – 560028




ಅಪರಂಜಿಯ ಓದುಗರಿಗೆ ಸುಪರಿಚಿತರಾದ ಲೇಖಕ ಶ್ರೀ ಆನಂದರ ''ಬರೆಯದ ಪತ್ರಗಳು'' ಕೊನೆಗೆ ಬರೆಯಲ್ಪಟ್ಟಿವೆ! ಅಷ್ಟೇ ಅಲ್ಲ, ಅವು ಸುದೈವವಶಾತ್ ಅಚ್ಚಿನಮನೆಯನ್ನೂ ಕಂಡಿವೆ – ಎಂದಾಗ ತಿಳಿಹಾಸ್ಯಪ್ರಿಯ ಓದುಗರಿಗೆ ರಸದೌತಣವನ್ನು ನೀಡುವಂಥಾ ಶ್ಲಾಘ್ಯ ಕೈಂಕರ್ಯವನ್ನು ಕೈಗೊಂಡಿದ್ದಕ್ಕಾಗಿ ತವರಿನ ವತಿಯಿಂದ ನಾವು ಅವರನ್ನು ಅಭಿನಂದಿಸಬೇಕಾದ್ದೇ.

ಪ್ರಚಲಿತ ವಿದ್ಯಮಾನಗಳತ್ತ ಸದಾ ಕೊಂಕುನೋಟ ಹರಿಸಿ ತನ್ಮೂಲಕ ಹಾರಿಸುವ ಸಂಕ್ಷಿಪ್ತ ಆಹ್ಲಾದಕರ ''ತುಂತುರು'' ಹನಿಗಳನ್ನು ಸಿಂಚನ ಮಾಡುತ್ತಿರುವುದಷ್ಟೇ ಅಲ್ಲದೇ 'ವಾರೆನೋಟ' ಎಂಬ ನಗೆ ಸಂಕಲನವನ್ನೂ ಹೊರತಂದಿರುವ ಶ್ರೀ ಆನಂದರು ಇದೀಗ ಹಾಸ್ಯಲೇಖನಗಳ ಹೊಸ ಗೊಂಚಲೊಂದನ್ನು ಲೋಕಾರ್ಪಣೆ ಮಾಡಿದ್ದಾರೆ. ''ದನಂಆ'' ಎಂದು ತಮ್ಮ ಹೆಸರನ್ನು ತಿರುಚುವಷ್ಟೇ ಸಲೀಸಾಗಿ ದೈನಂದಿನ ಅನುಭವಗಳನ್ನು ತಿರುಚಿ ನಗಿಸಬಲ್ಲರು ಅವರು ಎನ್ನುವುದನ್ನು ಈ ಚೆಂದದ ಪುಸ್ತಕ ಸಮರ್ಥವಾಗಿ ನಿರೂಪಿಸುತ್ತದೆ. ಅವರೇ ತಮ್ಮನ್ನು ಒಂದೆಡೆ ಗುರುತಿಸಿಕೊಂಡಿರುವಂತೆ, ಕಳೆದ ವರ್ಷಗಳ ಯಶಸ್ವೀ ಲೇಖಕ ಶ್ರೀ ಎಚ್ಚೆಸ್ಕೆಯವರ ಗರಡಿಯಲ್ಲಿ ಪಳಗಿದವರು ಅವರು. ಅಂದಮೇಲೆ ಅವರ ಬರಹಗಳ ಚುರುಕಾದ ಸಂಕ್ಷಿಪ್ತತೆಯ ಗುಟ್ಟು ಬಯಲಾದಂತೆಯೇ ಅಲ್ಲವೇ? ಚಿಕ್ಕದಾಗಿ, ಚೊಕ್ಕವಾಗಿ ಬರೆಯುವ ಅವರ ಆಪ್ತಶೈಲಿಯು ಇಂದಿನ ಅವಸರ ಬದುಕಿನ ಆಸಕ್ತ ಓದುಗರಲ್ಲಿ ನಗೆಯ ಬುಗ್ಗೆಯನ್ನುಕ್ಕಿಸುವುದರಲ್ಲಿ ಯಶಸ್ವಿಯಾಗಿದೆ ಎನ್ನುವುದು ನಿಸ್ಸಂಶಯದ ಮಾತು. ''ಬರೆಯದ ಪತ್ರಗಳು'' ನಿಜಕ್ಕೂ ಮುದನೀಡುವಂತಹ ಚೇತೋಹಾರಿ ಪ್ರಯತ್ನ. ಹಾಸ್ಯಪ್ರಿಯರ ಗ್ರಂಥಭಂಡಾರದಲ್ಲಿ ಅವಶ್ಯವಾಗಿ ಇರಲೇಬೇಕಾದಂಥಹ ಸಭ್ಯ ತಿಳಿ ಹಾಸ್ಯದಿಂದ ಕೂಡಿದ ಒಂದು ಕಿರುಹೊತ್ತಗೆ.

ಅನ್ಯರ ಪತ್ರಗಳನ್ನೋದುವುದು ಅಸಭ್ಯತೆಯ ಪರಮಾವಧಿಯಾದರೂ, ಈ ಲವಲವಿಕೆಯ ಪತ್ರಗಳನ್ನೋದುವುದು ಹಾಸ್ಯಪ್ರಿಯರೆಲ್ಲರ ಪ್ಲೆಸೆಂಟ್ ಡ್ಯೂಟಿಯಾಗಲಿ, ಲೇಖಕರ ಲ್ಯಾಪ್‌ಟಾಪಿನಿಂದ ಇನ್ನಷ್ಟು, ಮತ್ತಷ್ಟು ಬೆರಳಚ್ಚುಗಳು ಹೊರಹೊಮ್ಮಿ ಓದುಗರನ್ನು ನಕ್ಕು ನಗಿಸಿ ಹಗುರಾಗಿಸಲಿ ಎಂಬುದೇ ನನ್ನ ಹಾರೈಕೆ.

# ಕೈ ತುತ್ತು

**- ಬೇಲೂರು ರಾಮಮೂರ್ತಿ**

ಅದೊಂದು ಆಸ್ಪತ್ರೆಯ ವಾರ್ಡು. ಸುಮಾರು 80 ವರ್ಷದ ಹೆಂಗಸು ಹಾಸಿಗೆಯಲ್ಲಿ ಮಲಗಿದ್ದಾಳೆ. ಹೋದ ವಾರವೇ ಅವಳನ್ನು ಮನೆಗೆ ಕಳಿಸ್ತೀವಿ ಎಂದಿದ್ದರು. ಆದರೆ ಇತ್ತೀಚೆಗೆ ಉಂಟಾದ ಆರೋಗ್ಯದ ಏರುಪೇರಿನಿಂದಾಗಿ ಅವಳು ಇನ್ನೂ ಅಲ್ಲೇ ಇದ್ದಾಳೆ. ಆದರೆ ಆಸ್ಪತ್ರೆಗೆ ಯಾರು ಬಂದರು ಯಾರು ಹೋದರು ಎನ್ನೋದು ಅವಳಿಗೆ ತಿಳೀತಿಲ್ಲ. ಅವಳು ಯಾರೊಂದಿಗೂ ಮಾತಾಡಲಾರಳು. ಸುಮ್ಮನೇ ಆ ಕಡೆ ಈ ಕಡೆ ನೋಡುತ್ತಾಳೆ. ಪ್ರತೀದಿನ ಅವಳ ಮಗ ಬರ್ತಿದ್ದ. ಒಂದೊಂದು ದಿನ ಮನೆಯಿಂದ ಊಟ ಬರ್ತಿತ್ತು. ಇಲ್ಲದಿದ್ದರೆ ಆಸ್ಪತ್ರೆಯ ಊಟವನ್ನೇ ಮಾಡುತ್ತಿದ್ದಳು. ಮಗ ತಟ್ಟೆಯಲ್ಲಿ ಅನ್ನ ಕಲಸಿ ಅವಳ ಕೈಗೆ ಇಟ್ಟು ಊಟ ಮಾಡು ಎಂದರೆ ಅವಳು ಮೊದಲು ಮಗನಿಗೆ ಕೈ ತುತ್ತು ಹಾಕೋಳು. ಅವನು ತಿಂದ ಮೇಲೆಯೇ ಅವಳು ತಿನ್ನುತ್ತಿದ್ದಳು. ಈಗೊಂದು ವಾರದಿಂದ ಮಗ ಬಂದಿಲ್ಲ. ಮಗ ಬರದೇ ಇದ್ದಾಗ ಅವಳು ಊಟಾನೇ ಮಾಡಿಲ್ಲ. ನರ್ಸು ಡಾಕ್ಟರು ಬೈದು ಸ್ವಲ್ಪ ಆಹಾರ ಕೊಟ್ಟಿದ್ದಾರೆ. ಅವಳು ಕೈ ತುತ್ತು ಹಿಡಿದು ಆ ಕಡೆ ಈ ಕಡೆ ನೋಡುತ್ತಾಳೆ. ಕಡೆಗೆ ಅಲ್ಲಿ ಬಂದ ನರ್ಸಿನ ಕೈಗೇ ಕೊಡುತ್ತಾಳೆ. ನರ್ಸು ಅದನ್ನು ತಿಂದರೆ ಅವಳಿಗೆ ಸಂತೃಪ್ತಿ. ಮಗನಿಗೆ ಮದುವೆಯಾಗದಿದ್ದರಿಂದ ಸೊಸೆಯೂ ಇಲ್ಲ ಮೊಮ್ಮಕ್ಕಳೂ ಇಲ್ಲ. ನೀನು ಮದುವೆಯಾಗಿ ನಿನಗೆ ಬೇಕಾದ ಹಾಗೆ ಇರು ಅಂತ ಅವಳು ಹೇಳಿದ್ದರೂ ಮಗ ಮದುವೆಯಾಗಿರಲಿಲ್ಲ. ಆದರೆ ಮದುವೆಯಾಗದೇ ಇರೋದಕ್ಕೆ ಅಮ್ಮ ಖಂಡಿತಾ ಕಾರಣಳಲ್ಲ, ನನಗೇ ಈ ಸಂಸಾರ ವ್ಯವಸ್ಥೆಯಲ್ಲಿ ಆಸಕ್ತಿ ಇಲ್ಲ ಅಂತ ಮಗ ಹೇಳುತ್ತಿದ್ದ.

ಅವತ್ತು ಡಾಕ್ಟರ ಛೇಂಬರಿನಲ್ಲಿ ಈ ಹೆಂಗಸಿನ ಬಗ್ಗೆ ಮಾತುಕತೆ ನಡೀತಿತ್ತು. ಅವಳು ಇದ್ದರೆ ಇನ್ನೊಂದು ವಾರ ಇರಬಹುದು ಅಂತ ಎಲ್ಲ ಪರಿಣಿತರ ಅಭಿಪ್ರಾಯ. ಡಾಕ್ಟರು ಮಾತಾಡ್ತಾ ನಾನು ಎಷ್ಟೋ ಹೆಂಗಸರಿಗೆ ಚಿಕಿತ್ಸೆ ಕೊಟ್ಟಿದೀನಿ. ಎಲ್ಲ ಹೆಂಗಸರೂ ಒಂದೇ ತರಹ. ಏನಂದ್ರೆ ಅವರು ಕೈ ತುತ್ತು ಹಾಕದಿದ್ರೆ ಮಕ್ಕಳು ಉಪವಾಸ ಇದ್ದುಬಿಡುತ್ತಾರೆ ಅಂತ. ಮೊದ ಮೊದಲು ಮಕ್ಕಳ ಮೇಲೆ ಅವರು ಸಂಪೂರ್ಣ ಅಧಿಕಾರ ಹೊಂದಿರುತ್ತಾರೆ. ಮಗನಿಗೆ ಮದುವೆಯಾದ ಮೇಲೆ ಅದು ಭಾವನಾತ್ಮಕವಾಗಿ ಕಡಿಮೆ ಆಗುತ್ತದೆ. ಆದರೂ ಕಾಫಿ ಕುಡಿದ್ಯಾ, ತಿಂಡಿ ತಿಂದ್ಯಾ, ಊಟ ಆಯ್ತಾ, ಅಂತ ಕೇಳೋದು ಮಾತ್ರ ಬಿಡೋಲ್ಲ. ಅದೇ ಪ್ರಶ್ನೆಯನ್ನು ತಿರುಗಿಸಿ ಮಗ ಕೇಳಿದರೂ ಸರಿ ಕೇಳದಿದ್ದರೂ ಸರಿ ಅವಳಿಗೆ ಬೇಜಾರಿಲ್ಲ. ನಾನು ಹೇಗಾದರೂ ಇರ್ತೀನಿ ಆದರೆ ಮಕ್ಕಳು ಚೆನ್ನಾಗಿ ಇರಲೇಬೇಕು ಎನ್ನುವ ಹಠದ ಸ್ವಭಾವದವರು ಈ ಹೆಂಗಸರು. ಈಗ ನಾನು ಹೇಳ್ತಿರುವ ಹೆಂಗಸು ಕೂಡಾ ಇಂಥವಳೇ. ಮಗ ಬರಲಿಲ್ಲ ಅಂತ ಅವಳ ಕಣ್ಣುಗಳು ಯಾಪಾಟಿ ಹುಡುಕ್ತಿವೆ ಅಂತ ನಿಮಗೆಲ್ಲಾ ಗೊತ್ತಾಗ್ತಾ ಇದೆ. ಆದರೆ ಈ ಹೆಂಗಸಿಗೆ ನಾವು ಏನಾದರೂ ಹೇಳಬೇಕಾದರೆ ಹೇಗೆ ಎನ್ನೋದೇ ನಮ್ಮ ಸಮಸ್ಯೆ. ಏಕೆಂದರೆ ಅವಳಿಗೆ ಈಗ ಮುಖದಲ್ಲಿ ಭಾವನೆಗಳು ಅರಳುತ್ತಿಲ್ಲ. ಆದರೆ ಕಣ್ಣುಗಳಲ್ಲಿ ಹೊಳಪಿದೆ. ಅವಳು ಬೆಳಗಿನಿಂದ ಒಂದೇ ರೀತಿ ಇರುತ್ತಾಳೆ. ಆದರೆ ಒಮ್ಮೆ ಮಗನನ್ನು ಕಂಡಳೋ ಅವಳ ಎಲ್ಲ ಭಾವನೆಗಳೂ ಚಿಗುರುತ್ತವೆ. ಮಗ ಯಾವ ಕಡೆ ಇದ್ದರೆ ಆ ಕಡೆ ಅವಳ ಕಣ್ಣಾಲಿಗಳು ತಿರುಗುತ್ತವೆ. ಮಗ ಅವಳ ಹಣೆ ಸವರುತ್ತಾ ಏನಮ್ಮಾ ಅಂದರೆ ಮಗನ ಕೈ ಹಿಡಿದು ಕಣ್ಣಿಗೊತ್ತಿಕೊಳ್ಳುತ್ತಾಳೆ.

ನಾವು ಹೇಗಾದರೂ ಮಾಡಿ ಅವಳಿಗೆ ವಿಷಯ ತಿಳಿಸಿಬಿಡೋಣ ಸರ್. ಅವಳು ಇನ್ನೊಂದು ವಾರ ಇರಬಹುದು ಅಷ್ಟೆ ಅಂತ ನನಗನಿಸುತ್ತೆ. ಆದರೆ ನಾನೂ ಒಂದು ಹೆಣ್ಣಾಗಿರೋದರಿಂದ ತಿಳಿಸೋದು ಬೇಡ ಅನಿಸುತ್ತೆ. ನಿರ್ಧಾರ ನಿಮ್ಮದು ಸರ್ ಎಂದರು ಡಾಕ್ಟರ್ ವಸುಂಧರ.

ಆ ಹೆಂಗಸನ್ನು ನೋಡೋಕೆ ಮಗ ಬರುವಾಗ ಅವನ ಜೊತೆ ನಾಲ್ಕಾರು ಸ್ನೇಹಿತರು ಬರೋರು. ಅವರೂ ಈ ಹೆಂಗಸನ್ನು ಮಾತಾಡಿಸಿ ಹೋಗೋರು. ಡಾಕ್ಟರು ಮರುದಿನ ಆ ಸ್ನೇಹಿತರನ್ನು ಬರೋಕೆ ಹೇಳಿದರು. ಸುಮಾರು ಹನ್ನೊಂದು ಗಂಟೆಗೆ ಆ ಹೆಂಗಸಿನ ಮಗನ ಸ್ನೇಹಿತರು ನಾಲ್ಕಾರು ಜನ ಬಂದರು. ಡಾಕ್ಟರ ಜೊತೆ ಅವರೆಲ್ಲರೂ ಬಂದು ಆ ಹೆಂಗಸಿನ ಬಳಿ ನಿಂತರು. ಎಲ್ಲರೂ ಒಬ್ಬೊಬ್ಬರಾಗಿ ಹೇಗಿದೀರ ಅಮ್ಮಾ ಅಂದು ಕೇಳುತ್ತಾ ಕಣ್ಣೊರಿಸಿಕೊಂಡರು. ಆ ಹೆಂಗಸು ಎಲ್ಲರತ್ತಲೂ ನೋಡುತ್ತಾ ಏನನ್ನೋ ಹುಡುಕುವವಳಂತೆ ಕಂಡಳು. ಎಲ್ಲರನ್ನೂ ರೆಪ್ಪೆಯಾಡಿಸದೇ ನೋಡಿದಳು. ನಂತರ ಡಾಕ್ಟರ ಕಡೆ ನೋಡಿದಳು. ಮತ್ತೆ ಹುಡುಗರ ಕಡೆ ನೋಡಿದಳು. ಮಾತಾಡಲು ನಾಲಿಗೆ ಹೊರಳದೇ ಇದ್ದಾಗ ಕೈಗಳು ಚಲಿಸಲಾರಂಭಿಸಿದವು. ನರ್ಸು ಊಟ ತಂದು ಒಂದು ತುತ್ತು ಆ ಹೆಂಗಸಿನ ಬಾಯಿಯ ಹತ್ತಿರ ತಗೊಂಡು ಹೋದಾಗ ಆ ಹೆಂಗಸು ಆ ತುತ್ತನ್ನು ತನ್ನ ಕೈಗೆ ತೆಗೆದುಕೊಂಡು ಸುಮ್ಮನೇ ಇದ್ದಳು. ಮತ್ತೆ ಎಲ್ಲ ಹುಡುಗರ ಕಡೆ ನೋಡಿದಳು, ಡಾಕ್ಟರ ಕಡೆ ನೋಡಿದಳು, ತುತ್ತನ್ನು ತಟ್ಟೆಗೆ ಹಾಕಿಬಿಟ್ಟಳು. ಆಗ ಡಾಕ್ಟರು ತಮ್ಮ ಜೋಬಿನಿಂದ ಒಂದು ವಾರದ ಹಿಂದಿನ ವೃತ್ತ ಪತ್ರಿಕೆಯನ್ನು ತೆಗೆದರು. ಅಷ್ಟರಲ್ಲಿ ಡಾಕ್ಟರ್ ವಸುಂಧರ ಅವರು ಅಳುತ್ತಾ ಬೇಡಿ ಡಾಕ್ಟರೇ, ಖಂಡಿತಾ ಬೇಡಿ. ನನಗೇ ತಡ್ಕೊಳೋಕೆ ಆಗ್ತಿಲ್ಲ ಅಂದು ಕಣ್ಣೊರಿಸಿಕೊಂಡರು.

ಮಗನ ಸ್ನೇಹಿತರು ಹೊರಟಾಗ ಡಾಕ್ಟರು ಈ ಹೆಂಗಸು ಇನ್ನೊಂದು ವಾರ ಇರಬಹುದು ಕಾಲ ಮುಗಿದ ಮೇಲೆ ಹೇಳಿಕಳಿಸ್ತೀನಿ. ನೀವೆಲ್ಲಾ ಬಂದು ಮುಂದಿನ ಕೆಲಸ ನಡೆಸಿ ಎಂದರು. ಎಲ್ಲರೂ ಆ ಹೆಂಗಸಿಗೆ ಅಮ್ಮಾ ಹೋಗಿಬರ್ತೀವಿ ಅಂದು ಹೇಳಿ ಹೊರಟರು. ಹೇಗಾದರೂ ಮಾಡಿ ಆ ಹೆಂಗಸಿಗೆ ಊಟ ಮಾಡಿಸಮ್ಮಾ ಅಂತ ನರ್ಸಿಗೆ ಹೇಳಿ ಹೊರಟಾಗ ಡಾಕ್ಟರ ಕಣ್ಣಲ್ಲೂ ನೀರು ಬರುತ್ತಿತ್ತು.

ಡಾಕ್ಟರುಗಳೆಲ್ಲಾ ಸಾವಧಾನವಾಗಿ ಕೂತು ಚರ್ಚಿಸಿ ಈ ನಿರ್ಧಾರಕ್ಕೆ ಬಂದಿದ್ದರು. ಏನೆಂದರೆ ಈಗ ಒಂದು ವಾರದ ಹಿಂದೆ ಅಮ್ಮನನ್ನು ನೋಡಲೆಂದು ಊಟ ತಗೊಂಡು ಸ್ಕೂಟರಿನಲ್ಲಿ ಹೊರಟಿದ್ದ ಆ ಹೆಂಗಸಿನ ಮಗ ಅಪಘಾತದಲ್ಲಿ ಸತ್ತಿರುವ ವಿಷಯವನ್ನು ಆ ಹೆಂಗಸಿಗೆ ಹೇಳಲಿಲ್ಲ. ನನ್ನ ಮಗ ಯಾಕೋ ಬರಲಿಲ್ಲ ಅಂತ ಅವಳು ಅಂದುಕೊಳ್ಳುವುದೇ ವಾಸಿ. ಸಾಯುವಾಗ ಅವಳ ಮನಸ್ಸಿಗೆ ನನ್ನ ಮಗ ಸತ್ತ, ಅವನ ಮುಖ ನಾನು ನೋಡೋಕೆ ಆಗಲಿಲ್ಲ ಎನ್ನುವ ಕಹಿ ಭಾವನೆ ಬರದಿರೋದೇ ವಾಸಿ ಅಂದುಕೊಂಡರು.

ಮುಂದೆ ಆ ಹೆಂಗಸು ಬದುಕಿದ್ದ ಒಂದು ವಾರ ಕೂಡಾ ಮಗನಿಗಾಗಿ ಹುಡುಕುವುದನ್ನು ಬಿಡಲಿಲ್ಲ. ಮಾತಾಡಲಾರದ ಅವಳು ನನ್ನ ಮಗ ಎಲ್ಲಿ ಅಂತ ಬಾಯಲ್ಲಿ ಕೇಳಲಾಗದಿದ್ದರೂ ಕಣ್ಣಿನಲ್ಲಿ ಕೇಳುತ್ತಿದ್ದಳು. ಆದರೆ ಅವಳ ಪ್ರಶ್ನೆಗೆ ಯಾರೂ ಉತ್ತರ ಕೊಡಲಿಲ್ಲ.

ಏನೋ ಪಾಪ ಕೆಲಸ ಬಂದಿರಬೇಕು ಅದಕ್ಕೇ ಬಂದಿಲ್ಲ, ಇವತ್ತು ಬರಬಹುದು ಇಲ್ಲಾ ನಾಳೆ ಖಂಡಿತಾ ಬರ್ತಾನೆ ಅಂದುಕೊಂಡೇ ಆಗ ಹೆಂಗಸು ತಾನು ಸಾಯುವವರೆಗೂ ನಿರೀಕ್ಷೆ ಇಟ್ಟುಕೊಂಡೇ ಇದ್ದಳು.

# ನಮ್ಮೂರು ಮತ್ತು ಹೋಟೆಲ್‌ಗಳು

**- ಗುಂಡುರಾವ್ ದೇಸಾಯಿ**

**ಈ** ಲೇಖನ ಬರಿಬೇಕಾದ್ರ, ಬೇಂದ್ರೆಯವರ ಮಾತುಗಳನ್ನು ನೆನೆಸಿಕೊಳ್ಳಬೇಕನಸ್ತಾದ. ಸಮಾರಂಭವೊಂದರಲ್ಲಿ ಮಾತಾಡಿದ ಅವರ ಮಾತಿನಾಂಗ ಹೇಳೋದಾದ್ರೆ ನಮ್ಮ ಕನ್ನಡಿಗರು ಏನೇ ಮಾಡಿದ್ರೂ ದೊಡ್ಡ ಪ್ರಮಾಣದಾಗ ಮಾಡ್ತಾರ. ಹಳೇಬೀಡು, ಬೇಲೂರಿನ ಶಿಲ್ಪ ಕೆತ್ತನೆ ನೋಡ್ರಿ, ಅದ್ಭುತ! ಗೋಲಗುಮ್ಮಟ ವಿಶ್ವವಿಸ್ಮಯಗಳಲ್ಲಿ ಒಂದು. ಶ್ರವಣಬೆಳಗೊಳದ ಗೊಮ್ಮಟೇಶ್ವರ, ಬಾದಾಮಿಯ ಗುಹೆಗಳು, ಪಟ್ಟದಕಲ್ಲಿನ ಗುಡಿಗಳು, ಹಂಪಿಯ ವಿಜಯ ವಿಠ್ಠಲ ಗುಡಿಯ ಕಂಬಗಳಲ್ಲಿ ಹರಿಯುವ ನಾದ! ಒಂದೆ ಎರಡೆ ಹೀಗೆ ಕರ್ನಾಟಕದವರು ಏನೇ ಮಾಡಿದರೂ ದೊಡ್ಡ ಪ್ರಮಾಣದಾಗ ಮಾಡತಾರ..! ಎಲ್ಲರೂ ಮಾತಿನ ಮಧ್ಯದಲ್ಲೆ ಚಪ್ಪಾಳೆ ತಟ್ಟಿದರು. ಬೇಂದ್ರೆ ಮಾತು ಮುಂದುವರೆಸಿ ಈಗ ನಮ್ಮ ಕನ್ನಡಿಗರು; ನಿದ್ದಿ ಮಾಡತಾ ಇದ್ದಾರಾ, ಅದೂ ದೊಡ್ಡ ಪ್ರಮಾಣದಾಗ ನಡದಾದ........; ಅಂತ ಅವರ ಮುಂದುವರೆಸಿದ ಭಾಷಣಕ್ಕ ವಿರಾಮ ನೀಡತಾ ಪ್ರಸ್ತುತ ಪ್ರಬಂಧದ ವಿಷಯಕ್ಕ ಬರತೀನಿ. ನಮ್ಮ ಊರ ಮಂದಿ ಬೇಂದ್ರೆ ಅನ್ನೊ ಹಾಂಗ ಅಲ್ಲದಿದ್ದರೂ ಬೇರೆ ತರದವರು. ಒಂದು ಲೆಕ್ಕದಲ್ಲಿ ಕಲ್ಲಹಾಕೋರು. ಒಂದಕ್ಕ ಹತ್ತತ್ತು ಮಾಡೋರು. ಯಾವನರ ಒಬ್ಬ ಹೊಸದು ಸ್ಟಾರ್ಟ ಮಾಡಿದನಿಲ್ಲ, ಅವನ ಗಳಿಕೆ ಛಲೋ ಕಾಣಿಸ್ತೋ ಮುಗದು ಹೋತು ಹೊತ್ತ ಏರದ್ರಾಗ ದುಬುದುಬು ಅಂತ ಎಬಿಸಿರತಾರ. ಹೀಗಾಗಿ ಪುಟ್ಟ ಊರಾದ ನಮ್ಮ ಮಸ್ಕಿಯಾಗ ಹದಿನೈದಕ್ಕೂ ಹೆಚ್ಚೂ ಸಹಕಾರಿ ಬ್ಯಾಂಕಗಳೂ, ಮೂವತ್ತಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳೂ, ಅರ್ಧ ಜಿಲ್ಲೆಗೆ ಸಪ್ಲೈ ಮಾಡೋ ಹೋಲ ಸೇಲ್ ಹತ್ತಾರು ತರಾವರಿ ಅಂಗಡಿಗಳು. ಅದು ಬಿಡಿ ನಾಲ್ಕೂ ಸಾವಿರ ಇರೋ ವಸತಿ ಹೊಂದಿರುವ ಕುಟುಂಬ ಇರೋ ಊರಲ್ಲಿ ಕಳೆದ ಮೂರು ನಾಲ್ಕು ವರ್ಷಗಳಲ್ಲಿ ಪ್ಲಾಟಗಳು ಎಷ್ಟು ತಲೆ ಎತ್ತಬೇಕು? ಬರೋಬ್ಬರಿ ನಾಲ್ಕೂ ಸಾವಿರಕ್ಕೂ ಅಧಿಕ. ಇನ್ನೂ ಎನ್.ಎ. ಮಾಡಿಸೋ ಪ್ರಕ್ರಿಯೆ ನಡಿತಾ ಇದೆ. ಬಾಂಬೆ ಮಾರ್ಕೆಟ್ ಬಿದ್ದಿದ್ದರೂ, ಷೇರು ಮಾರ್ಕೆಟ್ ಎಕ್ಕುಟ್ಟಿ ಹೋಗಿದ್ರೂ ಮಸ್ಕಿಯ ರಿಯಲ್ ಎಸ್ಟೇಟ್ ಮಾರ್ಕೆಟ್ ಏರತಾನೆ ಇದೆ. ಬೆಂಗಳೂರಿನ ಸಾಕ್ವಾಯರ್ ಫೀಟ್ ರೇಟ್ ಯಾವೂದೆ ಸೌಲಭ್ಯವಿರದ ನಮ್ಮೂರಲ್ಲಿ ಇದೆ.

ಇರಲಿ ವಿಷಯಕ್ಕೆ ಬರತೇನೆ. ನಾನು ಬಾಳ ಕಡೇ ನೋಡಿನಿ, ನೀವು ಕೂಡಾ ಅನುಭವಿಸಿರತಿರಿ. ಯಾವುದೋ ಊರಿಗೆ ಹೋಗಿರತೀರಿ. ಹಸಿವು ಆಗಿರುತ್ತೆ ಅಥವಾ ತಲೆ ಸುತ್ತುತ್ತಿರುತ್ತೆ, ಅಂದಾಗ ಸಹಜವಾಗಿ ಏನಾದರೂ ತಿನ್ನಬೇಕು, ಕುಡಿಬೇಕು ಅನಿಸುತ್ತೆ. ನಾನು ಹೀಗೆ ಅನಕೊಂಡಾಗಲೆಲ್ಲ ಅರ್ಧ ಕಿ.ಮೀ. ಅಥವಾ ಮುಕ್ಕಾಲು ಕಿ.ಮೀ. ತನಕ ಒಂದರ ಹೋಟಲು, ದರ್ಶಿನಿಗಳೊ ಸಿಕ್ಕರ ಕೇಳಿ. ಇದು ನಗರ ಪಟ್ಟಣಗಳಲ್ಲಿ ನಾನು ಅನುಭವಿಸಿದ್ದು ನೀವು ಅನುಭವಿಸಿರಬಹುದು. ನನಗೆ ಆಗ ಅನಿಸಿದ್ದು ಇದು ಬಾಳ್ವೆಸ್ಥರ ಊರು. ಬಾಳ್ವೆಸ್ಥರ ಊರಲ್ಲಿ ಹೋಟಲ್‌ಗಳು ಕಡಿಮೆಯೇ. ಬಾಳ್ವಸ್ಥರಿಲ್ಲದ ಊರಲ್ಲಿ ಹೋಟಲ್, ಬಾರು ಬಹಳ ಅಂತನೇ ಅರ್ಥ. ನನ್ನ ಗ್ರಹಿಕೆ ಮೇಲೆ ನಿಮ್ಮ ನಿಮ್ಮ ಊರು

ಯಾವ ಲೆಕ್ಕದಲ್ಲಿ ಬರುತ್ತಂತ ಊಹಿಸಿಕೊಳ್ರಿ. ಆದರ ನಮ್ಮೂರಿಂದು ಸುದ್ದಿ ಹಾಂಗಿಲ್ಲ ಬಿಡ್ರಿ. ಡೆಡ್ ಅಪೊಜಿಟ್ಟು. ಮುಗ್ಗಲಗೇಡಿ ಹೆಣ್ಣಮಕ್ಕಳಿದ್ರ ಅಂತವರಿಗೆ ಹೇಳಿ ಹಾಸಿ ಕೊಟ್ಟಂಗದ ಊರು. ಎಲ್ಲಿ ದವಾಖಾನಿಗಳು ಬಾಳವಂದ್ರ ಅಲ್ಲಿ ರೋಗಿಗಳು ಹೆಚ್ಚಾರ, ಎಲ್ಲಿ ಸ್ಟೇಷನ್ ದೊಡ್ಡವವ ಅಂದ್ರ ಅಲ್ಲಿ ಕಳ್ಳಕಾಕರು ಜಾಸ್ತಿ ಇರತಾರ, ಎಲ್ಲಿ ಕುಡಿಯುವರು ಜಾಸ್ತಿ ಇದ್ದಾರ ಅಂದ್ರ ಅಲ್ಲಿ ಕುಡಿಯುವ ವಸ್ತುಗಳು ಯಥೇಚ್ಛವಾಗಿ ಇರತಾವ, ಎಲ್ಲಿ ಬಾಯಿ ಬಂದಂಗ ರೇಟಿರತಾವಂದ್ರ ಅಲ್ಲಿ ರೊಕ್ಕ ಇರೋರ ಇದ್ದಾರ ಅಂತಾರಲ್ಲ ಹಾಂಗ ನಮ್ಮೂರಾಗ ಹಾದಿಗೊಂದು ಬೀದಿಗೊಂದು ಹೋಟಲ್ಗಳು ಅವ ಅರ್ಥಾಥ್ ಇಲ್ಲಿ ತಿಂಡಿಪೋತರು ಬಾಳ ಇದ್ದಾರ ಅಂತನೇ ಬಿಡಿಸಿ ಹೇಳಬೇಕಾಗಿಲ್ಲ.

ನಾನು ಎಲ್ಲೇಲ್ಲೊ ಅಡ್ಡಾಡಿನಿ ಈ ಪರಿ ಹೋಟಲ್‌ಗಳು ಇದ್ದದ್ದು ನಾನು ಕಾಣೆ. ಬಂಡಿ ಅಂಗಡಿಯಿಂದ ಹಿಡಿದು ಐಷಾರಾಮಿ ಹೋಟಲ್‌ವರಗೂ ಒಂದೊಂದೊ ಡಿಫರೆಂಟ್ ಟೇಸ್ಟ ಇರೋ ಹೋಟಲ್‌ಗಳು. ಒಂದು ಬಿಟ್ಟು ಒಂದು ತಗದ್ಹಾಕಂಗ ಇಲ್ಲ. ಜೊತಿಗೆ ಪಾಳಿ ಪ್ರಕಾರ ಟೈಮು ಟು ಟೈಮ ಟೇಸ್ಟನಲ್ಲಿ ಕಾಂಪಿಟೇಷನ್ ಕೊಡೊ ಅಂಗಡಿಗಳು ಬ್ಯಾರೆ. ನಮ್ಮೂರು ಜನಸಂಖ್ಯೆ ಇಪ್ಪತ್ತು ಸಾವಿರ ಇರಬೇಕು ಹೋಟಲ್ ಖಾನಾವಳಿ ಲೆಕ್ಕನ ಇಲ್ಲ. ಸಂಧಿ ಸಂದ್ಯಾಗ, ಓಣಿ ಓಣ್ಯಾಗ, ರೋಡ್ ರೋಡಿನ್ಯಾಗ ಅತೃಪ್ತ ಆತ್ಮವನ್ನು ತಣಿಸುವ ತಾಣಗಳು ಇವು ಆಗ್ಯಾವ.

ನಾನು ಮೊದಲ ಹೇಳಿದ ಹಾಗೆ ಬೆಳಗಿನ ಆರಂಭನ ಹೋಟಲ್ ತೆಗೆಯುವುದನ್ನು ಕಾಯೋದು ಹಲವು ಜನರ ಕಾಯಕ. ನಮ್ಮದು ರಾಜ್ಯ ಹೆದ್ದಾರಿಯಾಗಿರುವುದರಿಂದ ಬೆಂಗಳೂರು ಬಸ್ಸುಗಳ ಓಡಾಟ ಜೋರಾಗಿರುವುದರಿಂದ ಪೋಲಿಸರು ರಾತ್ರಿ 10ಕ್ಕೆ ಒತ್ತಾಯ ಪೂರ್ವಕ ಬಂದ ಮಾಡಿಸಿದ್ರೂ ಬೆಳಿಗ್ಗೆ 3ಕ್ಕೆ ಶೆಡ್ಡ ಹೊಡೆಯೊರಂಗ ಬಸ್ ಸ್ಟ್ಯಾಂಡಿನ ಸರಹದ್ದಿನ ಹೋಟೆಲ್‌ಗಳು ತೆಗೆದಿರುತಾವ. ಅಲ್ಲಿಂದಲೇ ಹೊಟೆಲ್‌ಗಳ ಪರ್ವ ಆರಂಭ. ಈ ಮಂದಿ ಗಳಿಕೆ ಹುಚ್ಚಿನ್ಯಾಗ ನಿದ್ದೇರ ಮಾಡಿರತಾವ ಇಲ್ಲವೋ, ನೀರು ಬಾರದ ಆ ಹೊತ್ತಿನ್ಯಾಗ ಎಲ್ಲಿಂದ ನೀರು ತುಂಬಿರತಾರೋ ಇಡ್ಲಿ ಒಡಾ, ಪಲಾವ್ ಪೂರಿ ತಯಾರಿಸೋ ಕಾಯಕ ಸ್ಟಾರ್ಟ ಆಗಿರತಾದ. ಏನ್ರಿ ಆ ಟೈಮಿನ್ಯಾಗ ಯಾರ ತಿಂತಾರ! ಅಂತ ಕೇಳಬಹದು. ನಮ್ಮೂರಿನ ಮಾರ್ಗವಾಗಿ ಸುಮಾರು ಕ್ರೂಸರ್‌ಳು ನಿತ್ಯ ಬೆಂಗಳೂರಿಗೆ ಗುಳೆಗೆ ಹಳ್ಳಿಗರನ್ನು ಕರಕೊಂಡು ಹೋಗತಾವ, ಅದೇ ಪ್ರಮಾಣದಾಗ ಕರಕೊಂಡು ಬರತಾವ. ಹಳ್ಳಿಗಳ ಉದ್ಧಾರವೇ ದೇಶದ ಉದ್ಧಾರ ಅಂತ ಗಾಂಧಿ ಹೇಳಿದ್ರು ಆದರೆ ನಗರಗಳ ಕೆಳಹಂತದ ಕಾರ್ಯಗಳ ಕೆಲಸದಿಂದಾಗಿ ನಗರಗಳೆ ಹಳ್ಳಿಗರಿಂದ ಉದ್ಧಾರವಾಗ್ತಿವೆ. ಆದರೆ ಅವರ ಬದುಕು ಅಂಧಕಾರದಲ್ಲಿ ಮುಳಗತಾನೆ ಇದೆ. ಬೆಳಿಗ್ಗೆ ಬಂದವರು ಒಂದು ಜಗ್ಗು ನೀರಿನ್ಯಾಗ ಎಲ್ಲಾ ಕ್ರಿಯೆ ಮುಗಿಸಿದ್ರನ ಚಾ ಹೀರಕ್ಕ ಕೆಲವರು ನಾಷ್ಟ ಮಾಡಾಕ ಸುರು ಹಚ್ಚಿಗೊಂತಾರ. ಹಾಗಾಗಿ ಅವಗಿನಿಂದನ ಕಾರ್ಯ ನಡೆದಿರುತಾದ. ಮತ್ತೇ ಪರ ಊರಿಗೆ ಹೋಗೊರ ಸರತಿ.

ಹೊರಗಿನಿಂದ ಬಂದವರ ಸುದ್ಯಾತು. ಇನ್ನೂ ಈ ಊರ ಮಂದಿ ಸುದ್ದಿ. ಮೊದಲ ಹೇಳಿದಾಂಗ ನಮ್ಮೂರಲ್ಲಿ ನಾನಾ ನಮೂನಿ ಹೋಟೆಲ್‌ಗಳು ಅವ. ಒಂದು ನೂರ ಮೀಟರ್ ವ್ಯಾಪ್ತ್ಯಾಗ ಎಷ್ಟಿರಬೇಕು ಊಹಿಸಿಕೊಳ್ಳಿ! ಬರೋಬ್ಬರಿ ನಲವತ್ತಕ್ಕಿಂತ ಹೆಚ್ಚಿಗೆ

ನೋಡಾಕ ಸಿಗತಾವ. ಮೇನ್ ರೋಡ್ ವ್ಯಾಪ್ತಿಯಲ್ಲಿ ನೂರಕ್ಕೂ ಹೆಚ್ಚು ಹೋಟೆಲ್‌ಗಳು ಸೆಡ್ಡು ಹೊಡದು ನಿಂತುಗೊಂಡಾವ. ಒಂದರಕ್ಕಿಂತಲೂ ಒಂದು ಡಿಫಿರೆಂಟ್ ಟೇಸ್ಟು ವೆರೈಟಿದು. ಬೆಳಿಗ್ಗೆ ತೀಟೆ ತೀರಸಾಕ ಬಸ್ಟ ಸ್ಟ್ಯಾಂಡಿನ ಫಾಸ್ಟ ಫುಡ್‌ಗಳು, ಬೀರಲಿಂಗೇಶ್ವರ ಹೋಟೆಲ್ಲು, ಚನ್ನಳ್ಳಿ ಹೋಟೆಲ್, ನ್ಯೂ ಶಾಂತಿಸಾಗರು, ಮಾನ್ವಿರೇ ಹೋಟಲ್, ದೈವದ ಕಟ್ಟಿ ಹತ್ತಿರ ಬುಷಪ್ಪನ ಹೋಟೆಲ್, ಸಂತಿಬಜಾರದ ಒಂದೆರಡು ಹೋಟೆಲಗಳು, ಗಾಂಧಿ ಚೌಕು, ಹೊಸಬಸ್ ಸ್ಟಾಂಡಿನ ಬಂಡಿ ಹೋಟಲ್.......... ಪಟ್ಟಿ ಮಾಡಾಕ ದಮ್ಮ ಹತ್ತುವಷ್ಟು! ಹಿಂಗ ಓಣಿ ಓಣಿಗೂ ಒಂದೊಂದು ಸ್ಪೆಷಲ್ಲ ಹೋಟಲ್ ಅವಾ. ಅದರಲ್ಲಿ ಚೆನ್ನಳ್ಳಿ ಹೋಟೆಲಂದು ಸ್ಪೆಷಲ್ ಚಪಾತಿ, ಐದಾರು ಮಂದಿ ಕೂಡಾ ತಟ್ಟಿ ಹೋಟಲ್‌ನ್ಯಾಗ ಕುರುಕುರು ಅನ್ನೊ ಚಪಾತಿ ಜೊತೆ, ಹಾಲು ಹಾಕಿ ಮಾಡಿರೋ ಉಳ್ಳಾಗಡ್ಡಿ ಪಲ್ಯಾ ಚಪಾತಿನ ಸರತಿ ಸಾಲಿನ್ಯಾಗ ನಿಂತು ತಿಂತಿರತಾರ, ಇದಾ ಹೋಟೆಲ್‌ನ ಒಗ್ಗರಣಿ, ಸಂಜೆ ಚೂಡಾನೂ ಡಿಫಿರೆಂಟು. ಓಣಿಯಲ್ಲಿರೋ, ಒಂದೊಂದು ಹೋಟೆಲ್‌ನಲ್ಲೂ ಡಿಫಿರೆಂಟ ವೆರೈಟಿ ಟೇಸ್ಟು, ಮಧ್ಯಾಹ್ನ ತೆರೆಯೋ ಹೋಟಲ್‌ಗಳು ಬ್ಯಾರೆ. ಪೆಟ್ರೋಲ ಬಂಕ್ ಹತ್ತಿರದ ಮಾನ್ವಿರೇ ಹೋಟೆಲ್ಗಳು, ಕೆಂಬಾವಿ, ಏಳಭಾವ್ಯಾರ ಹೋಟೆಲ್ಗಳು. ಅಲ್ಲಿ ಇಡ್ಲಿ, ವಡಾ, ಪಲಾವ್, ಪೂರಿ, ದೋಸೆ, ಒಗ್ಗರಣಿ ಮಿರ್ಚಿ, ಬೊಂಡಾ ಮೊದಲಾದ ವೆರೆಟಿ ತಿಂಡಿಗಳ ಸವಿಗೆ ಜನ ಮನೆಮರತು ಮಗ್ಗುಲ ಬಿದ್ದಿರತಾರ. ಇನ್ನೂ ಸಂಜೆಯಲ್ಲಿ ಸ್ಟಾರ್ಟ ಆಗೋ ಹೋಟಲ್‌ಗಳ ಬ್ಯಾರೆ, ಏಳು ಭಾವಿ ಹೋಟೆಲ್ ಅಂತಿದೆ ಆರೇಳ ಜನ ಅಣ್ಣ ತಮ್ಮಂದಿರು, ಆರೇಳು ಕಡೆ ಹೋಟೆಲ್ ಮಾಡಿದ್ದಾರೆ. ಎರಡು ಮೂರು ಬ್ರಾಂಚಿವೆ. ಅವರ ಖಾರ ಬಲು ಫೇಮಸ್. ಸೇವು, ಡಾಣಿ ಅಂತೇನು ಕರೀತಿವಲ್ಲ ಸವಣೂರ ಹುಬ್ಬಳ್ಳಿ ಖಾರನ ಸೈಡ್ ಹೊಡಿಬೇಕು. ಆ ನಮೂನಿ ಈ ಹುಡಗರು ಮಾಡ್ತಾವ. ನಾಲ್ಕು ತಾಸಿನ್ಯಾಗ ಪುಟ್ಟಿಗಟ್ಟಲೇ ಮಾಡಿದ ಖಾರ ಖಲಾಸ್. ಅಷ್ಟು ಹವರು ಬಾಯಲ್ಲಿ ಇಟ್ಟುಕೊಂಡರೆ ಕರಗವಂತಹವುದು. ಒಂದು ಪ್ಲೇಟು ಖಾರ ತಿನ್ನಬೇಕೆನ್ನುವವರಿಗೆ ಇನ್ನೊಂದು ತಿಂದು ಹೋಗಲೇಬೇಕು ಅ ನಮೂನಿ ಇರುತ್ತೆ ಅದರ ರುಚಿ. ತಟ್ಟಿ ಹೋಟಲ್ ನೋಡ್ಡೋಕೆ ಅಸಹ್ಯ ಆದರ ಸಾಹಿತ್ಯಿಕ-ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬರುವ ಎಲ್ಲರನ್ನೂ ಇಂತಹ ಕಡೆ ಮೊದಲೆ ಎಚ್ಚರಿಸಿ ಕರದುಕೊಂಡು ಹೋಗ್ತೇವೆ. ಅವರು ಆ ಟೇಸ್ಟಗೆ ಫಿದಾ ಆಗಿದ್ದಂತೂ ಸುಳ್ಳಲ್ಲ. ಇನ್ನೂ ಆ ಖಾರಕ್ಕೆ ಸಾಂಬರ್ ಮಾಡಿರತಾರೆ ಅದನ್ನು ಸೇವಿಸುವ ಟೇಸ್ಟೆ ಬೇರೆ. ಇವುಗಳ ಟೇಸ್ಟಿಗೆ ರಂಗು ತರುವವು ಈ ಕರಿದ ಮೆಣಸಿನ ಕಾಯಿ, ಉಳ್ಳಾಗಡ್ಡಿ. ಮಾನವಿರೇ ಹೋಟಲ್ ಇದೆ ಅಲ್ಲಿಯ ಚುಡಾಸ್ಪೆಷಲ್ಲ ಬ್ಯಾರೆ. ಒಣ ಮಂಡಾಳನ್ನೇ ಎಣ್ಣೆಯಲ್ಲಿ ಕರದು ಚುಡುವಾ ಮಾಡಿರತಾರೆ. ಅದನ್ನು ತಿಂದು ಅನುಭವಿಸಲೇಬೇಕು. ಅಲ್ಲಿ ಮಾಡೋ ಗಿರಮಿಟ್ಟು ಸ್ಪೆಷಲ್ಲಾಗಿಯೇ ಇರುತ್ತದೆ. ಅಲ್ಲೆ ಪಕ್ಕದಲ್ಲಿರೋ ಡಾಗ್ ಎಂದು ಕರೆಯಲ್ಪಡುವ ನಾಗರಾಜನ ಹೋಟಲ್ನಲ್ಲಿ ಸಿಗೋ ಸ್ಪೆಷಲ್ ಚುಡಾನ ಬೇರೆ. ಇನ್ನೂ ಪೆಟ್ರೋಲ್ ಪಂಪ್ ದಾಟಿದ ಮೇಲೆ ಹೋಟಲ್ ಒಂದಿದೆ. ಎಗ್ ಬೊಂಡಾ ಜೊತೆಗೆ ಎಗ್ ಹಾಕಿ ಒಗ್ಗರಣಿ ಮಾಡ್ತಾನಂತ. ಅಲ್ಲಿಯೂ ದೊಡ್ಡ ಕ್ಯೂ ಇರುತ್ತೆ. ಮತ್ತೊಂದೆಡೆ ತತ್ತಿ ಹಾಕಿನ ಗಿರಮಿಟಾ ಮಾಡ್ತಾರಂತ. ಇಷ್ಟೊತನ ಉದಾಹರಿಸದೆಲ್ಲ ಕ್ಲಾಸ ಥರ್ಡನಲ್ಲಿ ಸೇರುವ ಹೋಟಲಗಳೆ. ಆದರ ಅವರ ಗಳಿಕೆ ಮಾತ್ರ ಕ್ಲಾಸ್ ಒನ್. ಇನ್ನೂ ನಮ್ಮ ಸುತ್ತಮುತ್ತಲಿನ ನಗರಗಳಲ್ಲಿ

ಹೋಲಿಸಿದಾಗ ರೊಕ್ಕ ಕೊಟ್ಟರು ಟೇಸ್ಟ ಇರದ ತಿಂಡಿ ತಿಂದ ಬಂದಿದ್ದ ಹೆಚ್ಚು. ನಮ್ಮೂರಲ್ಲಿ ಹಾಗೇನಿಲ್ಲ. ಕೊಟ್ಟದ್ದು ತುಸು ಹೆಚ್ಚಾಗಬಹುದು ರುಚಿಯಲ್ಲಿ ನೋ ಕಂಪ್ರಾಮೈಜ. ಅಷ್ಟು ರುಚಿಕಟ್ಟಾಗಿರುತ್ತೆ.

ಮಯೂರ ಅಂತ ಹೋಟಲಿದೆ. ಯಾವುದೇ ಹೋಟಲು ನಗರಗಳಲ್ಲಿ ಇಷ್ಟು ವರ್ಷ ನಡೆದಿದೆಯೋ ಇಲ್ಲವೊ ಗೊತ್ತಿಲ್ಲ. ಸುಮಾರು ಮೂವತ್ತೈದು ವರ್ಷಗಳಿಂದಲೂ ಅದೇ ರೇಂಜನಲ್ಲಿ ನಡಿತಾ ಇದೆ. ಇನ್ನೂ ಕೀರ್ತಿ ಸಾಗರು, ಶಾಂತಿ ಸಾಗರು ಅಂತ ಏನೇನೋ ಹೆಸರಿನ ದರ್ಶಿನಿಗಳು ಇವೆ. ಅಸ್ತಿತ್ವ ಉಳಿಸಿಕೊಂಡಿವೆ. ಜಾಸ್ತಿ ದುಡ್ಡು ಹೀರುವ, ರುಚಿಕಟ್ಟಾಗಿ ಮಾಡದ ಹೋಟೆಲಗಳು ಎಲ್ಲಾ ಕಾಲಕಾಲಕ್ಕೆ ಕಾಲ್ಕಿತ್ತಿವೆ. ಖಾನಾವಳಿಗಳು ನಿಜಕ್ಕೂ ಉತ್ತಮವಾಗಿವೆ. ನಾನು ಕೆಲಕಾಲ ಆಡಳಿತಾತ್ಮಕ ಹುದ್ದೆಯಲ್ಲಿದ್ದಾಗ ಶಿಕ್ಷಕರಿಗೆ ತರಬೇತಿ ಸಂಘಟಿಸಬೇಕಿತ್ತು. ಊರಲ್ಲಿ ಹತ್ತೆಂಟು ಖಾನಾವಳಿಗಳು ಇದ್ದರೂ ಒಬ್ಬರೂ ಕೂಡಾ ತರಬೇತಿ ನಡೆಯುವಲ್ಲಿ ಬಂದು ಊಟಾ ಸರ್ವ ಮಾಡುವಷ್ಟು ಆಸಕ್ತಿ ತೋರುತ್ತಿರಲಿಲ್ಲ. ಅಪದ್ಬಾಂದವನಾಗಿ ಸಿಕ್ಕವರು ವೀರೇಶ್ವರ ಖಾನಾವಳಿ ಎಂತಿದೆ. ತರಬೇತಿಗೆ ಬಂದವರು ಎಂತಹ ಊಟಾ ಅನ್ನುವಷ್ಟು ಮಟ್ಟಿಗೆ ಆತ ಸಹನೆಯಿಂದ ಕೊಡತಾ ಇದ್ದ. ಡಯಟನವರು ನಮ್ಮಲ್ಲಿ ತರಬೇತಿಯೊಂದನ್ನು ಸಂಘಟಿಸಿದಾಗ ಅಲ್ಲಿಯ ಊಟದ ಉಸ್ತುವಾರಿಯನ್ನು ಇವರಿಗೆ ವಹಿಸಲಾಗಿತ್ತು. ಇಡೀ ಜಿಲ್ಲೆಯ ಶಿಕ್ಷಕರೆಲ್ಲ ಅವನ ಊಟದ ಜೊತೆಗೆ ಡಯಟ್‌ನ ಘನತೆಯನ್ನು ಹೆಚ್ಚಿಸುವಂತೆ ಮಾಡಿದ್ದ. ಅವನು ಮಾಡಿದ ಹೋಳಿಗೆ ಮೆಚ್ಚಿದ ತರಬೇತಿ ನೋಡಲ್ ಅಧಿಕಾರಿಗಳು ರಾಯಚೂರಿಗೆ 20 ಪೀಸ್ ಪಾರ್ಸಲ್ ಒಯ್ದಿದ್ದರು. ಲೆಕ್ಕ ಹಾಕಿ. ಖಾನಾವಳಿಗಳೂ ಪಾಪ ಎಂದು ಹಸಿದು ರೊಕ್ಕ ಹಿಡಿದು ಬಂದವರಿಗೆ ಮೋಸ ಮಾಡಿಲ್ಲ. ಇನ್ನೂ ಡಾಬಾಗಳು ಇವೆ ಅಲ್ಲಿ ಎಲ್ಲಾರೂ ಹೋಗಾಕ ಆಗುವುದಿಲ್ಲವಲ್ಲ.

ಸಾಮ್ರಾಟ ಹೋಟೆಲ್ ಅಂತಿದೆ. ನಾರ್ಥ ಇಂಡಿಯನ್ ಡಿಶ್. ನನಗೂ ಆರಂಭವಾದ ಮೊದಲ ಅಪಸ್ವರ ಇತ್ತು. ಮುಚ್ಚಿಹೋಗುತ್ತೆ ಅಂತ ಬಾವಿಸಿದ್ರು. ಈಗ ಎಲ್ಲಾ ವರ್ಗದ ತಿಂಡಿಪೋತರ ಆಶ್ರಯ ತಾಣ ಆಗಿದೆ. ನಾನು ಒಮ್ಮೆ ಹೋಗಿ ಮೋಹಕ್ಕೆ ಬಿದ್ದು ಹತ್ತೆಂಟು ಸಲ ಹೋಗುವಂತಾಗಿದೆ. ಅಂತಹ ಟೇಸ್ಟು! ಸ್ಪೆಷಲ್ ಗೆಸ್ಟ ಬಂದಾಗ ಮರ್ಯಾದೆ ಉಳಿಸುವ ತಾಣ. ವೆಡ್ಡಿಂಗ ಆನಿವರ್ಸರಿ, ಬರ್ತಡೆ ಇದ್ದಾಗ ಅನಕೂಲಸ್ಥ ಫ್ಯಾಮಿಲಿಗಳು ವಾರಕ್ಕೆ ಹದಿನೈದು ದಿನಕ್ಕೆ ಫಾರ್ ಎ ಚೇಂಜ್ ಎನ್ನುವಂತೆ ಸಕುಟುಂಬ ಪರಿವಾರ ಸಮೇತ ಹೋಗ್ತಾವೆ. ಮೊನ್ನೆ ನೋಡಿದೆ ನನಗೆ ಗೊತ್ತಿರುವ ಕುಟುಂಬ ವಾರಕ್ಕೆ ಎಂಟು ನೂರೊ ಸಾವಿರೋ ದುಡೀತಿರಬಹುದು. ಅವರು ಈ ಹೋಟಲ್‌ಗೆ ಬಂದು ತಿಂದು ದುಡಿದಿದ್ದನ್ನಲ್ಲ ಕಕ್ಕಿ ಹೋದರು. ಅಂತಹ ಕೇಸುಗಳು ಬಾಳ ಅವ. ತಿಂಡಿಗಾಗಿ ಇಂತಹ ಹೋಟಲ್‌ಗಳಿಗೆ ಕಕ್ಕಿದರ ಬದುಕು ಗಟ್ಟಿ ಆಗಬಹುದಾದರೂ ಹ್ಯಾಂಗ ಹೇಳಿ. ಸ್ಕೂಲಿಗೆ ಭೇಟಿಗಾಗಿ ಆಗಮಿಸಿದ್ದ ಅಧಿಕಾರಿಗಳು ಹೆಚ್ಚಾಗಿ ಬಿಸಿ ಊಟನೇ ಸ್ವೀಕರಿಸುತ್ತಿದ್ರು. ಒಮ್ಮೆ ಫಾರ್ ಎ ಚೇಂಜ್ ಅಂತ ಈ ಹೋಟೆಲ್ಗೆ ಕರೆದೊಯ್ದಿದ್ದೆ ತಪ್ಪಾಗಿದೆ. ಮಸ್ಕಿ ಬಂದಾಗ ನನಗ ಫೋನ ಹಾಯಿಸ್ತಾರೆ. ಬಿಸಿ ಊಟ ಏನು ಮಾಡೋದ್ರಿ ಅದೆ ಸಾಮ್ರಾಟಗೆ ಹೋಗಾಣ ಅಂತಾರೆ. ಯಾರನ್ನೂ ಬಯ್ಯಲಿ ಹೇಳಿ.

ಇನ್ನೂ ಸಂಜೆಯಲ್ಲಿ ಹುಟ್ಟುವ ಬಂಡಿಗಳಿಗೇನು ಕಮ್ಮಿ ಇಲ್ಲ. ಕಚೋರಿ, ಪಾನಿಪೂರಿ, ಬೇಲ್ ಪೂರಿ ನಮ್ಮೂರಂಗ ಮಾಡೋ ಹಾಂಗ ಯಾವ ಊರಾಗ ಮಾಡಂಗಿಲ್ಲ. ಎಲ್ಲಾ ಕಡೆ ಕಚೋರಿನ ಪುಡಿ ಮಾಡಿ ಅದಕ್ಕೆ ಬ್ಯಾರೆ ಎಂತಹದೋ ಖಾರಪುಡಿ ಮೊಸರು, ಉಳ್ಳಾಗಡ್ಡಿ ಟಮಾಟ, ಯಾವುದೊ ಸಾಸ್ ಹಾಕಿ ಕೊಡತಾರೆ ನಮ್ಮಲ್ಲಿ ಹಾಂಗಿಲ್ಲ. ಅವರು ಏನೇನೋ ತರಕಾರಿ ಇನ್ನಿತರ ಮಿಶ್ರಣ ಹಾಕಿ ಫ್ರೈ ಮಾಡಿಕೊಟ್ಟರ ಕತ್ತರಿಸಿ ತಿನ್ನಬೇಕು. ಐದ ರೂಪಾಯಿಕ್ಕ ಪ್ಲೇಟ ಇದ್ದ ಕಚೋರಿಯನ್ನ ಇಪ್ಪತ್ತು ರೂಪಾಯಿಕ ಏರಿಸ್ಯಾರ ಅಂದ್ರ ಲೆಕ್ಕ ಹಾಕಿ. ದಿನಕ್ಕೆ ನಾಲ್ಕು ಐದು ಸಾವಿರ ಮಾಡಿಕೊಂಡು ಹೋಗ್ತಾರೆ. ಇನ್ನೂ ಅಲ್ಲಲ್ಲಿ ಬಜ್ಜಿ, ಮಿರ್ಚಿ ಹಾಕಿ ಮೂವತ್ತು ನಲವತ್ತು ಕುಟುಂಬಗಳು ಹೊಟ್ಟೆ ಹೊರಿತಾರೆ. ಸಂಜೆಯಾದೊಡನೆ ಊರತುಂಬ ಹತ್ತಾರು ಕಡೆ ನಾನಾ ವೆರೆಟಿ ಬಜ್ಜಿ, ಮಿರ್ಚಿ ಬದನೆಕಾಯಿ ಬೊಂಡಾ, ಆಲೂಬೊಂಡಾ ತರಾವರಿ ಮಾಡ್ತಾರೆ. ಜಡ್ಡಾದ್ರೂ ಪರ್ವಾಗಿಲ್ಲ ತಿಂದ ಸಾಯಿಬೇಕು ಅನಸದೆ ಇರದು. ರಾತ್ರಿ ಒಂಬತ್ತರವರೆಗೆ ಬಿಡದೆ ಹಾಕ್ತಾರ ಅಂದ್ರ ಲೆಕ್ಕ ಹಾಕ್ರಿ. ಇನ್ನೂ ಹತ್ತರ ತನ ಹಾಕಿದ್ರೂ ಒಯ್ಯರ ಈ ಮಂದಿ. ಚಾ ಕಾಫಿ ವೆರ್ಯಾಟಿ ಇರುವ ಕೇಂದ್ರಗಳು ಇವೆ. ಮೂರು ರೂಪಾಯಿಗೂ ಸ್ಪೆಷಲ್ಲ ಟೀ ಸಿಗುತ್ತೆ ಹತ್ತ ರೂಪಾಯಿಗೂ ಸಿಗುತ್ತೆ. ಹೈದ್ರಾಬಾದ ಇರಾನಿ ಟೀ ಅಂತ ಸ್ಟಾರ್ಟ ಮಾಡಿದ ಮೇಲೆ ಹತ್ತಾರು ಇಂಥಹ ಟೀ ಕೇಂದ್ರಗಳು ತಲೆ ಎತ್ತಿವೆ. ಇನ್ನೂ ಬೇಕರಿಗಳನ್ನ ಕೌಂಟಿನಲ್ಲಿ ತೊಂಡಿಲ್ಲಾ ಮತ್ತೆ.

ನಾನು ಗಮನಿಸಿದ ಮಟ್ಟಿಗೆ ನಮ್ಮೂರಲ್ಲಿ ನಾನ್ ವೆಜ್ ಹೋಟಲ್ಗಳು ಕಮ್ಮಿ ಇದ್ದವು. ಓಪನ್ನಾಗಿ ವಿಜಯ ಟಾಕೀಜ ಹತ್ತಿರ ಒಬ್ಬಾತ ತತ್ತಿಯಿಂದ ಮಾಡಿದ ಉತ್ಪನ್ನ ಮಾರತಿದ್ದ. ಬೆರಳಣಿಕೆಯಷ್ಟು ಸಾವಜಿ ಖಾನಾವಳಿಗಳಿದ್ವು. ಈಗ ಮೂವತ್ತು ನಲವತ್ತು ಫುಟ್ ಪಾತ್ ಬಂಡಿಗಳು, ಅದಕ್ಕಿಂತಲೂ ಹೆಚ್ಚು ನಾನ್ವೆಜ್ ಹೋಟೆಲ್‌ಗಳು, ಡಾಬಾಗಳು, ರೆಸ್ಟೋರೆಂಟುಗಳು ಬೇರೆ ಮತ್ತೆ. ಅದರಲ್ಲಿ 15ಕ್ಕಿಂತಲೂ ಹೆಚ್ಚಿನ ಬಾರುಗಳು. ಕಿರಾಣಿ, ಕಾಯಿಪಲ್ಯ ಅಂಗಡಿ ಮುಂಜಾನೆ ತೆಗಿತವೋ ಇಲ್ಲೋ ಈ ಬಾರಗಳನ್ನು ಕುಡಿಯೋ ಮಂದಿನ ಹೋಗಿ ಒತ್ತಾಯದಿಂದ ಎಬ್ಬಿಸಿ ತಗಿಸಿ ತಮ್ಮ ಕಾಯಕ ಸುರು ಹಚ್ಚಿಕೊಂಡಿರತಾರ. ಇಷ್ಟೆಲ್ಲ ನಮ್ಮ ಪುಟ್ಟ ಊರಾಗ ಕಾಣ ಸಿಗತಾವ. ನಮ್ಮ ಹಳೆಯ ವಿದ್ಯಾರ್ಥಿಗಳು ಇಂಥ ಬಂಡಿ ಮಾಡಿದ್ದನ್ನು ನೋಡಿ ಅಲ್ಲಪ್ಪ ಇಂತಹ ಎಗ್ ರೈಸು, ನಾನ್ ವೆಜ್ ಪಕೋಡ ಇತ್ಯಾದಿ ಮಾಡುವ ಬಂಡಿಗಳು ನಲವತ್ತೈವತ್ತಾದರೂ ಇವೆ. ಇಷ್ಟ ಮಂದಿಗೆ ಗಿಟ್ಟತಾವೇನು? ಅಂದಾಗ ಸರ್ ನಮಗ ಗಿರಾಕಿಗಳಿಗೆ ಮಾಡಿ ಮಾಡಿ ಕೊಟ್ಟು ಸಾಕಾಗಿರತ್ತ. ಇನ್ನು ಕಮ್ಮಿ ಬಿದ್ದಾವ ಅಂದಾಗ ಮಾತ ಬಾರಲಿಲ್ಲ. ಹೊರಗಿನ ಸುದ್ದಿ ಇದು. ಸಾವಜಿ ಖಾನಾವಳಿಗಳು ಈಗಲೂ ಗತ್ತು ಉಳಿಸಿಕೊಂಡಾವ. ಇತ್ತೀಚಿಗೆ ದಶಕಗಳಿಂದ ಗಡಿಗಿ ಖಾನಾವಳಿ ಅಂತ ಸ್ಟಾರ್ಟ ಆಗ್ಯಾವ. ಅದರಲ್ಲಿ ಗಡಗಿ ರಾಮಣ್ಣನ ಖಾನಾವಳಿ ಅಂದ್ರ ಆತನ ಹಿರಿಮೆ ವಿಧಾನಸೌಧದವರೆಗೂ ಹೋಗ್ಯಾದ. ರಾಜ್ಯದ ಎಲ್ಲಾ ಮಾಧ್ಯಮಗಳಲ್ಲೂ ಅವನ ಯಶೋಗಾಥೆ ಪ್ರಸಾರ ಆಗ್ಯಾದ. ವಿಶೇಷ ಸಂದರ್ಭದಲ್ಲಿ ಬೆಂಗಳೂರಿಗೆ ಬಸ್ಸಿನಲ್ಲಿ ಪಾರ್ಸಲ್ ಆಗತಾವ. ಇಷ್ಟು ವರ್ಷ ಆದ್ರೂ ಆತನ ಖಾನಾವಳಿ ಯಾವುದು ಅಂತ ತಿಳಿದಿರಲಿಲ್ಲ. ಬಸ್ ನಿಲ್ದಾಣದ ಹತ್ತಿ ಒಂದು ಮಿಡ್ಲಕ್ಲಾಸ್ ಹೋಟೆಲ ಇದೆ. ಅದೇನೊ ನಾನ್-ವೆಜ್ ಐಟಮ್‌ಗಳನ್ನ ಗಡಿಗಿಯಲ್ಲಿಯೇ ಮಾಡ್ತಾನಂತ. ಗಡಿಗೆ ಮಾಡೋ

ಉದ್ಯಮ ಆಧುನಿಕತೆಯಿಂದ ಯಕ್ಕುಟ್ಟಿ ಹೋಗುತ್ತಿದ್ದರೂ ಇಂತಹವರಿಂದ ಉಳಕೊಂಡದ ಅನಸ್ತಾದ. ಪ್ರತಿ ಸಾರಿಯೂ ಅವ ಮಾಡೋದು ಹೊಸ ಗಡಿಗೆಯಲ್ಲಿಯೆ ಅಂತ. ಟ್ರೈಮ ಭಾರಿ ಮೆಂಟೇನ್ ಮಾಡ್ತಾನೆ. ಅವನಿಗೆ ಫೋನ ಮೂಲಕ ಆರ್ಡರ್ ಬರತಾವೆ. ರಾಯಚೂರಿನಲ್ಲಿ ಎಲ್ಲೇ ಹೋಗಲಿ, ನಾನು ಮಸ್ಕಿಯವ ಅಂದೊಡನೆ, ನನ್ನದ್ಯಾಕೆ ಮಸ್ಕಿಯವರಿಗೆ ಹೊರಗಿನವರು ಯಾರೇ ಭೇಟಿಯಾಗಲಿ ಥಟ್ಟನೆ ಗಡಿಗೆ ಭಾರಿ ಇರತಾವಂತಲ್ರಿ ಅಂತ ಕೇಳ್ತಾರ. ಮೊನ್ನೆ ಹಿಂಗ ಆತು ನಾನು ಯಾವುದೋ ಕಾರ್ಯಕ್ರಮದಾಗ ಊಟಕ್ಕ ಕೂತಿದ್ದೆ. ರಾಯಚೂರಿನಿಂದ ಮಸ್ಕಿಗೆ ಬಂದ ಗೆಳೆಯ ಅಲ್ಲಿಗೆ ಹೋಗಬೇಕಾಗೇದ. ನನ್ನ ಮಗ ಫೋನ ರೀಸಿವಿ ಮಾಡ್ಯಾನ ಅದರಾಗ ಏನೋ ಒತ್ತಿ ಸ್ಪೀಕರ್ ಆನ್ ಮಾಡ್ಯಾನ. ದೋಸ್ತಾ ಬಸ ಸ್ಟ್ಯಾಂಡಿನ್ಯಾಗ ನಿಂತಿನಿ, ಯಾವುದು ರಾಮಣ್ಣ ಗಡಿಗಿ ಮಟನ್ ಖಾನಾವಳಿ? ಎಲ್ಲವೂಕ್ಕೂ ರಾಮಣ್ಣ ಅಂತ ಬೋರ್ಡ ಹಾಕ್ಯಾವ ಅನ್ನಬೇಕೆ! ಶಾಂತ ವಾತಾವರಣದಾಗ ಕೈಊರಿ ಹೊಡಿಯುತ್ತಿದ್ದ ಮಂದಿ ಒಮ್ಮೆಲೆ ನನ್ನತ್ತ ದಿಟ್ಟಿಸಿದ್ರು. ಗುಸುಗುಸು ಮಾತಾಡಕತ್ತಿದ್ರು, ಅಷ್ಟ ಯಾಕ ದೂರ ಸರಕಳ್ಳಕತ್ತೂ ನನಗಾದ ಮುಜುಗರ ಅಷ್ಟಿಷ್ಟಲ್ಲ, ಮಸ್ಕಿ ಸುತ್ತಮುತ್ತಲಿನ ಯಾರೇ ಇರಲಿ ಪಾರ್ಟಿ ಮಾಡಬೇಕಾದ್ರ ಮುದ್ದಾಂ ಇಲ್ಲೆ ಬಂದು ಮಾಡ್ತಾರ. ವ್ಯವಹಾರ ಕುದರಬೇಕೆಂದಿದ್ರ ಅಂತಹ ಅಧಿಕಾರಿಗಳನ್ನ ಇಲ್ಲಿ ಕರೆಸಿ ಗಡಿಗಿ ತಿನ್ನಿಸಿಬಿಟ್ರ ಮುಗದು ಹೋತು. ಅವ ನಿಮ್ಮ ಋಣದಾಗ ಬಿದ್ದಾಂಗ.

ಕಬ್ಬನ್ನು ಬೆಳೆದವರ ಸಮಸ್ಯೆ ಎಲ್ಲರಿಗೂ ಗೊತ್ತಿದ್ದ ಅದ. ಆದರೆ ನಮ್ಮ ಮೇಷ್ಟ್ರೊಬ್ಬರು ಇಲ್ಲಿ ಕೂತುಗೊಂಡ ತಮ್ಮೂರಿನ ಕಬ್ಬಿನ ವ್ಯವಹಾರ ಡೀಲ್ ಮಾಡ್ತಾರ. ಮೇಲ್ಗಡೆ ಭಾಗದ ಆ ಊರಿನ ಜನರಿಗೆ ಆಶ್ಚರ್ಯ. ನಮಗ ಎಪ್ಪಾ ಎಣ್ಣಾ ಅಂದ್ರೂ ಬರಲೊಲ್ಲರು. ಇವರಿಗೆ ಫೋನ್ ಮಾಡಿ ಕಬ್ಬನ್ನ ತಾವೇ ಕಟ್ ಮಾಡಿಕೊಂಡು ಬಂದು ಹಾಕ್ತಾರ. ಹ್ಯಾಂಗ? ಅಂತ. ನನಗ ಆಶ್ಚರ್ಯ ಆಗಿರಬೇಕಾದ್ರ ಪಾಪ ರೈತರಿಗೆ ಇರದೆ ಇರಕಾಗುತ್ತದೆಯೇ. ನಾನು ಹ್ಯಾಂಗ್ರಿ ಇದು? ಅಂದೆ. ಎಲ್ಲಾ ಗಡಗಿ ರಾಮಣ್ಣನ ಮಹಿಮೆ ಅಂದ. ಅದು ಹ್ಯಾಂಗ ಅಂದೆ. ಒಮ್ಮೆ ಕಾರ್ಖಾನೆ ಮಂದಿ ಪಾರ್ಟಿ ಮಾಡಸು ಅಂದ್ರು ಇಲ್ಲಿಗೆ ಕರಕಂಡು ಬಂದು ಮಾಡಿಸಿದೆ. ಚಟಕ್ಕ ಬಿದ್ರು. ತಿಂಗಳಿಗೆ ಎರಡು ಮೂರು ಬ್ಯಾರೆ ಆ ಊಟ ಬಯಸ್ತಾರ, ನಾನು ಆರ್ಡರ್ ತೊಂಡು ರಾಮಣ್ಣಗ ಹೇಳಿ ಬಸ್‌ನ್ಯಾಗ ಇಟ್ಟ ಕಳಸ್ತೀನಿ. ಪಾಪ ಅವರು ಅಕೌಂಟಗೆ ದುಡ್ಡು ಹಾಕ್ತಾರ. ಹಾಗಾಗಿ ನನ್ನ ಕಬ್ಬಿನ ವ್ಯವಹಾರ ಸಲೀಸು ಆಗ್ಯಾದ. ನಾನು ತಿನ್ನದೆ ಇದ್ದರೂ ವ್ಯವಹಾರ ನಡಸೋ ನನ್ನನ್ನು ನೋಡಿ ರಾಮಣ್ಣ ಮೇಷ್ಟ್ರೇ ನಿಮ್ಮ ಋಣ ಬಾಳ ಅದ. ನೀವು ಎಲ್ಲಿಗೆರ ಹೋಗಬೇಕಾದರ ನನ್ನ ಗಾಡಿಗೆ ಡಿಸೈಲ್ ಹಾಕಿಸಿಕೊಂಡು ಹೋಗ್ರಿ ನನಗ ಪ್ರೈಸೇನು ಕೊಡಬ್ಯಾಡ್ರಿ ಅಂತ ಹೇಳ್ಯಾರೊ ಅಂದ್ರು. ಆ ರಾಮಣ್ಣ ಏನು ಮೋಡಿ ಮಾಡ್ಯಾನೋ ಏನು ಗೊತ್ತಿಲ್ಲ ಅಂತಹ ಹವಾ ಹುಟ್ಟಾಕ್ಯಾನ. ಅಂಗಡಿಗೆ ಆತ ಬರಬೇಕಾದ್ರ ಕಾರನ್ಯಾಗ ಬರತಾನ ಮತ್ತ.

ಇಂತಿರ್ಪ ಹೋಟೆಲ್‌ಗಳು ನಮ್ಮಲ್ಲಿ ಭರ್ಜರಿಯಾಗಿ ನಡೀತಿರಬೇಕಾದ್ರೆ ಇಂತಹ ಉದ್ಯೋಗ ಮಾಡೋರಿಗೆಲ್ಲ ಬಾಳ್ವಸ್ಥರ ಊರೆ. ನಮ್ಮ ಪಕ್ಕದ ಮನೆಯಲ್ಲಿ ಕುಟುಂಬ ಜಗಳಾಡಿಕೊಂಡ್ರು. ಆಕಿ ಸೆಟಗೊಂಡು ತವರಿಗೆ ಹೋದ್ಲು. ಇವ ಆಕಿ ಬಗ್ಗೆ ಚಿಂತಿ ಮಾಡ್ಲಿಲ್ಲ. ಆ ಹುಡುಗಿ ಅಪ್ಪ ಪಕ್ಕದ ಮನೆಯವರನ್ನಾದರೂ ವಿಚಾರ ಮಾಡಿದ್ರಾತು ಅಂತ ನನಗ

ಫೋನ ಹಾಯಿಸಿ ಅವಗ ಸೊಕ್ಕುಮುರಿಲಿ ಮಾಡಿಕೊಂಡು ತಿನ್ನಲಿ ಕೈ ಸುಟ್ಟಗೊಂಡ್ರ ಗೊತ್ತಾಗತ್ತಂತ ಮಗಳನ್ನ ಮನೀಲಿ ಕೂಡಿಸಿಕೊಂಡು ಕೂತಿನಿ ಅವನ ಹಕಿಕತ್ತ ಗೊತ್ತಾಗವಲ್ತಲ್ಲ. ನಿಮ್ಮ ಮುಂದ ಏನಾದರೂ ಹೇಳ್ಯಾನನೂ.....? ಊಟ ತಿಂಡಿಗೆ ಹ್ಯಾಂಗ ಮಾಡಿಕೊಂತಾನ ಸೊಕ್ಕ ಮುರದಾದನೂ ಅಂತ ಕೇಳಿದ್ರು. ನಾನು ಅವ ಗುಂಡುಗುಂಡಗೆ ಇದ್ದಾನ. ಊರಾಗ ಮೂರು ಒಪ್ಪೊತ್ತು ಸ್ವಾದಿಷ್ಟಕರವಾಗಿ ತನುವನ್ನು ತೃಪ್ತಿಪಡಿಸೋ ಹೋಟಲ್ ಖಾನಾವಳಿ ಅವ. ಬ್ಯಾರೆ ಊರಾಗಿದ್ರ ಹ್ಯಾಂಗಿತ್ತನೂ. ಅವನ ತಿಂಡಿ ಮುರುಕೊಳ್ಳುವಂಗ ಅನಿಸಿತ್ತಪ ಅಂದ್ರ ಇಲ್ಲೇ ಇದ್ದು ಮುರುಕೋಬೇಕು. ಶಟಗೊಂಡು ಹೋಗಿ ಅಲ್ಲಾ ಎಂದಾಗ ಪಾಪ ಹೌಹಾರಿ ಮರುದಿನ ಮಗಳೊಂದಿಗೆ ಪ್ರತ್ಯಕ್ಷನಾಗಿದ್ದ ಆ ಮಾವ. ಖರೆ ಅದ ನನ್ನನ್ನು ಹಿಡಕೊಂಡು ಎಲ್ಲರೂ ಮನೆಯಲ್ಲಿ ಇದನ್ನ ಕಾಯ್ತಿರತೀವಿ. ಎಲ್ಲಿಗಾದ್ರೂ ಊರಿಗೆ ಹೋಗ್ತಿನಿ ಅಂದ್ರ ಮನೆಮಂದಿನ್ನ ಸಂತೋಷದಿಂದ ಬೀಳ್ಕೊಡತೀವಿ.

---

## ಅ.ನ.ಕೃ. ಹಾಗೂ ಅನುಭವ

ಓದಲು ಪ್ರಾರಂಭಿಸಿದರೆ ಸಾಕು. ಕೊನೆಯ ಪುಟದವರೆಗೂ ತಾನಾಗಿಯೇ ಓದಿಸಿಕೊಂಡು ಹೋಗಿಬಿಡುತ್ತದೆ. ಇದು ಅ.ನ.ಕೃ. ಅವರ ಕಾದಂಬರಿಗಳ ಗುಣ. ಅಂತೆಯೇ ಅವರು ಸಭಿಕರನ್ನು ಅಯಸ್ಕಾಂತದಂತೆ ಹಿಡಿದಿಟ್ಟುಕೊಳ್ಳುವ ಶಕ್ತಿಯುಳ್ಳ ನಿರರ್ಗಳ ಭಾಷಣಕಾರರೂ ಆಗಿದ್ದರು.

ಒಮ್ಮೆ ನಮ್ಮೂರಾದ ತೀರ್ಥಹಳ್ಳಿಯಲ್ಲಿ 'ಸಂಸ್ಕೃತಿ ಪ್ರಸಾರಾಂಗ' ಎಂಬ ಕಾರ್ಯ ಕ್ರಮದಲ್ಲಿ ಅವರ ಭಾಷಣ ಏರ್ಪಟ್ಟಿತ್ತು. ಭಾಷಣದ ಮಧ್ಯದಲ್ಲಿ ಅಂದಿನ ಗಟ್ಟಿ ಜೊಳ್ಳು ಸಾಹಿತ್ಯದ ಬಗ್ಗೆ ಹೇಳುತ್ತಾ, ಇನ್ನೂ ಉತ್ತಮ ಬರವಣಿಗೆಗಳು ಹೊರಬರಬೇಕು. ಅನುಭವದ ಮೂಸೆಯಲ್ಲಿ ಬೆಂದು ಹೊರಬಂದ ಸಾಹಿತ್ಯ ಸತ್ವಯುತವಾಗಿರುತ್ತವೆ. 'ಅನುಭವದ' ಆಧಾರವಿಲ್ಲದಿದ್ದರೆ ಅದು ಜೊಳ್ಳು...... ಎಂದು ಹೇಳಿ ಮುಂದುವರೆಯಲೆತ್ನಿಸಿದರು.

ಆಗ ಸಭಿಕರಲೊಬ್ಬ ಎದ್ದು ನಿಂತು ಅವರ ಮಾತನ್ನು ಅರ್ಧಕ್ಕೆ ತಡೆದು ಕೇಳಿದ ''ಹಾಗಿದ್ದರೆ ನೀವು 'ನಗ್ನಸತ್ಯ', 'ಸಂಜೆಗತ್ತಲು' ಇತ್ಯಾದಿ ಕಾದಂಬರಿಗಳನ್ನು ಅನುಭವದ ಆಧಾರದ ಮೇಲೆ ಬರೆದಿದ್ದೀರಾ?....''

ಅದಕ್ಕೆ ಅ.ನ.ಕೃ.ರವರು ಹೌದು ಎಂದು ತಡಮಾಡದೇ ಉತ್ತರಿಸಿಬಿಟ್ಟರು.

ಸಾಕಷ್ಟು ಸಂಖ್ಯೆಯಲ್ಲಿ ನೆರೆದಿದ್ದ ಸಭಿಕರೆಲ್ಲಾ ಓ... ಹೌದಾ...? ಅಂತ ಚಪ್ಪಾಳೆ ಹೊಡೆದು ಜೋರಾಗಿ ಕೂಗಲಾರಂಭಿಸಿದರು.

ಕವಿಗಳು ಒಂದು ಕ್ಷಣಕ್ಕೆ ವಿಚಲಿತರಾದಂತೆ ಕಂಡು ಬಂದರೂ ಉಗುಳು ನುಂಗಿ ನಂತರ ರಾಗವಾಗಿ ಹೇಳಿದರು...

''ಹೌದು... ಆದರೆ ಸ್ವಾನುಭವದಿಂದಲ್ಲ... ಪರಾನುಭವದಿಂದ....''

ಮಾತಿನ ಚತುರತೆಗೆ ಚಪ್ಪಾಳೆ ಸದ್ದು ಅಡಗಿ ಹೋಯಿತು...

*ಕೆ.ಆರ್. ಸ್ವಾಮಿ*

# ಕೇಶ ಮತ್ತು ನಯನ

**- ಸೂರಿ ಹಾರ್ದಳ್ಳಿ**

ಇಷ್ಟು ದಿನ ನನ್ನ ಕಣ್ಣಿಗೆ ಬರಲೇ ಇಲ್ಲವೇ ಎಂದು ಅಚ್ಚರಿ ಮೂಡಿಸುವಂತೆ ನನ್ನ ತಲೆಯ ಮುಂದಿನ ಅಂಗೈ ಅಗಲದಷ್ಟು ಕೂದಲು ಬಿಳಿ ಬಣ್ಣ ಬಳಿದಂತೆ ಬೆಳ್ಳಗಾಗಿ, ಬೆಳ್ಳಿಯಂತಾಗಿ, ಪಳ ಪಳ ಹೊಳೆಯುವುದು ಕನ್ನಡಿ ನೋಡಿದಾಗ ದೃಷ್ಟಿಗೆ ಬಿದ್ದು ಅಚ್ಚರಿಯಾಯಿತು. ಅರೆ, ಇಷ್ಟೊಂದು ದಿನ ಇವೇಕೆ ನನಗೆ ಕಾಣಿಸಲಿಲ್ಲ? ಅಥವಾ ನಾನು ಸರಿಯಾಗಿ ಗಮನಿಸಲಿಲ್ಲವೇ?

ಕೆಲವರಂತೂ ನಿಷ್ಕಾರುಣ್ಯವಾಗಿ ಏನೋ ಸೂರಿ, ಬಿಳಿ ಕೂದಲು ಬಂದುಬಿಟ್ಟಿದೆ. ಮುದುಕನಾದೆ ಅನ್ನು, ಎಂತಲೋ ಅಥವಾ ಅದೇ ಅರ್ಥ ಬರುವ ಬೇರೇನೋ ಪದಗಳನ್ನು ಹೇಳಿದಾಗಲೆಲ್ಲಾ ಈ ಜಗತ್ತಿನಲ್ಲಿ ನನಗೆ ಎಲ್ಲವೂ ಮುಗಿದುಹೋಗಿಬಿಟ್ಟಿದೆ ಎನಿಸಿತು.

ಅಂತಹ ಸಂದರ್ಭದಲ್ಲಿ ನನ್ನ ಮಗಳು ಒಮ್ಮೆ ಎಂದಳು, ಹೇರ್ ಡೈ ಮಾಡಿಕೊಳ್ಳಿ ಅಪ್ಪ. ಯಂಗ್ ಆಗಿ ಕಾಣಿಸ್ತೀರಿ. ಈಗ ಎಲ್ಲಾ ಮಾಡಿಕೊಳ್ತಾರೆ. ಯಾರೂ ಏನೂ ತಿಳಿದುಕೊಳ್ಳೊಲ್ಲ, ಅಂತ ಹೆಂಡತಿ ರೇಗಿದಳು, ಈ ವಯಸ್ಸಿನಲ್ಲಿ ಅವರೇನು ಹುಡುಗಿಯರ ಹಿಂದೆ ಸುತ್ತಬೇಕಾ? ಹಾಗೇ ಇರಲಿ ಎಂದು. ಅದೊಂದು ದಿನ, ಎಂಭತ್ತು ರೂಪಾಯಿಯ ಕೆಲಸವನ್ನು ಐದೇ ನಿಮಿಷಗಳಲ್ಲಿ ಮುಗಿಸಿದ ನಾಪಿತ ಬೆಂಗಳೂರು ಕನ್ನಡದಲ್ಲಿ ಕೇಳಿದ, ಹೇರಿಗೆ ಡೈ ಹಾಕಲಾ ಸರ್ ಎಂದು. ಅದಾವುದೋ ಒಂದು ನಿಮಿಷದಲ್ಲಿ ಅದೇನೆನಿಸಿತೋ, ಹೂ ಹಾಕು ಎಂದೆ. ನೂರು ರೂಪಾಯಿ ಹೆಚ್ಚಿಗೆ ಕೊಟ್ಟೆ. ಅರ್ಧ ಗಂಟೆ ಬಿಟ್ಟು ಸ್ನಾನ ಮಾಡಿ ಸರ್, ಶಾಂಪೂ ಉಪಯೋಗಿಸಿ, ಎಂದು ಅವನು ಸಲಹಿಸಿದ.

ಮರುದಿನ ಒಬ್ಬರು ಕೇಳಿದರು, ಏನ್ರೀ ಸೂರಿ, ರಾತ್ರಿ ಜಾಸ್ತಿ ಪರಮಾತ್ಮನ ಸೇವನೆ ಮಾಡಿದ ಹಾಗಿದೆ? ಕಣ್ಣೆಲ್ಲಾ ಕೆಂಪು ಕೆಂಪು ಎಂದು. ಕಚೇರಿಯ ಶೌಚಾಲಯದ ಕನ್ನಡಿಯೂ ಅವರ ಮಾತನ್ನು ಸಮರ್ಥಿಸಿತು. ಇರಲಿಕ್ಕಿಲ್ಲ ಬಿಡ್ರೀ, ಡ್ರೈವ್ ಮಾಡ್ತಿರೋವಾಗ ಕಣ್ಣಿಗೆ ಕಸ ಬಿದ್ದಿರಬಹುದು, ಎಂದು ಸಮರ್ಥಿಸಿಕೊಂಡೆ. ಆದರದು ಕೆಲವೇ ಕಾಲ.

ಅದು ಯಾಕೋ ಕಣ್ಣು ಮಂಜು ಮಂಜು ಅನಿಸತೊಡಗಿ, ಕಣ್ಣು ಗುಡ್ಡೆಗಳು ದಪ್ಪವಾಗಿವೆ ಎನಿಸಿತು. ಒಳಗೆ ಅದೇನೋ ಹೊರ ವಸ್ತುಗಳು ಸೇರಿಕೊಂಡು ಚುಚ್ಚುತ್ತಿವೆಯೆನಿಸಿತು, ಸುಮ್ಮಸುಮ್ಮನೆ ನೀರು ಒರಸತೊಡಗಿತು. ತುಸುವೇ ಹೊತ್ತು ಕಣ್ಣು ತೆರೆದರೂ ಬೇಗ ಬಳಲಿಕೆ ಬಂದುಬಿಡುತ್ತಿತ್ತು. ಕಣ್ಣುಗುಡ್ಡೆಗಳು ಕೆಂಪಾದಾಗ ಕೇಳಿದ ಕೆಲವರಿಗೆ ರಾತ್ರಿ ನಿದ್ರೆ ಸಾಕಾಗಲಿಲ್ಲ, ಅದೇ ಕಾರಣ, ಸುಳ್ಳು ಹೇಳಿ ನನ್ನನ್ನು ಸಮರ್ಥಿಸಿಕೊಂಡರೂ ಈ ಸುಳ್ಳು ಶಾಶ್ವತವಲ್ಲ ಎಂಬುದು ಅರಿವಾಗತೊಡಗಿತು.

ಪ್ರಪಂಚದ ಎಲ್ಲಾ ಸಮಸ್ಯೆಗಳೂ ಗೌಣವಾಗಿ ಉರಿವ, ಕಿರಿಕಿರಿ ಮಾಡುವ ಕಣ್ಣುಗಳ ಶಮನವೊಂದೇ ದೊಡ್ಡದಾಗಿ ಕಾಣಿಸತೊಡಗಿತು. ಪುಕ್ಕಟೆ ಸಲಹೆಗಳ ರಾಶಿ ರಾಶಿಯೇ ಕರಿದುಬಂತು. ಉಷ್ಣ ಪರಿಹಾರಾರ್ಥದಿನಕ್ಕೆ ಎರಡೆರಡು ಎಳನೀರು ಕುಡಿದೆ. ಏನೂ

ವ್ಯತ್ಯಾಸವಾಗಲ್ಲಿ. ಕೆಂಪು ಕಣ್ಣು ಕಂಡ ಒಬ್ಬರು ಬಿಯರ್ ಕುಡಿಯಿರಿ, ಬಾಡಿ ತಂಪಾಗುತ್ತೆ, ಎಂದು ಸಲಹಿಸಿದರು.

ಶೀರ್ಷಾಸನ ಮಾಡಿ, ಹಾಗೆ ಮಾಡಿದ ತಮ್ಮವರೊಬ್ಬ ಶತಾಯುಷಿ ಇನ್ನೂ ತಮ್ಮ ಕೂದಲನ್ನು ಕಪ್ಪಾಗಿಸಿಕೊಂಡಿದ್ದಾರೆ. ಮಿದುಳಿಗೆ ರಕ್ತ ಹೋದರೆ ಕಣ್ಣಿನ ಸಮಸ್ಯೆಯೂ ಪರಿಹಾರವಾಗುತ್ತದೆ, ಕೂದಲೂ ಬೆಳೆಯುತ್ತದೆ, ಎಂದರೊಬ್ಬರು. ನಾನು ಪ್ರಯತ್ನಿಸಲಿಲ್ಲ. ಅವರು ಕೆಲ ಕಣ್ಣು ಯೋಗವನ್ನೂ ಅವರಿಗೆ ಇದ್ದ ತುಸುವೇ ಸಮಯದಲ್ಲಿಯೂ ರಭಸದಿಂದ ಹೇಳಿ ತಲೆ ಕೆಡಿಸಿಬಿಟ್ಟರು. ಇನ್ನಾರೋ ಹೇಳಿದಂತೆ ಸೌತೆಕಾಯಿ ಹೋಳುಗಳನ್ನು, ಆಲೂಗಡ್ಡೆ ಚೂರುಗಳನ್ನು ಕಣ್ಣುಗಳ ಮೇಲೆ ಗಂಟೆಗಟ್ಟಲೆ ಇಟ್ಟುಕೊಂಡದ್ದಾಯಿತು. ಆದೂ ಏನೂ ಉಪಯೋಗವಾಗಲಿಲ್ಲ.

ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ, ಎಂಬ ಮಾತು ನೆನಪಿಗೆ ಬಂತು. ಈಗ ಇಷ್ಟು, ಇನ್ನೂ ದೊಡ್ಡ ತೊಂದರೆ ಆದರೆ? ಒಮ್ಮಲೇ ನಾನು ಕುರುಡನಾಗಿಬಿಟ್ಟೆ ಎನಿಸಿ ಭಯವಾಯಿತು. ತನ್ನ ಗಂಡನ ಕಣ್ಣು ಬೇನೆ ಗುಣವಾದರೆ ನಿನಗೆ ಬೆಳ್ಳಿ ಕಣ್ಣುಗಳನ್ನು ಮಾಡಿಸಿ ಕೊಡುತ್ತೇನೆ ಎಂದು ಅದಾವುದೋ ದೇವರಿಗೆ ನನ್ನ ಹೆಂಡತಿ ಹರಕೆ ಹೊತ್ತಳು. ದೇವರಿಗೂ ಕೃಪೆ ಬಂದ ಹಾಗೆ ಕಾಣಲಿಲ್ಲ.

ಅಂಗಡಿಗೆ ಹೋಗಿ ಹೇರ್ ಡೈ ಪೊಟ್ಟಣಗಳನ್ನು ಒಂದಕ್ಕೆ ಬರೀ ಹತ್ತು ರೂಪಾಯಿಗಳಂತೆ ಕೊಂಡುಕೊಂಡು ಬಂದೆ. ತೊಂಭತ್ತು ರೂಪಾಯಿ ಲಾಭ, ಅಲ್ಲ ಉಳಿತಾಯ. ಅದರ ಮೇಲೆ ಅತೀ ಚಿಕ್ಕ ಅಕ್ಷರಗಳಲ್ಲಿ ಮುದ್ರಿಸಿದ ಡೈರೆಕ್ಷನ್ಸ್ ಫಾರ್ ಯೂಸ್‌ಗಳನ್ನು ನನ್ನ ಮಗಳು ಓದಿ ಹೇಳಿದಳು. ಅಂತೆಯೇ ಅದರಲ್ಲಿರುವ ಪುಡಿಯನ್ನು ನೀರಲ್ಲಿ ಮಿಶ್ರ ಮಾಡಿ ನನ್ನ ಹೆಂಡತಿ ನನ್ನ ತಲೆಗೆಲ್ಲಾ ಬಳಿದಳು. ಉಳಿದಿದ್ದನ್ನು ಮೀಸೆಗೂ, ಹುಬ್ಬಿಗೂ ಹಚ್ಚಿ ಸರ್ವ ಕಪ್ಪು ಮಯಂ ಮಾಡಿಬಿಟ್ಟಳು. ತಮಾಷೆ ನೋಡಿ, ಎಲ್ಲದರಲ್ಲಿಯೂ ಬಿಳಿಗೇ ಪ್ರಾಶಸ್ತ್ಯ ಕೊಡುವ ನಾವು ಕೂದಲು ವಿಷಯದಲ್ಲಿ ಮಾತ್ರ ನಮ್ಮ ಧೋರಣೆ ಬದಲಿಸಿಕೊಳ್ಳುತ್ತೇವೆ.

ತಲೆ ಕೂದಲಿನ ಜೊತೆಗೆ ಹಾಕಿಕೊಂಡ ಬನಿಯನ್ ಮೇಲೆ ಕೂಡಾ ಆ ಡೈ ಬಿದ್ದು, ಅದು ಜಿರಾಫೆಯ ಮೈಯಂತೆ ಕರಿ–ಬಿಳಿ ಬಣ್ಣ ಪಡೆಯಿತು. ತೊಂಭತ್ತು ರೂಪಾಯಿ ಉಳಿಸುವ ಕ್ರಿಯೆಯಲ್ಲಿ ನೂರು ರೂಪಾಯಿಯ ಬನಿಯನ್ನ ಹಾಳಾಯಿತು ಎಂಬುದು ಲೆಕ್ಕಾಚಾರ.

ಕಣ್ಣು ನೋವು ಶಮನವಾಗುವ ಬದಲು ಜಾಸ್ತಿಯಾಗತೊಡಗಿತು. ಕಂಪ್ಯೂಟರ್ ವೀಕ್ಷಣೆಯನ್ನು ಬಹುಕಾಲ ಮಾಡುವುದರಿಂದ ಕಣ್ಣು ಉರಿಯುತ್ತದೆ ಎಂದು ಯಾರೋ ಹೇಳಿದರೂ ನಾನೇನು ಅಷ್ಟು ಕಾಲ ನೋಡುವವನಲ್ಲವಾದ್ದರಿಂದ ಆ ಸಾಧ್ಯತೆಯ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ಕೊನೆಗೊಂದು ದಿನ ಮನೆಯ ಪಕ್ಕ ಇರುವ ಕಿಂಖರ ನೇತ್ರಾಲಯಕ್ಕೆ ಹೋದೆ.

ಆರು ಕೋಣೆ ಸುತ್ತಿ, ಮೂರು ಗಂಟೆ ಕಾದ ನಂತರ ಆ ಡಾಕ್ಟರನ್ನು ಭೇಟಿಯಾಗಲು ಸಾಧ್ಯವಾಯಿತು.

ತಪಾಸಣೆ ನಡೆಸಲು ಮೂರು ಗಂಟೆ ತೆಗೆದುಕೊಂಡಿತು. ನನಗೆ ಭಯವಾಯಿತು. ಕಣ್ಣು ಕಳೆದುಕೊಂಡರೆ ಹೇಗೆ ಎಂದು ಮನಸ್ಸಿನಲ್ಲಿಯೇ ಆತಂಕದಿಂದ ಯೋಚಿಸಿದೆ. ಡಾಕ್ಟರ್ ಮೂರು ರೀತಿಯ ಐ ಡ್ರಾಪ್ಸ್, ಆರೇಳು ರೀತಿಯ ಮಾತ್ರೆಗಳು, ಇವನ್ನು ಬರೆದು ಕೊಟ್ಟು, ಅದನ್ನು ಉಪಯೋಗಿಸುವ ವಿಧಾನಗಳನ್ನು ತಿಳಿಸಿದರು.

ಮೂರು ತಿಂಗಳು ಕಳೆದರೂ, ಮೂರು ಬಾರಿ ಮರು ಭೇಟಿ ಮಾಡಿದರೂ ಏನೂ ಉಪಯೋಗ ಕಾಣಲಿಲ್ಲ. ಬೇರೆ ಔಷಧ ಬರೆದುಕೊಟ್ಟರು. ಅಂತೂ ಔಷಧದ ಅಂಗಡಿಯಲ್ಲಿ ಸಿಗುವ ಎಲ್ಲಾ ಕಣ್ಣಿಗೆ ಸಂಬಂಧಿಸಿದ ಔಷಧಗಳನ್ನೂ ಕೊಂಡುಕೊಂಡೆ. ಮತ್ತೆ ಕೂಡಾ ಅದೇ ಪರಿಸ್ಥಿತಿ. ಬೇರೆ ಯಾರೋ ಹೇಳಿದರು, ಈ ಆಸ್ಪತ್ರೆ ಸರಿಯಿಲ್ಲ, ಫುರ್‌ವಾಲ್ ಆಸ್ಪತ್ರೆಗೆ ಹೋಗಿ ಎಂದು. ಹಿಂದಿನ ಆಸ್ಪತ್ರೆ ಕೊಟ್ಟ ಎಲ್ಲಾ ವಿವರಗಳನ್ನು ತೆಗೆದುಕೊಂಡು ಫುರ್‌ವಾಲ್ ಕಣ್ಣಾಸ್ಪತ್ರೆಗೆ ಹೋದೆ. ಕಣ್ಣಿಗೆ ಒಂದಿಷ್ಟು ಡ್ರಾಪ್ಸ್ ಹಾಕಿ ಕುಳಿತಿರಿ ಎಂದರು.

ಕಣ್ಣು ಮುಚ್ಚಿಕೊಂಡಾಗಲೇ ಬುದ್ಧಿ ಚುರುಕಾಗುವುದು. ಮುನ್ನೂರು ರೂಪಾಯಿ ಕೊಟ್ಟಿದ್ದೇನೆ, ಇದರಲ್ಲಿ ಪರೀಕ್ಷೆಯ ವೆಚ್ಚ ಬರೀ ಇಪ್ಪತ್ತು ರೂಪಾಯಿ. ಉಳಿದ ಇನ್ನೂರೆಂಭತ್ತು ರೂಪಾಯಿಗಳು ಇಲ್ಲಿನ ಶೃಂಗಾರ, ಬೆಳಕು, ಬಾಡಿಗೆ, ಸುಖಾಸೀನಗಳು, ಹವಾ ನಿಯಂತ್ರಣ, ಕೆಲಸಗಾರರ ಸಂಬಳ, ಖರೀದಿಸಿದ ಯಂತ್ರಗಳ ಬಂಡವಾಳದ ಬಡ್ಡಿ, ಇವುಗಳಿಗೆ ನನ್ನ ಕೊಡುಗೆ ಎಂದು ತಿಳಿದು ನಾನೂ ಈ ಆಸ್ಪತ್ರೆಯ ಒಳಿತಿಗಾಗಿ ತ್ಯಾಗ ಮಾಡಿದವನು ಎನಿಸಿತು. ಹೆಣ್ಣೊಬ್ಬಳು ನನ್ನನ್ನು ಎಚ್ಚರಿಸಿ, ಕೈಗೆ ಫೈಲನ್ನು ತುರುಕಿ, ಮಹಡಿಯ ನಾಲ್ಕನೆಯ ಕೋಣೆಗೆ ಹೋಗಿ, ಎಂದಳು.

ಮತ್ತೆ ಎರಡು ತಿಂಗಳು ಅವರು ಕೊಟ್ಟ ಔಷಧಗಳನ್ನು ಕಣ್ಣಿಗೆ ಸುರುವಿಕೊಂಡೆ. ಗುಣವೇನೂ ಕಾಣಲಿಲ್ಲ, ಹಾಡಿದ್ದೇ ಹಾಡು ಕಿಸಬಾಯಿ ದಾಸಯ್ಯ ಎಂಬಂತೆ ಅದೇ ಸಮಸ್ಯೆಗಳನ್ನು ಡಾಕ್ಟರೆದುರು ಒದರಬೇಕು.

ವಾರದ ನಂತರ ಮತ್ತೆ ಅದೇ ಫುರ್‌ವಾಲ್ ಕಣ್ಣಾಸ್ಪತ್ರೆಗೆ ಹೋದೆ. ನನ್ನ ಕಣ್ಣುಗಳು ಎಂದೂ ಸರಿಯಾಗವು, ಇದೇ ಸಮಸ್ಯೆಯಿಂದ ಜೀವನ ಪರ್ಯಂತ ನರಳಬೇಕೇನೋ ಎಂಬ ಅಳುಕೂ, ಪದವಿಗಳ ಮೇಲೆ ಪದವಿಗಳನ್ನು ತಮ್ಮ ಹೆಸರಿನ ಮುಂದೆ ಪೇರಿಸಕೊಂಡಿರುವ ಕಣ್ಣು ವೈದ್ಯರಿಗೂ ಅರಿವಾಗದ ಒಂದು ಯುನೀಕ್ ಕಾಯಿಲೆ ನನಗೆ ಬಂದಿದೆ.

ಈಗ ಮತ್ತೊಬ್ಬ ಡಾಕ್ಟರು, ವೈದ್ಯೆ. ನನ್ನ ಎಲ್ಲಾ ಸಮಸ್ಯೆಗಳನ್ನೂ ಆಲಿಸಿ, ನಾನು ಈತನಕ ಹೋಗಿರದ ಮತ್ತೊಂದು ಕೋಣೆಗೆ ಹೋಗಲು ಹೇಳಿದಳು. ನಾನು ನನ್ನ ಫೈಲನ್ನು ಹೊತ್ತುಕೊಂಡು ಆ ಕೋಣೆಗೆ ಹೋದೆ. ನನ್ನ ಕಣ್ಣೆದುರು ಅದೇನೋ ಯಂತ್ರಗಳನ್ನು ಇಟ್ಟು, ಅದನ್ನ ಮುಂದಿನ ಗೋಡೆಗೆ ಪ್ರೊಜೆಕ್ಟ್ ಮಾಡಿ, ನೋಡಿ, ಕಣ್ಣಿನ ಕೆಳ ರೆಪ್ಪೆಯಲ್ಲಿ ಏನೋ ಒಂದು ಗಡ್ಡೆ ಬೆಳೆದಿದೆ. ಅದನ್ನು ಸರ್ಜರಿ ಮಾಡಿ ತೆಗೆಯಬೇಕು. ಆಗ ನಿಮ್ಮೆಲ್ಲಾ ಸಮಸ್ಯೆ ಪರಿಹಾರ, ಎಂದರು. ಮತ್ತೆ ಅದೇ ಡಾಕ್ಟರನ್ನು ನೋಡಿದೆ. ಒಬ್ಬ ಸ್ಪೆಷಲಿಸ್ಟ್ ಡಾಕ್ಟರು

ಇದ್ದಾರೆ, ಅವರ ಅಪಾಯಿಂಟ್‌ಮೆಂಟ್ ಪರೀಕ್ಷಿಸಿ ನಿಮಗೆ ಫೋನ್ ಮಾಡುತ್ತೇವೆ, ಎಂದವರು ಇಷ್ಟು ಹಣ ಖರ್ಚಾಗುತ್ತೆ, ಎಂತಲೂ ಹೇಳಿದರು. ಕಣ್ಣನ್ನು ನಿರ್ಲಕ್ಷ್ಯ ಮಾಡಬಾರದು. ಅದೂ ವೈದ್ಯರಾಜರು ಎಂದ ಮೇಲೆ ಕೊಂಯ ಕೊಸ್ಸ ಎನ್ನಲು ಸಾಧ್ಯವೇ? ರೆಸೆಪ್ಷನಿಸ್ಟಿಣಿಯು ಯಾರು ಯಾರಿಗೋ ನಂಬರಿಸಿ, ಮುಂದಿನ ವಾರ, ಹತ್ತು ಗಂಟೆಗೆ ಅಪಾಯಿಂಟ್‌ಮೆಂಟ್ ಇದೆ, ಬನ್ನಿ ಎಂದು ಉಲಿದಳು. ತಲೆ ಆಡಿಸಿದೆ, ಕೋಲೆ ಬಸವನ ಹಾಗೆ! ಆ ದಿನ, ರಜಾ ಹಾಕಿ ಮನೆಯಲ್ಲಿಯೇ ಕುಳಿತಿದ್ದು, ಅರ್ಧ ಗಂಟೆಗೆ ಮೊದಲು ಆಸ್ಪತ್ರೆಗೆ ಹೊರಡಲು ಸಿದ್ಧ ಮಾಡಿಕೊಳ್ಳುತ್ತಿದ್ದೆ, ಆಗ ಒಂದು ಕರೆ ಬಂತು, ಗುಡ್ ಮಾರ್ನಿಂಗ್ ಸರ್, ನಾನು ಫುರ್‌ವಾಲ್ ಆಸ್ಪತ್ರೆಯಿಂದ, ಎಂದುಲಿಯಿತು ಹೆಣ್ಣೊಂದು. ಅವಳು ಹೇಳಿದಂತೆ, ಅಂದು ಡಾಕ್ಟರ್ ಸಿಗೋಲ್ಲ, ನಾಳೆ ಬರಲು ಆಗುತ್ತದೆಯೇ?

ಮರುದಿನ ನಾನು ಸಿಗುವಂತಿರಲಿಲ್ಲ. ಮುಂದಿನ ವಾರ ಯಾವುದಾದರೊಂದು ಡೇಟ್ ಫಿಕ್ಸ್ ಮಾಡಿ, ಎಂದೆ. ಆಕೆ ಮತ್ತೆ ಎಂದಿಗೂ ಕರೆ ಮಾಡಲಿಲ್ಲ. ತಮಾಷೆ ಎಂದರೆ ನನ್ನ ಕಣ್ಣಿನ ಸಮಸ್ಯೆ ನಿಧಾನವಾಗಿ ಕಡಿಮೆ ಆಗುತ್ತಾ ಬಂದು, ನಂತರ ಮಾಮೂಲಿನಂತೆ ಸರಿಯಾಯಿತು. ಮತ್ತೆ ನಾನು ಆಸ್ಪತ್ರೆ ಕಡೆ ಮುಖ ಮಾಡಲಿಲ್ಲ. ಕಣ್ಣುಗಳು ಎಂದಿನಂತಾದವು, ನನ್ನ ಅದೃಷ್ಟವೆಂಬಂತೆ ಎರಡೂ ಆಸ್ಪತ್ರೆಗಳು ಸೂಚಿಸಿದ ಕನ್ನಡಕಗಳನ್ನು ನಾನು ಖರೀದಿಸಿರಲಿಲ್ಲ.

ವರ್ಷಗಳು ಕಳೆದವು. ಒಂದು ದಿನ ನನ್ನ ಹೆಂಡತಿ ಹೇಳಿದಳು, ರೀ, ಏನು ಎಂಬಂತೆ ನಾನು ತಲೆ ಎತ್ತಿದೆ. ಮೊದಲು ನೀವು ತಲೆ ಕೂದಲಿಗೆ ಬಣ್ಣ ಹಾಕಿಕೊಳ್ತಿದ್ದರಲ್ಲ, ಆಗ ತಂದಿರೋ ಹೇರ್ ಡೈ ಒಂದು ಪ್ಯಾಕೆಟ್ ಇದೆ. ತಲೆಗೆ ಬಣ್ಣ ಹಚ್ಚಲಾ? ಹುಡುಗರ ಹಾಗೆ ಕಾಣ್ತೀರಿ, ಎಂದು ತಲೆಯಲ್ಲಿ ಆಸೆಯ ಕಳೆಯ ಬೀಜವೊಂದನ್ನು ಬಿತ್ತಿದಳು. ಮತ್ತೆ ನನ್ನ ಮನಸ್ಸು ಅಲ್ಲೋಲಕಲ್ಲೋಲವಾಯಿತು. ಒಂದೆಡೆ ಕಾಸು ಕೊಟ್ಟು ತಂದಿರೋದನ್ನ ವ್ಯರ್ಥ ಮಾಡಬಾರದೆಂಬ ಯೋಚನೆ, ಇರಲಿ, ಎಂದು ನನ್ನ ಹೆಂಡತಿಯ ಎದುರು ಕುಳಿತೆ. ಆಕೆ ಬ್ರಷ್ ಹಿಡಿದು ಕೂದಲುಗಳನ್ನು ಕರಿದಾಗಿಸಿದಳು. ಅರ್ಧ ಗಂಟೆಯ ನಂತರ ಸ್ನಾನ ಮಾಡಿದೆ. ಮಧ್ಯಾಹ್ನದ ಹೊತ್ತಿಗೆ ಕಣ್ಣಲ್ಲಿ ನವೆ, ಉರಿ. ಕನ್ನಡಿಯಲ್ಲಿ ನೋಡಿಕೊಂಡರೆ ಕಣ್ಣುಗುಡ್ಡೆ ಕೆಂಪು ಕೆಂಪು. ತಕ್ಷಣವೇ ಕಂಪನಿಯ ಡಾಕ್ಟರಲ್ಲಿ ಓಡಿದೆ. ಅವರು ಪರೀಕ್ಷಿಸಿ ಎಂದರು, ಕೂದಲಿಗೆ ಡೈ ಹಾಕಿಕೊಂಡಿದ್ದೀರಾ? ಅದು ನಿಮಗೆ ಅಲರ್ಜಿ, ಎಂದವರು ಒಂದು ಬಾಟಲಿ ಐ ಡ್ರಾಪ್ ಕೊಟ್ಟರು. ಗುಣವಾಗುತ್ತೆ, ಬೇರೇನೂ ಬೇಡ, ಎಂದರು. ಎರಡು ವಾರಗಳ ನಂತರ ನನ್ನ ಕಣ್ಣಿನ ಸಮಸ್ಯೆ ಪರಿಹಾರವಾಯಿತು. ಆದರೆ ಡೈ ನನಗೆ ಆಗುವುದಿಲ್ಲ ಎಂಬುದನ್ನು ಅರಿಯಲು ಆರು ತಿಂಗಳು ಮತ್ತು ಎಂಟು ಸಾವಿರ ರೂಪಾಯಿಗಳು ಬೇಕಾದವು ಎಂಬುದನ್ನು ಮರೆಯುವಂತಿಲ್ಲ.

ನನ್ನ ಕಣ್ಣಿಗೆ ಸರ್ಜರಿ ಬೇಕು ಎಂದು ವೈದ್ಯರು ಯಾಕೆ ಹೇಳಿದರು ಎಂಬುದು ನನಗೆ ಇನ್ನೂ ಅರ್ಥವಾಗಲಿಲ್ಲ.

# ಸಂಡಿಗೆ ರುಚಿ

**- ಹಾ.ಮ್ಯೆ. ಸೂರಿ**

**ಮೊ**ನ್ನೆ ನಮ್ಮ ಮನೆಗೆ ದಿನಸಿ ಅಂಗಡಿಯೋರು ನಾನು ಬರೆದು ಕೊಟ್ಟಿದ್ದ ದಿನ ನಿತ್ಯದ ಸಾಮಾನುಗಳ ಪಟ್ಟಿ ಜೊತೆ, ಎಲ್ಲ ಸಾಮಾನುಗಳನ್ನೂ ಪ್ಯಾಕ್ ಮಾಡಿ, ನಮ್ಮ ಮನೆಗೆ ತಂದು ಕೊಟ್ಟಿದ್ದರು.

''ಮೆಣಸಿನಕಾಯಿ, ಕಡ್ಲೆಬೇಳೆ ಇತ್ಯಾದಿ ಸಾಮಾನು ಪಟ್ಟಿ ನೋಡಿ, ಅದರ ದರ ಮತ್ತು ಒಟ್ಟು ಹಣ ಸರಿಯಾಗಿ ಬರೆದಿದ್ದಾರಾ ನೋಡಿ'' ಎಂದು ನಮ್ಮ ತಾತನವರಿಗೆ ಹೇಳುತ್ತಾ ಚೀಟಿಕೊಟ್ಟು ಮಡದಿ ಪ್ರೇಮಳತ್ತ ತಿರುಗಿ ನೋಡ್ತಾ ''ಸಾಮಾನುಗಳೆಲ್ಲ ಸರಿಯಾಗಿ ಬಂದಿದೆಯಾ ಅಂತ ಚೆಕ್ ಮಾಡು'' ಎಂದು ಹೇಳುತ್ತಾ ಆಫೀಸು ಕಡೆಗೆ ಧಾವಿಸಿದೆ.

ಮಾರ್ಚ್ ತಿಂಗಳ ಕಡೇ ದಿನ ಆಫೀಸಿನಲ್ಲಿ ಆ ವರ್ಷದ ಹಣಕಾಸು ವ್ಯವಹಾರ ಲೆಕ್ಕ ಪರಿಶೀಲನೆ ಇದ್ದುದರಿಂದ ತಡವಾಗಿ ಮನೆಗೆ ಬಂದೆ.

ಮನೆಗೆ ಬಂದ ತಕ್ಷಣ ನಮ್ಮ ತಾತನವರು ನನ್ನನ್ನು ಕರಾಟೆಗೆ ತೊಗೊಂಡ್ರು. ಸಾರಿ, ಕರಾಟೆ ಅಲ್ಲ ಥರಾಟೆಗೆ ತಗೊಂಡ್ರು!

''ಅಲ್ಲಯ್ಯಾ ನಾವೇನು ಮಾಂಸಹಾರಿಗಳೇ? ಪ್ಯೂರ್ ಸಸ್ಯಾಹಾರಿಗಳು ಕಣಯ್ಯಾ. ಅಂಗಡಿಯೋನು ಕಡ್ಲೆಬೇಳೆ. ಮೆಣಸಿನ ಕಾಯಿ, ಜೀರಿಗೆ, ಹರಳೆಣ್ಣೆ ಇತ್ಯಾದಿ ಜೊತೇಲಿ ಕಡೇ ಐಟಂ ಸಂಡಿಗೆ ಅರ್ಧ ಕೆ.ಜಿ. (ಫಿಶ್) ಅಂತ ಬರೆದು ಕಳಿಸಿದ್ದಾನೆ ಮೀನಂತೆ ಮೀನು!'' ಎಂದು ಕಿಡಿಕಾರಿದರು ತಾತ.

''ಈ ಸಸ್ಯಾಹಾರಿ ಉದ್ದಿನ ಹಪ್ಪಳದ ಹಿಟ್ಟಿನಲ್ಲಿ ಒಂದು ಹೊಸ ನಮೂನಿ ಚಕ್ರಾಕಾರ, ಬ್ಯಾಟಿನ ಆಕಾರ, ನಕ್ಷತ್ರದಾಕಾರ, ಮೀನಿನಾಕಾರವಾಗಿ ಸಂಡಿಗೆ ಎಂಬ ಹೆಸರಿಂದ ಚಿಕ್ಕ ಚಿಕ್ಕ ಮೀನಿನ ಆಕಾರದ್ದು ನಮಗೆ ಅಂಗಡಿಯೋರು ಕಳಿಸಿದ್ದಾರೆ. ಅಷ್ಟೇ!'' ಎಂದಾಗ ಎಲ್ಲರ ಮುಖದಲ್ಲೂ ಮಂದಹಾಸ ಮೂಡಿತ್ತು.

ಆ ರಾತ್ರಿ ನನ್ನ ಪ್ರಿಯೆ ಪ್ರೇಮ ಹುಚ್ಚೆಳ್ಳೆಣ್ಣೇಲಿ ಕರಿದ ಆ ಸಂಡಿಗೆ ಬಕ ಪಕ್ಷಿಗಳಂತೆ ಭಕ್ಷಿಸಿ ''ಬಲು ರುಚಿಯಾಗಿದೆ'' ಎಂದು ಎಲ್ಲರೂ ಬಾಯಿ ಕಿಸಿದರು!

---

### ಏಟು ಎದಿರೇಟು

ಗಂಡ ಹೆಂಡತಿ ಕೋಪ ಮಾಡಿಕೊಂಡಿದ್ದರು. ಕಾರಿನಲ್ಲಿ ಹೋಗುತ್ತಿದ್ದರು ಮಾತಿಲ್ಲ ಕತೆಯಲ್ಲ. ಅವನು ಶುರು ಮಾಡಲಿ ಎಂದು ಇವಳೂ ಅವಳೇ ಮಾಡಲಿ ಎಂದು ಇವನ ಹಠ. ಮಾರ್ಗ ಮಧ್ಯದಲ್ಲಿ ಕತ್ತೆಗಳ ಹಿಂಡು ಕಂಡಿತು. ಅದರತ್ತ ನೋಡುತ್ತಾ ಗಂಡ ವ್ಯಂಗ್ಯವಾಗಿ 'ನಿಮ್ಮ ಬಂಧುಗಳು' ಎಂದ. ಆಗವಳು 'ಹೌದು ನನ್ನ ಇನ್ ಲಾಸ್' ಎಂದಳು. ಸ್ವಲ್ಪ ದೂರ ಹೋದ ನಂತರ ಗಂಡ ಮತ್ತೆ 'ನೋಡು ಒಂದು ಮೂಲಕ ಪ್ರಕಾರ ಹೆಂಗಸರು ಪ್ರತಿ ದಿನ 30,000 ಪದಗಳನ್ನು ಉಪಯೋಗಿಸುತ್ತಾರೆ. ಆದರೆ ನಾವುಗಳು 15,000 ಮಾತ್ರ' ಎಂದು ಗಂಡ ಪೇಪರ್ ಓದುತ್ತಾ ಹೆಂಡತಿಗೆ ಹೇಳಿದ.

'ಅದಕ್ಕೆ ಕಾರಣ ಏನೆಂದರೆ ನಾವು ನಿಮಗೆ ಹೇಳಿದ್ದೇ ಹೇಳಬೇಕು' ಎಂದಳು ಹೆಂಡತಿ.

'ಏನೆಂದಿ?' ಎಂದ ಗಂಡ.

# ಶವ...ಶವ...ಶಿವ ಶಿವ!

- ಎಂ.ಕೆ. ಭಾಸ್ಕರ ರಾವ್

**ಬೆಂ**ಗಳೂರು ಹವ್ಯಾಸಿ ರಂಗಭೂಮಿಯೊಂದಿಗೆ, ಅದರೊಂದಿಗಿನ ಸಂಬಂಧಕ್ಕೆ ಕಿಂಚಿತ್ ತೊಂದರೆಯೂ ಆಗದಂತೆ ಸಿನಿಮಾ ರಂಗದೊಂದಿಗೆ ಆತ್ಮೀಯ ಸಂಬಂಧ ನಂಟು ಸ್ನೇಹ... ವಗೈರೆ ವಗೈರೆ ಹೊಂದಿದ್ದ ನಮ್ಮ ಕಥಾನಾಯಕ ವೃತ್ತಿಯಲ್ಲಿ ಕ್ಯಾಮೆರಾಮನ್. ಅಂದರೆ ಸಿನಿಮಾಟೋಗ್ರಾಫರ್ ಎಂದರ್ಥವಲ್ಲ. ಅವರದೊಂದು ಫೋಟೋ ಸ್ಟುಡಿಯೋ ಇತ್ತು; ಅಲ್ಲಿ ಹೋದವರ ಫೋಟೋ ಕ್ಲಿಕ್ಕಿಸುವುದೇ ಅವರ ಮುಖ್ಯ ಉದ್ಯೋಗವಾಗಿತ್ತು. ಸಭೆ ಸಮಾರಂಭಗಳಿಗೆ ನಿಯೋಜಿಸಿದರೆ ಆಕರ್ಷಕವಾದ ಕಪ್ಪು-ಬಿಳುಪು ಚಿತ್ರ ತೆಗೆದುಕೊಡುತ್ತಿದ್ದರು. ಅದು ಅವರ ಜೀವನೋಪಾಯ.

> ''ಬೋ... ಮಕ್ಕಳ್ರಾ ಈ ರೋಲಾ ನನಗೆ ಕೊಡೋದು...''

ಅವರ ಕೈಯಲ್ಲಿ ಸ್ಸಾರಿ, ಕ್ಷಮಿಸಿ, ಕೊರಳಲ್ಲಿ ಸದಾ ಕಾಲವೂ ಸ್ಟಿಲ್ ಕ್ಯಾಮೆರಾ ನೇತು ಬಿದ್ದಿರುತ್ತಿತ್ತು. ವಿದೇಶೀ ನಿರ್ಮಿತ ಹ್ಯಾಸೆಲ್‌ಬ್ಲಾಡ್ ಕ್ಯಾಮೆರಾ ಅದು. ಅದರ ವಿಶೇಷವನ್ನು ಹೇಳಲೇಬೇಕು, ಇಲ್ಲವಾದರೆ ಕಥಾನಾಯಕನ ಆತ್ಮ ವಿಲಿವಿಲಿ ಒದ್ದಾಡಬಹುದು. ಚಂದ್ರಯಾನಿ ನೀಲ್ ಆರ್ಮ್‌ಸ್ಟ್ರಾಂಗ್ ತಮ್ಮ ಬಾಹ್ಯಾಕಾಶ ಯಾತ್ರೆಯಲ್ಲಿ ಹ್ಯಾಸೆಲ್‌ಬ್ಲಾಡ್ ಕ್ಯಾಮೆರಾ ಒಯ್ದಿದ್ದು ಅದರಿಂದ ತೆಗೆದ ಛಾಯಾಚಿತ್ರಗಳನ್ನು ಭೂಮಿಗೆ ಕಳಿಸಿದ್ದು ಒಂದು ಇತಿಹಾಸ. ಕಪ್ಪು-ಬಿಳುಪಿನ ಆ ದಿನಗಳಲ್ಲಿ ಇಡೀ ಬೆಂಗಳೂರಲ್ಲಿ ಉತ್ಕೃಷ್ಟ ದರ್ಜೆಯ ಈ ಮಾದರಿ ಕ್ಯಾಮೆರಾ ಹೊಂದಿದ್ದ ಕೆಲವೇ ಕೆಲವು ಫೋಟೋಗ್ರಾಫರುಗಳಲ್ಲಿ ಒಬ್ಬರು ನಮ್ಮ ಕಥಾನಾಯಕ(ಕನಾ). ಅವರು ತೆಗೆಯುತ್ತಿದ್ದ ಕಪ್ಪು-ಬಿಳುಪು ಚಿತ್ರಗಳಲ್ಲಿ ಒಂದು ಬಗೆಯ ವೈಶಿಷ್ಟ್ಯ ಇರುತ್ತಿತ್ತು. ಎಲ್ಲರೂ ಚಿತ್ರ ತೆಗೆಯುತ್ತಾರೆ ಆದರೆ ಇವರು ಮಾತ್ರ ಆ ಚಿತ್ರಗಳಲ್ಲೇ ಕಲಾವಂತಿಕೆ ಮೆರೆಯುತ್ತಾರೆ ಎಂಬ ಖ್ಯಾತಿ ಪ್ರಚಾರದಲ್ಲಿತ್ತು. ಎಂದೇ ಅವರು ಸ್ನೇಹ ವಲಯದಲ್ಲಿ ಆಚಾರ್ಯಪುರುಷ ಎನಿಸಿದ್ದರು.

ಅವರ ಆಳ್ತನ ಹೇಳಿಕೊಳ್ಳುವಂಥದ್ದೇನೂ ಆಗಿರಲಿಲ್ಲ. ಹತ್ತಿಪ್ಪತ್ತು ಜನರ ನಡುವೆ ಅವರು ಕಾಣಿಸುತ್ತಲೂ ಇರಲಿಲ್ಲ. ಅಬ್ಬಬ್ಬಾ ಎಂದರೆ ಐದು ಅಡಿ ಎತ್ತರದ ಮನುಷ್ಯ. ಜನರ ನಡುವೆ ಕಳೆದುಹೋಗುವಂಥ ವ್ಯಕ್ತಿತ್ವ. ಆದರೆ ಸಂಜೆಯ ''ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ'' ಮಾತ್ರ ಅವರದು ಸಕ್ರಿಯ ಪಾತ್ರ. ಅವರು ಇರಿಸಿಕೊಂಡಿದ್ದ ಒಡನಾಟದ ಕಾರಣವಾಗಿ ಅವರಿಗೆ ರಂಗಭೂಮಿ ಮತ್ತು ಸಿನಿಮಾ ಕ್ಷೇತ್ರದ ಬಹುತೇಕ ಎಲ್ಲರೂ ಗೊತ್ತಿತ್ತು. ಅನೇಕರ ವಿಚಾರದಲ್ಲಿ ಅದು ಒನ್ ವೇ. ''ನನಗೆ ಸೋನಿಯಾ ಗಾಂಧಿಯೂ ಗೊತ್ತು ಆದರೆ ಅವರಿಗೆ ನಾನು ಗೊತ್ತೋ ಇಲ್ಲವೋ ಹೇಳಲಾರೆ'' ಎಂದಂತೆ. ''ಕನಾ'' ಹೊಂದಿದ್ದ ಗುರುತು ಪರಿಚಯ ಸ್ನೇಹ ಖಂಡಿತವಾಗಿಯೂ ಒನ್ ವೇ ಆಗಿರಲಿಲ್ಲ. ರಂಗಭೂಮಿ, ಸಿನಿಮಾ ಕ್ಷೇತ್ರದ ಬೆಂಗಳೂರಿನಿಂದ ಹೊರಗೆ ನೆಲೆಸಿದ್ದವರಿಗೂ

ಇವರು ಗೊತ್ತಿತ್ತು. ಅದಕ್ಕೆ ದೊಡ್ಡ ಕಾರಣ ಅವರಿಗೆ ನೇತು ಬಿದ್ದಿದ್ದ ಇಂಪೋರ್ಟೆಡ್ ಕ್ಯಾಮೆರಾ!

ನಾಟಕಗಳಲ್ಲೂ ಚಿಕ್ಕಪುಟ್ಟ ಪಾತ್ರ ಮಾಡುತ್ತಿದ್ದ ಅವರಿಗೆ ಕೆಲವು ಸಿನಿಮಾಗಳಲ್ಲಿ ನಟಿಸುವ ಯೋಗವೂ ಒಲಿದಿತ್ತು. ಒಬ್ಬ ನಿರ್ದೇಶಕರ ಸಿನಿಮಾದಲ್ಲಿ ಸ್ಟಿಲ್ ಕ್ಯಾಮೆರಾಮನ್ ಆಗಿದ್ದ ''ಕನಾ''ಗೆ ನಟಿಸುವ ಚಪಲ ಏಕದಂ ಜಾಸ್ತಿಯಾಗಿತ್ತು. ''ನನಗೊಂದು ರೋಲ್ ಕೊಡ್ರೀ'' ಎಂದು ನಿರ್ದೇಶಕರಿಗೆ ದುಂಬಾಲು ಬಿದ್ದರು. ಆ ನಿರ್ದೇಶಕರೂ ಇವರ ಸ್ನೇಹದ ಕ್ಲಬ್‌ನ ಸದಸ್ಯರೇ. ಆದರೆ ಕುಳ್ಳನಿಗೆ ಹೊಂದುವ ಪಾತ್ರ ಅವರ ಚಿತ್ರಕಥೆಯಲ್ಲಿರಲಿಲ್ಲ.

ಆಗಿನ ದಿನಗಳ ಕ್ಯಾಮೆರಾ ಈಗಿನಂತೆ ಡಿಜಿಟಲ್ ಆಗಿರಲಿಲ್ಲ. ಫೋಟೋ ತೆಗೆಯಬೇಕೆಂದರೆ ಫಿಲ್ಮ್ ರೋಲನ್ನು ಲೋಡ್ ಮಾಡಬೇಕಿತ್ತು. ಲೋಡ್ ಆದ ಫಿಲ್ಮ್‌ನ ಒಂದು ಫ್ರೇಮೂ ವ್ಯರ್ಥ ಆಗದಂತೆ ಜಾಗ್ರತೆಯಿಂದ ಫೋಟೋ ತೆಗೆದು ತೊಳೆಯಬೇಕಿತ್ತು. ನೆಗೆಟಿವ್ ತೆಗೆದು ಪ್ರಿಂಟ್ ಹಾಕಬೇಕಿತ್ತು. ಆ ನಿರ್ದೇಶಕ ಮಹಾಶಯ, ಪಾತ್ರ ಬೇಡಿದ ಸ್ಟಿಲ್ ಫೋಟೋಗ್ರಾಫರ್ ''ಕನಾ'' ಕೈಗೆ ನಾಲ್ಕು ಫಿಲ್ಮ್ ರೋಲುಗಳನ್ನಿತ್ತು ''ಇನ್ನು ರೋಲ್ ಕೇಳಬೇಡಿ'' ಎಂದಿದ್ದುದು ಹಲವಾರು ದಿವಸ ಸರ್ದಾರ್ಜಿ ಜೋಕಿನಂತೆ ಚಲಾವಣೆಯಲ್ಲಿತ್ತು.

ಹೀಗೇ ದಿನ, ತಿಂಗಳು, ವರ್ಷ ಕಳೆದು ಹೋಯಿತು. ಈ ಅವಧಿಯಲ್ಲಿ ಒಂದೆರಡು ಮೂರು ನಾಟಕಗಳಲ್ಲಿ, ಒಂದೆರಡು ಸಿನಿಮಾಗಳಲ್ಲಿ ''ಕನಾ'' ಕಾಣಿಸಿಕೊಂಡರು. ಕಾಣಿಸಿಕೊಂಡರು ಎನ್ನಲು ಕೆಲವು ಪಾತ್ರಗಳಿಗೆ ಸಂಭಾಷಣೆಯೇ ಇರಲಿಲ್ಲ ಎನ್ನುವುದು ಕಾರಣ. ಆದರೆ ಅವರು ಎಂದೂ ಬೇಸರಪಟ್ಟುಕೊಂಡಿದ್ದನ್ನು ಯಾರೂ ನೋಡಲಿಲ್ಲ. ''ಸಂಭಾಷಣೆ ಇದ್ದರೂ ಸೈ ಇಲ್ಲದಿದ್ದರೂ ಸೈ, ನನಗೆ ಬರೋ ಸಂಭಾವನೆ ಬರ್ತದಲ್ಲ, ಅಷ್ಟು ಸಾಕು'' ಎಂದು ಸಿಗರೇಟು ಹಚ್ಚಿ ಖುಷಿಯಲ್ಲಿ ನಿಲ್ಲುತ್ತಿದ್ದರು.

ಹೀಗೇ ಕಾಲ ಸರಿಯುತ್ತಿತ್ತು. ಅದೊಂದು ಸಿನಿಮಾದಲ್ಲಿ ನಟಿಸುವಂತೆ ''ಕನಾ''ಗೆ ಕರೆಯು ಬಂತು. ''ನಮ್ಮ ಸಿನಿಮಾಕ್ಕೆ ಸ್ಟಿಲ್ ಫೋಟೋಗ್ರಾಫರ್ ಕೆಲಸವನ್ನೂ ಮಾಡಿ, ಒಂದು ಪುಟ್ಟ ಪಾತ್ರವಿದೆ ಅದನ್ನೂ ಮಾಡಿ'' ಎಂದು ನಿರ್ದೇಶಕರು ಹೇಳಿದಾಗ ಸ್ವರ್ಗದ ತುಣುಕೊಂದು ಅಂಗೈಗೇ ಬಂದು ಬಿದ್ದಂತೆ ''ಕನಾ'' ಸಂಭ್ರಮಿಸಿದರು. ಶೂಟಿಂಗ್ ಆರಂಭವಾಗಿ ಅರ್ಧದಷ್ಟು ಚಿತ್ರೀಕರಣ ಮುಗಿದೂ ಹೋಯಿತು. ಇವರ ಪಾತ್ರದ ಪ್ರಸ್ತಾಪವೇ ಇಲ್ಲ. ಸ್ಟಿಲ್ ಫೋಟೋಗ್ರಾಫರ್ ಎಂದ ಮೇಲೆ ಚಿತ್ರೀಕರಣ ಜಾಗದಲ್ಲಿ ದಿನವೂ ಇರಲೇಬೇಕು, ದಿನವೂ ನಿರ್ದೇಶಕರ ಮುಂದೆಯೇ ಇರಬೇಕು. ಆದರೂ ರೋಲ್ ಕೊಟ್ಟಿದ್ದನ್ನು ಮರೆತರೋ ಹೇಗೆ ಎಂಬ ಸಣ್ಣ ಗುಮಾನಿಯೂ ಅವರ ತಲೆಯ ಮೇಲಿದ್ದ ಕೆಲವೇ ಕೆಲವು ಕೂದಲುಗಳಲ್ಲಿ ಒಂದೆರಡಾದರೂ ಉದುರುವಂತೆ ಮಾಡಿತು.

ಹೀಗೇ ದಿನಗಳು ಉರುಳಿದ ನಂತರ ಅದೊಂದು ದಿವಸ ನಿರ್ದೇಶಕರು ''ಮೇಕಪ್ ಮ್ಯಾನ್‌ಗೆ ಹೇಳಿದ್ದೇನೆ, ಚಿತ್ರೀಕರಣಕ್ಕೆ ತಯಾರಾಗಿ'' ಎಂದರು. ಅದುವರೆಗೂ ತಮ್ಮ ಪಾತ್ರ ಏನೆಂದು ''ಕನಾ'' ಕೇಳಿರಲೇ ಇಲ್ಲ. ನಿರ್ದೇಶಕರು ಎಷ್ಟೆಂದರೂ ಹಳೇ ಸ್ನೇಹಿತ ಅದನ್ನೇನು ಕೇಳುವುದು ಎಂಬ ಭಾವನೆಯಲ್ಲಿದ್ದರು. ಶೂಟಿಂಗ್‌ಗೆ ತಯಾರಾಗುವಂತೆ ಹೇಳಿದಾಗಲೂ ಇವರು ಕೇಳುವ ಗೋಜಿಗೆ ಹೋಗಲಿಲ್ಲ. ಮೇಕಪ್ ಮುಗಿಯೋ ಹೊತ್ತಿಗೆ ಸಹಾಯಕ

ನಿರ್ದೇಶಕ ಬಂದು ಸಂಭಾಷಣೆ ಬರೆದ ಹಾಳೆ ಕೊಡುತ್ತಾನೆ, ಏನು ಸನ್ನಿವೇಶ ಎಂದು ಆಗ ಕೇಳಿದರಾಯಿತು ಎಂದು ಸುಮ್ಮನಾದರು.

ತಾವು ನಟಿಸಲಿರುವುದರಿಂದ ಸ್ಟಿಲ್ ತೆಗೆಯುವ ಕೆಲಸವನ್ನು ಸಹಾಯಕನಿಗೆ ವಹಿಸಿದ ''ಕನಾ'' ಮೇಕಪ್‌ಮ್ಯಾನ್ ಬಳಿ ಎದೆಯುಬ್ಬಿಸಿ ಬಿಜಯಂಗೈದರು. ಹಳೇ ಪರಿಚಯದಾತ, ಬನ್ನಿ ಸಾರ್ ಎಂದು ಬಲಿ ಅಡ್ಡೆಗೆ ಕುರಿಯನ್ನು ಕರೆಯುವಂತೆ ಕರೆದ. ಆ ಮೇಕಪ್ ಮ್ಯಾನ್ ಹೆಣವನ್ನು ಅಲಂಕಾರ ಮಾಡುವಂತೆ ''ಕನಾ'' ಮುಖವನ್ನು ಶೃಂಗರಿಸಿದ. ಕನ್ನಡಿಯಲ್ಲಿ ತಮ್ಮದೇ ಹೆಣಮೋರೆ ನೋಡಿಕೊಂಡ ''ಕನಾ'' ಬಾಯಿ ಬಿಡುವಷ್ಟರಲ್ಲೇ ಅಲ್ಲಿಗೆ ಬಂದ ಸಹಾಯಕ ನಿರ್ದೇಶಕ, ''ನಿಮಗೆ ಸಂಭಾಷಣೆ ಗಿಂಭಾಷಣೆಯೇನೂ ಇಲ್ಲ, ನೀವು ಆ ಚಟ್ಟದ ಮೇಲೆ ಮಿಸುಕಾಡದೆ ಉಸಿರಾಡದೆ ಮಲಗಿದರಾಯಿತು, ನಿಮ್ಮದು ಹೆಣದ ಪಾತ್ರ'' ಎಂದು ಬಾಂಬ್ ಇಟ್ಟ.

''ಕನಾ'' ಕಂಗಾಲಾದರು. ತಾವೇ ಬೇಡಿ ಪಡೆದ ಪಾತ್ರ. ಪಾಲಿಗೆ ಬಂದುದು ಪಂಚಾಮೃತ ಎಂದು ಚಟ್ಟದ ಮೇಲೆ ಮಲಗಿದರು. (ಮುಂದೆ ಹದಿನೈದು ವರ್ಷದ ನಂತರ ಅವರು ನಿಜಕ್ಕೂ ಹೆಣವಾಗಿ ಇಂಥದೇ ಚಟ್ಟದ ಮೇಲೆ ಮಲಗಿದರು. ಅದು ಬೇರೆ ವಿಷಯ) ಬೆಂಗಳೂರಿನ ಬ್ರಿಗೇಡ್ ರಸ್ತೆಯುದ್ದಕ್ಕೆ ಶವಯಾತ್ರೆ ನಡೆಯುವ ದೃಶ್ಯವನ್ನು ಸೆರೆ ಹಿಡಿಯಲು ಛಾಯಾಗ್ರಾಹಕರೊಂದಿಗೆ ನಿರ್ದೇಶಕರು ಎತ್ತರದ ಒಂದು ಕಟ್ಟಡದ ಮೇಲೆ ಸಜ್ಜಾಗಿ ನಿಂತಿದ್ದರು. ಮೆಗಾಫೋನ್‌ನಲ್ಲಿ ಅವರು ಸಲಹೆ ಸೂಚನೆ ಕೊಟ್ಟಂತೆ ಇಲ್ಲಿ ಕೆಳಗೆ ರಸ್ತೆಯಲ್ಲಿ ಸಹಾಯಕ ನಿರ್ದೇಶಕ ಪಾಲಿಸುತ್ತಿದ್ದ. ನೈಜವಾಗಿರಲಿ ಎಂದು ಹೆಣದ ಮೂಗಿನ ಎರಡೂ ಹೊರಳೆಗೆ ಹತ್ತಿಯನ್ನೂ ಇಟ್ಟಿದ್ದರಿಂದ ''ಕನಾ'' ಪಟ್ಟ ಫಜೀತಿ ಅಷ್ಟಿಷ್ಟಲ್ಲ. ಇಷ್ಟು ಸಾಲದೆಂಬಂತೆ ಮೇಲೆ ಬಿರು ಬಿಸಿಲು ಬೇರೆ!

ಉಸಿರಾಡಬಾರದು. ಆಡಿದರೂ ಕಾಣಿಸಬಾರದು. ಕಣ್ಣೆವೆಗಳನ್ನು ಗಟ್ಟಿಯಾಗಿ ಮುಚ್ಚಿರಬೇಕು. ಮುಚ್ಚಿದ ಕಣ್ಣೊಳಗಿನ ಪಾಪೆ ಅತ್ತಿತ್ತ ಆಡಬಾರದು, ನಮ್ಮ ''ಕನಾ''ಗೋ ಹೊಟ್ಟೆ ತುಸು; ತುಸು ಏನು ಹೆಚ್ಚೇ ಎನ್ನಬಹುದಾದಷ್ಟು ಜಾಸ್ತಿ. ಕುಡಿದೂ ಕುಡಿದೂ ತಿಂದೂ ತಿಂದೂ ಪ್ರೀತಿಯಿಂದ ಆರೈಕೆ ಮಾಡಿ ಬೆಳೆಸಿದ ಹೊಟ್ಟೆ. ಸಿಗರೇಟನ್ನು ಪುಸಪುಸ ಒಂದರ ಬಳಿಕ ಒಂದನ್ನು ಎಳೆಯುತ್ತಿದ್ದ ''ಕನಾ'' ತಲೆ ಚಿಟ್ಟೆದ್ದು ಹೋಯಿತು. ನೆಟ್ಟಗೆ ಉಸಿರಾಡುವಂತಿಲ್ಲ. ಹೊಳ್ಳೆಯೊಳಗಿನ ಅರಳೆ ಗಾಳಿಗೆ ಅತ್ತಿತ್ತ ಆಡುತ್ತ ಒಳಗೆ ಮಾಡುವ ಕಿರಿಕಿರಿ, ಅಬ್ಬಬ್ಬಾ ಆ ಇಪ್ಪತ್ತು ನಿಮಿಷ ಎನ್ನುವುದು ಹತ್ತು ಯುಗದ ಅನುಭವವನ್ನು ''ಕನಾ''ಗೆ ಕಟ್ಟಿಕೊಟ್ಟಿತು.

ಶಾಟ್ ಒಕೆ, ಕಟ್ ಎಂದು ನಿರ್ದೇಶಕ ಅರಚಿದ್ದೇ ತಡ, ಧಿಗ್ಗನೆ ಶವಪಟ್ಟ ಕಳಚಿಕೊಂಡೆದ್ದ ''ಕನಾ'' ''ಬೋ... ಮಕ್ಕಳ್ರಾ ಈ ರೋಲಾ ನನಗೆ ಕೊಡೋದು...'' ಎಂದರಚುತ್ತ ಒಂದಿಷ್ಟು ಹೊತ್ತು ಸೀನು ಸೃಷ್ಟಿಸಿಬಿಟ್ಟರು. ''ಕನಾ'' ಸ್ವಭಾವ ಗೊತ್ತಿದ್ದ ನಿರ್ದೇಶಕರು ''ಬಿಡಯ್ಯ ಇದೇ ನನ್ನ ಕೊನೆ ಸಿನಿಮಾನಾ'' ಎಂದು ಅರಚುತ್ತಿದ್ದ ಬಾಯನ್ನು ಮುಚ್ಚಿಸಿದರು. ಅದೇ ಕೊನೆ ಈ ನಮ್ಮ ಕಥಾನಾಯಕ ಮತ್ತೆ ಪಾತ್ರ ಬೇಡಿದ್ದು ಗೊತ್ತಾಗಲಿಲ್ಲ. ಆ ನಿರ್ದೇಶಕರು ನಂತರದಲ್ಲೂ ಮೂರ್ನಾಲ್ಕು ಸಿನಿಮಾ ಮಾಡಿದರು. ಆದರೆ ಅದರಲ್ಲಿ ನಮ್ಮ ಕಥಾ ನಾಯಕ ''ನಟಿಸಲೂ'' ಇಲ್ಲ!